ಅಲ್ಲಮನ ವಚನಗಳಲ್ಲಿ ಆಚರಣೆಗಳ

ಎಸ್. ನಾಗರತ್ನ

ಮಾರ್ಗದರ್ಶಕರು

ಕಿ.ರಂ. ನಾಗರಾಜ

ಕಾವ್ಯಮಂಡಲ
ಕನ್ನಡ ವಿಶ್ವವಿದ್ಯಾಲಯದಿಂದ ಮಾನ್ಯತೆ ಪಡೆದಿರುವ ಸಂಸ್ಥೆ
೧೩/೪೫, ರಾಷ್ಟ್ರೀಯ ವಿದ್ಯಾಲಯ ರಸ್ತೆ, ಬಸವನಗುಡಿ,
ಬೆಂಗಳೂರು - ೫೬೦ ೦೦೪

೨೦೦೭

593

ದೃಢೀಕರಣ ಪತ್ರ

ಎಸ್. ನಾಗರತ್ನ ಅವರು "**ಅಲ್ಲಮನ ವಚನಗಳಲ್ಲಿ ಆಚರಣೆಗಳ ನಿರಾಕರಣೆಯ ನೆಲೆಗಳ ಶೋಧ**" ಎಂಬ ಶೀರ್ಷಿಕೆಯ ನಿಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಭಾಷೆ ಮತ್ತು ಸಾಹಿತ್ಯ ನಿಕಾಯಕ್ಕೆ ಎಂ.ಫಿಲ್ ಪದವಿಗಾಗಿ ಸಲ್ಲಿಸುತ್ತಿರುವ ಈ ನಿಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲ ಎಂದು ದೃಢೀಕರಿಸುತ್ತೇನೆ.

ಕಿ.ರಂ. ನಾಗರಾಜ

ದಿನಾಂಕ :

ಸ್ಥಳ : ಬೆಂಗಳೂರು

ಪ್ರಮಾಣ ಪತ್ರ

"ಅಲ್ಲಮನ ವಚನಗಳಲ್ಲಿ ಆಚರಣೆಗಳ ನಿರಾಕರಣೆಯ ನೆಲೆಗಳ ಶೋಧ" ಎಂಬ ಶೀರ್ಷಿಕೆಯ ಈ ನಿಬಂಧವನ್ನು ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಭಾಷೆ ಮತ್ತು ಸಾಹಿತ್ಯ ನಿಕಾಯಕ್ಕೆ ಸಲ್ಲಿಸಲು ಪ್ರೊ. ಕಿ.ರಂ. ನಾಗರಾಜ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ.

ಪ್ರಸ್ತುತ ನಿಬಂಧದ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಲಿ ಅಥವಾ ಇತರ ಉದ್ದೇಶಗಳಿಗಾಗಲಿ ಬಳಸಿಕೊಂಡಿಲ್ಲ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ದಿನಾಂಕ : ಎಸ್. ನಾಗರತ್ನ

ಸ್ಥಳ : ಬೆಂಗಳೂರು

593

ಪರಿವಿಡಿ

ಅಧ್ಯಾಯ - ೧

ಆಚರಣೆಗಳ ಅರ್ಥ ಮತ್ತು ವ್ಯಾಪ್ತಿ

೧. ಆಚರಣೆಯ ಅರ್ಥ

೨. ಮತೀಯ ಸಂಸ್ಕಾರದಿಂದ ಆಚರಣೆ

೩. ಆಚಾರಗಳು ಮತ್ತು ಸಾಮಾಜಿಕತೆ

೪. ಧಾರ್ಮಿಕ ನಂಬಿಕೆ ಮತ್ತು ಆಚರಣೆಗಳು

೫. ಆಚರಣೆಗಳ ಸ್ವರೂಪ

ಅಧ್ಯಾಯ - ೧

ಆಚರಣೆಗಳ ಅರ್ಥ ಮತ್ತು ವ್ಯಾಪ್ತಿ

೧. ಆಚರಣೆಯ ಅರ್ಥ

ಅಲ್ಲಮಪ್ರಭುವಿನ ವಚನಗಳಲ್ಲಿ ಆಚರಣೆಗಳ ನಿರಾಕರಣೆ ಎಂಬ ವಿಷಯವನ್ನು ಕುರಿತು ಅಧ್ಯಯನ ಮಾಡುವ ಈ ಸಂದರ್ಭದಲ್ಲಿ ಮೊದಲು ಆಚರಣೆ ಎಂದರೇನು? ಅದರ ಅರ್ಥ ಮತ್ತು ವ್ಯಾಪ್ತಿಯ ಬಗ್ಗೆ ತಿಳಿಯುವುದು ಅಗತ್ಯ.

ಆಚರಣೆ ಎಂಬ ಪದವು ಆಚಾರ ಎಂಬ ನಾಮಪ್ರಕೃತಿಯಿಂದ ಸಿದ್ಧವಾದ ಕ್ರಿಯಾರೂಪ. ಆಚಾರ ಎಂಬುದು ವ್ಯಕ್ತಿಯು ತನ್ನ ಮತ ಸಂಬಂಧವಾದ ನೀತಿ ನಿಯಮಗಳಿಂದ ತನ್ನ ದಿನನಿತ್ಯದ ಬದುಕಿನಲ್ಲಿ ಅಳವಡಿಸಿಕೊಳ್ಳಲೇಬೇಕಾದ ಕಟ್ಟುಪಾಡುಗಳು, ಸಂಪ್ರದಾಯಗಳು ಆಚಾರವನ್ನು "ಒಳ್ಳೆಯ ನಡತೆ" ಎಂಬರ್ಥದಲ್ಲಿಯೂ ಬಳಸುವುದುಂಟು. ಉದಾಹರಣೆಗೆ "ಆಚಾರವಿಲ್ಲದ ನಾಲಿಗೆ, ನಿನ್ನ ನೀಚಬುದ್ಧಿಯ ಬಿಡು ನಾಲಿಗೆ" ಎಂಬ ದಾಸರ ಪದ, "ಆಚಾರವೇ ಸ್ವರ್ಗ, ಅನಾಚಾರವೇ ನರಕ" ಎಂಬ ಬಸವಣ್ಣನವರ ವಚನದ ವಾಕ್ಯಗಳು; ಒಳ್ಳೆಯ ನಡತೆ ಎಂಬರ್ಥದಲ್ಲಿ ಆಚಾರ ಎಂಬ ಪದವನ್ನು ಬಳಸಿಕೊಂಡಿರುವುದನ್ನು ಪ್ರತಿಪಾದಿಸುತ್ತವೆ.

> ನಿಘಂಟಿನ ದೃಷ್ಟಿಯಲ್ಲಿ ಆಚಾರ ಎಂಬ ಪದದ ಅರ್ಥವೇನೆಂದು ತಿಳಿಯೋಣ. "ಆಚಾರ - ವಿಚಾರ ಎಂದರೆ ಒಂದು ಜನಾಂಗ ಅಥವಾ ಪಂಗಡಕ್ಕೆ ಸಂಪ್ರದಾಯವಾಗಿ ಬೆಳೆದು ಬಂದಿರುವ ಆಚಾರಣೆಯ ಪದ್ಧತಿ ಮತ್ತು ಸಂಪ್ರದಾಯವಾಗಿ ಬೆಳೆದು ಬಂದ ವಿಚಾರಗಳು."[೧]
>
> "ಆಚಾರ ಎಂದರೆ custom, usage, practice, an established rule of conduct."[೨]

೨. ಮತೀಯ ಸಂಸ್ಕಾರದಿಂದ ಆಚರಣೆ

ಆಚರಣೆಗಳನ್ನು ಮತ, ಧರ್ಮ, ಕುಲದೊಂದಿಗೆ ಬಳಸಲಾಗುತ್ತದೆ. ಮತಾಚಾರಗಳು, ಧರ್ಮಾಚರಣೆಗಳು, ಕುಲಾಚಾರಗಳು ಎಂಬ ಪದಗಳು ಬಳಕೆಯಲ್ಲಿರುವುದನ್ನು ನಾವು ಗಮನಿಸಬಹುದು. ಮತಾಚರಣೆಯು ಧರ್ಮಾಚರಣೆಗಿಂತ ಭಿನ್ನವಾದ ಪದವಾಗಿವೆ.

ಮತ ಎಂಬುದು ಧರ್ಮಕ್ಕಿಂತ ಭಿನ್ನವಾದ ಪದವಾಗಿದ್ದು ಅದು ಕಾಲಕಾಲಕ್ಕೆ ವಿಕಾಸ ಹೊಂದುತ್ತಾ ವಿವಿಧ ಅರ್ಥಗಳಲ್ಲಿ ಪ್ರಯೋಗಿಸಲ್ಪಟ್ಟಿದೆ. ಇಂದು ಮತವನ್ನು ಕುಲ ಅಥವಾ ಜಾತಿ ಸೂಚಕವಾಗಿ ಬಳಸಲಾಗುತ್ತಿದೆ.

> "ಮಿಂಚು ಮಳೆ ಮತ್ತು ಪ್ರವಾಹಗಳಂತಹ ಘಟನೆಗಳಲ್ಲಿ ಹಲವನ್ನೂ ವಿವರಿಸಲು ಆದಿಮಾನವನಿಗೆ ಸಾಧ್ಯವಾಗಲಿಲ್ಲ. ಆಗ ಅಂತಹ ಘಟನೆಗಳನ್ನು ನಿಯಂತ್ರಿಸಲು ಆತನು ಅನುಸರಿಸಿದ ವಿಲಕ್ಷಣ ಆಚರಣೆಗಳಿಗೆ ಮಾಯಮಂತ್ರವೆಂದು ಹೆಸರಾಯಿತು. ಆದ್ದರಿಂದ ಮತವು ಮಂತ್ರ - ತಂತ್ರದೊಂದಿಗೆ ಅನನ್ಯ ರೂಪ ಪಡೆಯಿತು."[೩]

> "ಅನಂತರ ಮತ ವಿಕಾಸದಲ್ಲಿ ಎರಡನೇ ಹಂತ ಪ್ರಾರಂಭವಾಯಿತು. ಆ ಹಂತದಲ್ಲಿ ನಂಬಿಕೆಗಳು, ಕರ್ಮಾಚರಣೆಗಳು, ಸಮಾರಂಭಗಳು, ಪ್ರಾರ್ಥನೆಗಳು ಮತ್ತು ಬಲಿಗಳೊಂದಿಗೆ ಮತವನ್ನು ಸಮೀಕರಿಸಲಾಯಿತು."[೪]

ಹೀಗೆ ವಿಕಾಸವಾದ ಆಚರಣೆಗಳು ವಿಶಾಲವಾದ ಅರ್ಥವ್ಯಾಪ್ತಿಯನ್ನು ಪಡೆದುಕೊಂಡಿದೆ. ಆದ್ದರಿಂದ ಆಚರಣೆಗಳು ವಿವಿಧ ರೀತಿಯಲ್ಲಿ ಪ್ರಚಲಿತವಾಗಿರುತ್ತವೆ. ಅವು ಮತೀಯ, ಧಾರ್ಮಿಕ, ರಾಜಕೀಯ, ಶೈಕ್ಷಣಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಎಂಬುದಾಗಿ ಗುರುತಿಸಲ್ಪಡುತ್ತವೆ. ಈ ಆಚರಣೆಗಳು ಹೇಗೆ ರೂಪುಗೊಂಡಿವೆ ಎಂಬುದಕ್ಕೆ ನಿಶ್ಚಿತವಾದ ಕಾರಣ ಹುಡುಕುವುದು ಕಷ್ಟಸಾಧ್ಯ. ನಮ್ಮ ನಂಬಿಕೆಗಳು, ಪುರಾಣಗಳು, ಧರ್ಮ, ಸಂಸ್ಕೃತಿ, ರಾಜಕೀಯ ವ್ಯವಸ್ಥೆ, ಸ್ವಾರ್ಥ, ಭಯ, ಭಕ್ತಿ ಮುಂತಾದ ಮನೋ ವ್ಯಾಪಾರಗಳು, ಕೆಲವು ವೇಳೆ ನಮ್ಮಲ್ಲಿರುವ ಅಜ್ಞಾನ, ಅನಕ್ಷರತೆ, ಮೌಢ್ಯತೆ ಇತ್ಯಾದಿ ಕಾರಣಗಳಿಂದಲೂ ಈ ಆಚರಣೆಗಳು ರೂಪುಗೊಂಡಿರಬಹುದು.

> "ಆತ್ಮನಲ್ಲಿ ನಂಬಿಕೆ, ದೇವರ ಪೂಜೆ, ತಪ್ಪು ಮಾಡುವ ಆತ್ಮನನ್ನು ಪ್ರಾರ್ಥನೆಗಳಿಂದ ಸರಿಪಡಿಸುವುದು, ಮತೀಯ ಸಮಾರಂಭಗಳು ಮತ್ತು ಬಲಿಗಳಿಂದ ದೇವರನ್ನು ಸಂತೃಪ್ತಿಗೊಳಿಸುವುದು ಇವುಗಳೇ ಮತ ಎಂಬುದಾಗಿ ನೆಲೆ ನಿಂತಿದೆ. ಈ ಸಂಬಂಧವಾದ ಆಚರಣೆಗಳೇ ಮತದ ಅರ್ಥ."[೫]

ಆಚರಣೆಗಳು ವಿವಿಧ ಜಾತಿಯ ಜನರು ರೂಢಿಸಿಕೊಂಡು ಬದುಕಿನ ಕ್ರಮವಾಗಿವೆ. ಆದ್ದರಿಂದ ಅವು ಸ್ತ್ರೀಯರಿಗೆ, ಪುರುಷರಿಗೆ, ಬೇರೆ ಬೇರೆಯಾಗಿರುತ್ತವೆ. ಅವು ಕಾಲದಿಂದ ಕಾಲಕ್ಕೆ, ಮನುಷ್ಯರ ಚಿಂತನೆಗಳು, ಆಲೋಚನೆಗಳು, ಭಾವನೆಗಳು ಬದಲಾದಂತೆ ಬದಲಾಗುತ್ತಿರುತ್ತವೆ. ಹೊಸ ರೂಪ ಪಡೆಯುತ್ತಿರುತ್ತವೆ. ಕೆಲವು ಆಚರಣೆಗಳು ರೂಢಿಯಿಂದ ಬಿಟ್ಟು ಹೋಗುತ್ತಿರುತ್ತವೆ. ಉದಾಹರಣೆಗೆ - ಪ್ರಾಚೀನ ಕಾಲದ ಗುರುಕುಲ ಶಿಕ್ಷಣ ಪದ್ಧತಿ, ಸತಿ ಪದ್ಧತಿ, ಅಸ್ಪೃಶ್ಯತಾ ಆಚರಣೆ ಇಂದು ಆಚರಣೆಯಲ್ಲಿಲ್ಲ.

ನಮ್ಮ ಸಮಾಜವು ಜಾತಿ ವ್ಯವಸ್ಥೆಯಿಂದ ಕೂಡಿದೆ. ಪ್ರಾಚೀನ ಕಾಲದಿಂದಲೂ ನಮ್ಮ ದೇಶದಲ್ಲಿ ಹಲವು ಜಾತಿಗಳು ಅಸ್ತಿತ್ವದಲ್ಲಿವೆ. ನಮ್ಮ ದೇಶದಲ್ಲಿ ಸುಮಾರು ೨೮೦೦ಕ್ಕೂ ಅಧಿಕವಾದ ಜಾತಿಗಳಿವೆ. ಪ್ರತಿಯೊಂದು ಜಾತಿಯ ಜನರೂ ತಮ್ಮದೇ ಆದ ಆಚಾರಗಳನ್ನು, ವಿಚಾರಗಳನ್ನು, ರೂಢಿ - ಸಂಪ್ರದಾಯಗಳನ್ನು, ವೇಷ - ಭೂಷಣಗಳನ್ನು, ನಂಬಿಕೆಗಳನ್ನು ವಿಶಿಷ್ಟವಾದ ಆಹಾರ ಪದ್ಧತಿಯನ್ನು ರೂಢಿಸಿಕೊಂಡಿದ್ದಾರೆ. ಈ ಜಾತಿ ಪದ್ಧತಿ ತನ್ನ ಸದಸ್ಯರ ಸಾಮಾಜಿಕ ಸಂಬಂಧಗಳ ಮೇಲೆ ನಿಯಂತ್ರಣವನ್ನು ಉಂಟುಮಾಡುವುದು. ದೈನಂದಿನ ಚಟುವಟಿಕೆಗಳನ್ನು ನಿಯಂತ್ರಿಸುವುದು, ಆದ್ದರಿಂದ ಜಾತಿ ಜಾತಿಗಳ ನಡುವೆ ಬಹಳಷ್ಟು ಅಂತರ ಕಂಡುಬರುವುದು.

ಒಂದೊಂದು ಜಾತಿಗೆ ನಿರ್ದಿಷ್ಟವಾದ ಕಟ್ಟುಪಾಡುಗಳು ನಿರ್ಮಿಸಲ್ಪಟ್ಟಿರುತ್ತವೆ. ಬ್ರಾಹ್ಮಣರಿಗೆ ಉಪನಯನದ ಆಚರಣೆ ಕಡ್ಡಾಯವಾಗಿರುತ್ತದೆ. ಅದು ಕೇವಲ ಗಂಡು ಮಕ್ಕಳಿಗೆ ಮಾತ್ರ ನಡೆಯುವ ಆಚರಣೆಯಾಗಿದೆ. ಅವೈದಿಕರಿಗೆ ಈ ಆಚರಣೆ ಇರುವುದಿಲ್ಲ. ಲಿಂಗಾಯತರು ಅಥವಾ ವೀರಶೈವರು ಜಂಗಮ ಪಾದಪೂಜೆಯನ್ನು ನಡೆಸುವ ಆಚರಣೆ ಇದೆ. ಇದನ್ನು ಇತರ ಜಾತಿಯ ಜನರು ಈಗೀಗ ಅನುಕರಣೆ ಮಾಡಿ ತಮ್ಮ ಗುರುಗಳ ಪಾದಪೂಜೆ ನಡೆಸುವ ಕ್ರಮ ಮದುವೆಗಳಲ್ಲಿ, ನಾಮಕರಣಗಳಲ್ಲಿ ಕಂಡುಬರುತ್ತಿದೆ.

> "The chief occations which traditionally require the presence of jangamas (or Aradhya) priests are the cermonies performed at the birth of a child, its naming about a fortnight after birth, the puberty maturation of a girl (first menstruation) marriage and death."[೬]

> "Most lingayath life-cycle rituals includes workship of the priest's feet."[೭]

ಪ್ರತಿಯೊಂದು ಸಮಾಜವೂ ತನ್ನದೇ ಆದ ವಿಶಿಷ್ಟ ರೂಪದ ಆಚಾರ ವಿಚಾರಗಳನ್ನು ರೂಢಿ ಸಂಪ್ರದಾಯಗಳನ್ನು ಮೌಲ್ಯ ಮತ್ತು ಆದರ್ಶಗಳನ್ನು ಹೊಂದಿರುತ್ತದೆ. ಹೀಗೆ ಸಮಾಜ ಹೊಂದಿರುವ ಆಚಾರ - ವಿಚಾರಗಳ ಸಮುಚ್ಚಯವನ್ನು ಸಂಸ್ಕೃತಿ ಎಂದು ಕರೆಯುವರು. ಸಂಸ್ಕೃತಿ ಮಾನವನ ಜೀವನ ವಿಧಾನದ ಪ್ರತೀಕ. ಜೀವನ ಕ್ರಮದ ಒರೆಗಲ್ಲು ಸಂಸ್ಕೃತಿ ನಮ್ಮ ನಡತೆಯನ್ನು, ದರ್ಶನವನ್ನು, ನೈತಿಕತೆಯನ್ನು ನಂಬಿಕೆಯ ಆಚರಣೆಗಳನ್ನು, ಮೌಲ್ಯಗಳನ್ನು, ಧಾರ್ಮಿಕ, ರಾಜಕೀಯ, ಆರ್ಥಿಕ ಚಟುವಟಿಕೆಗಳನ್ನು ಒಳಗೊಂಡಿರುತ್ತದೆ. ಒಟ್ಟಾರೆ ಮಾನವ ತನ್ನ ವ್ಯಕ್ತಿಗತ ಹಾಗೂ ಸಾಮಾಜಿಕವಾದ ಜೀವನಾನುಭವಗಳಿಂದ ಸಂಪಾದಿಸಿದ ಎಲ್ಲಾ ಅಂಶಗಳನ್ನು ಒಳಗೊಂಡಿರುತ್ತದೆ.

> "ನಂಬುಗೆಗಳು ಮತ್ತು ಕ್ರಿಯಾ ವಿಧಿಗಳು ಅಥವಾ ಮತಾಚರಣೆಗಳು ಇವು ಯಾವುದೇ ಧರ್ಮದಲ್ಲಿಯೂ ಕೂಡಾ ಕಾಣಬರುವ ಎರಡು ಮುಖ್ಯ ಅಂಗಗಳು. 'ನಂಬುಗೆ' ಎನ್ನುವುದು ಅತಿಲೌಕಿಕ ಅಥವಾ ಪವಿತ್ರ ಪ್ರಪಂಚಕ್ಕೆ ಸಂಬಂಧಿಸಿದ ನಂಬಿಕೆ, ಜ್ಞಾನ, ಶಿಕ್ಷಣ ಹಾಗೂ ತಾತ್ವಿಕ ವಿಚಾರಗಳನ್ನು ಕುರಿತಾದುದು. 'ಕ್ರಿಯಾವಿಧಿ' ಅಥವಾ 'ಮತಾಚರಣೆ' ಎಂಬುದು ಧರ್ಮದ ಪ್ರಾಯೋಗಿಕ ಕ್ಷೇತ್ರಕ್ಕೆ ಸಂಬಂಧಸಿದ್ದು. ಎಮ್. ಡೌಗ್ಲಾಸ್ ಹೇಳುವಂತೆ ಅವು ಪವಿತ್ರ ವಸ್ತುಗಳಿಗೆ ಸಂಬಂಧಿಸಿದ ಸಾಂಕೇತಿಕ ಕ್ರಿಯೆಗಳೇ ಆಗಿವೆ. ಕಿಂಗ್ಸ್‌ಲೇ ಡೇವಿಸ್‌ರವರ ಪ್ರಕಾರ ಅತಿಲೌಕಿಕವಾದ ವಸ್ತುಭಾವಗಳಿಗೆ ಮತ್ತು ಪವಿತ್ರ ವಸ್ತುಗಳಿಗೆ ಸಂಬಂಧಿಸಿದ ನಡತೆಯೇ ಧಾರ್ಮಿಕ ಕ್ರಿಯಾವಿಧಿಗಳೆನಿಸುತ್ತವೆ. ಇವು ಧಾರ್ಮಿಕ ಮನೋಭಾವಗಳನ್ನು ಸಾಂಕೇತಿಕವಾಗಿ ವ್ಯಕ್ತಪಡಿಸುವ ಸಾಧನಗಳು. ಅವು ವ್ಯಕ್ತಿಯ ಧಾರ್ಮಿಕ ನಂಬಿಕೆಗಳನ್ನು ಬಲಪಡಿಸುವುದರೊಂದಿಗೆ ಆತನ ಭಾವುಕತೆಯನ್ನು ಮತ್ತು ಭಾವಪರವಶತೆಯನ್ನು ಹೆಚ್ಚಿಸುವುದುಂಟು. 'ಸಂಸ್ಕಾರಗಳು' ಕೂಡಾ ಧರ್ಮದ ಎರಡನೆಯ ಅಂಗವೆನಿಸಿರುವ ಮತಾಚರಣೆಯ ವಿಭಾಗಕ್ಕೆ ಸೇರುವಂಥದ್ದು. ಆದಾಗ್ಯೂ ಹಿಂದೂಧರ್ಮದೊಂದಿಗೆ ಸೇರಿಕೊಂಡಿರುವ ಈ ಸಂಸ್ಕಾರಗಳಿಗೆ ತಮ್ಮದೇ ಆದ ವಿಶಿಷ್ಟ ಮಹತ್ವವಿದೆ."[೮]

ಹೀಗೆ ಮತಧರ್ಮಗಳಿಗೂ ಆಚರಣೆಗಳಿಗೂ ನಿಕಟವಾದ ಸಂಬಂಧವಿರುತ್ತದೆ. ಮತಧರ್ಮದ ಕಾರಣದಿಂದ ಆಚರಣೆಗಳು ಉಗಮಗೊಂಡು ಜನರ ಜೀವನದಲ್ಲಿ ಪ್ರಚಲಿತವಾಗಿರುತ್ತವೆ.

೩. ಆಚಾರಗಳು ಮತ್ತು ಸಾಮಾಜಿಕತೆ

ಆಚರಣೆಗಳು ಒಂದು ತಲೆಮಾರಿನಿಂದ ಮತ್ತೊಂದು ತಲೆಮಾರಿಗೆ ಸಂಸ್ಕಾರದ ರೂಪದಲ್ಲಿ ರವಾನಿಸಲ್ಪಡುತ್ತವೆ. ಪ್ರತಿಯೊಂದು ಸಮಾಜವೂ ತನ್ನ ಆಲೋಚನೆ, ಅಭಿಪ್ರಾಯ, ರೂಢಿಗತ ಮೌಲ್ಯಗಳು, ಆದರ್ಶಗಳನ್ನು ಒಳಗೊಂಡಿದ್ದು, ಅದನ್ನು ತನ್ನ ಮುಂದಿನ ಪೀಳಿಗೆಗೆ ಹಲವು ವಿಧಿ ವಿಧಾನಗಳ ಮೂಲಕ ಕಲಿಸುತ್ತದೆ. ಪ್ರತಿಯೊಂದು ಆಚರಣೆಯ ಹಿಂದೆ ಒಂದು ಉದ್ದೇಶ, ಚಿಂತನೆ, ಮೌಲ್ಯವಿರುತ್ತದೆ. ಕಾಲಕ್ರಮೇಣ ಆ ಉದ್ದೇಶ, ಮೌಲ್ಯ ಮರೆತುಹೋಗಿ ಕೇವಲ ಬಾಹ್ಯ ಆಚರಣೆ ಮಾತ್ರ ಉಳಿದುಕೊಂಡಿರುತ್ತದೆ. ಆದ್ದರಿಂದ ಕಣ್ಣಿಗೆ ಕಾಣುವ ಆಚರಣೆಯ ಹಿಂದೆ ಕಾಣದ ಒಂದು ವಿಚಾರ ಅಡಗಿರುತ್ತದೆ. ಆದ್ದರಿಂದ ಸಂಸ್ಕೃತಿಯನ್ನು ಅಭೌತ ಸಂಸ್ಕೃತಿ ಮತ್ತು ಭೌತ ಸಂಸ್ಕೃತಿ ಎಂದು ಎರಡು ಭಾಗವಾಗಿ ಗುರುತಿಸಲಾಗುತ್ತದೆ.

> "೧. **ಅಭೌತ ಸಂಸ್ಕೃತಿ (Non-Malivial culture) :** ಅಭೌತ ಸಂಸ್ಕೃತಿಯು ಮಾನವನ ಅಭೌತಿಕ ಸಂಪತ್ತನ್ನು ಪ್ರತಿನಿಧಿಸುವುದು. ಅಭೌತ ಸಂಸ್ಕೃತಿಯು ಅಮೂರ್ತ ಸ್ವರೂಪದ ಭಾಷೆ, ನಂಬಿಕೆ - ಆಚರಣೆಗಳು, ರೂಢಿ ಸಂಪ್ರದಾಯಗಳು ಲೋಕಾಚಾರ, ನೈತಿಕ ನಿಯಮಗಳು, ಮೌಲ್ಯಾದರ್ಶಗಳು, ಸಿದ್ಧಾಂತಗಳು, ಜೀವನ ದರ್ಶನ, ಕಲೆ, ಸಾಹಿತ್ಯ, ನೃತ್ಯ, ಆರ್ಥಿಕ, ಶೈಕ್ಷಣಿಕ ಸಂಸ್ಥೆಗಳು ಮುಂತಾದವುಗಳನ್ನು ಒಳಗೊಂಡಿದೆ. ಅಭೌತ ಸಂಸ್ಕೃತಿಯು ನಮ್ಮ ಸಭ್ಯತೆ, ಶಿಷ್ಟಾಚಾರ, ಅಭಿಪ್ರಾಯಗಳು, ಚಿಂತನೆಗಳು, ಮೌಲ್ಯಗಳು ಆಸಕ್ತಿ - ಅಭಿರುಚಿಗಳು, ಹವ್ಯಾಸಗಳು, ಮನೋರಂಜನಾ ವಿಧಾನಗಳು ಮುಂತಾದುವನ್ನು ಒಳಗೊಂಡಿದ್ದು ಮಾನವನ ಆಂತರಿಕ ಪ್ರಗತಿಗೆ ಸಂಬಂಧಿಸಿದ್ದಾಗಿದೆ. ಅಭೌತ ಸಂಸ್ಕೃತಿಯು ಒಂದು ಜನಾಂಗದ ಅಂತರಾತ್ಮವನ್ನು ಪ್ರತಿನಿಧಿಸುವುದೆಂದೇ ಹೇಳಬಹುದು."[೯]

> "೨. **ಭೌತ ಸಂಸ್ಕೃತಿ (Malivial culture) :** ಭೌತ ಸಂಸ್ಕೃತಿಯು ಮಾನವನ ಭೌತಿಕ ಸಂಪತ್ತನ್ನು ಪ್ರತಿನಿಧಿಸುವುದು. ಭೌತ ಸಂಸ್ಕೃತಿಯು ದೃಗೋಚರವಾದುದು ಮತ್ತು ಮೂರ್ತ ಸ್ವರೂಪದ, ಮಾನವನ ಬಳಕೆಯ ಅನೇಕಾನೇಕ ವಸ್ತುಗಳನ್ನು ಪ್ರತಿಬಿಂಬಿಸುವುದು."[೧೦]

> "ಎಡ್ವರ್ಡ್ ಬಿ. ಟೈಲರ್ ಎಂಬ ಬ್ರಿಟಿಷ್ ಮಾನವ ಶಾಸ್ತ್ರಜ್ಞನ ಅಭಿಪ್ರಾಯದಲ್ಲಿ ಸಂಸ್ಕೃತಿಯು ಜ್ಞಾನ, ನಂಬುಗೆ, ಕಲೆ, ನೈತಿಕ ನಿಯಮ, ಕಾನೂನು, ರೂಢಿ ಮತ್ತು ಮಾನವ ತನ್ನ ಸಮಾಜದ ಸದಸ್ಯನಾಗಿದ್ದುಕೊಂಡು ಸಾಧಿಸಿದ ಇನ್ನುಳಿದ ಸಾಮರ್ಥ್ಯಗಳನ್ನು, ನೈಪುಣ್ಯಗಳನ್ನು ಒಳಗೊಂಡಿರುವ ಅಖಂಡವಾದ ಒಂದು ಸಂಕೀರ್ಣ ವ್ಯವಸ್ಥೆ."[೧೧]

ಹೀಗೆ ಆಚರಣೆಗಳು ಸಾಮಾಜಿಕ ಪರಂಪರೆಯನ್ನು ಉಳಿಸಿ, ಬೆಳೆಸುವ ಮಾರ್ಗಗಳಾಗಿ ಸಮಾಜದಲ್ಲಿ ಆಳವಾಗಿ ಬೇರು ಬಿಟ್ಟಿವೆ. ಈ ಆಚರಣೆಗಳಿಂದ ವ್ಯಕ್ತಿಯ ಸ್ಥಾನಮಾನ, ಅಂತಸ್ತು, ಘನತೆ, ನಿರ್ಧಾರವಾಗುತ್ತದೆ. ಆದ್ದರಿಂದ

"ಧರ್ಮವು ನಂಬಿಕೆಯೊಡನೆ ಕೆಲವು ಕ್ರಿಯಾ ವಿಧಾನಗಳನ್ನು ಹೊಂದಿರುತ್ತದೆ. ಅವುಗಳ ಆಚರಣೆಯಿಂದಲೇ ಆತನ ಧಾರ್ಮಿಕ ನಂಬಿಕೆಯನ್ನು ಗುರುತಿಸಲಾಗುತ್ತದೆ. ದೇವರ ಪ್ರೀತ್ಯರ್ಥಕ್ಕಾಗಿ ಅವನ ದಯೆ ಮತ್ತು ಅಂತಃಕರುಣೆಗಳಿಗೆ ಪಾತ್ರರಾಗಲು ವಿವಿಧ ಧರ್ಮಾನುಯಾಯಿಗಳು ಪೂಜೆ, ಅರ್ಚನೆ, ಭಜನೆ, ಸ್ತುತಿ, ಆರಾಧನೆ, ಕೀರ್ತನೆ, ಧ್ಯಾನ, ಶ್ರವಣ, ಯೋಗ, ತಪಸ್ಸು ಮುಂತಾದ ಚಟುವಟಿಕೆಗಳಲ್ಲಿ ತೊಡಗಿರುತ್ತಾರೆ. ಸಮಾಜದಲ್ಲಿ ಪ್ರಚಲಿತವಿರುವ ಜಾತ್ರೆ, ಉತ್ಸವ, ಸಮಾರಂಭ, ಹಬ್ಬ, ಹುಣ್ಣಿಮೆ, ಶ್ರಾದ್ಧ, ಪುಣ್ಯತಿಥಿ, ಜಯಂತಿ ಮುಂತಾದವುಗಳ ಆಚರಣೆಗೆ ಧಾರ್ಮಿಕ ನಂಬಿಕೆಗಳೇ ಕಾರಣವಾಗಿರುತ್ತವೆ."[೧೪]

"ಕೆಲವೊಂದು ಆದಿವಾಸಿಗಳು ದೇವರು ಹಾಗೂ ಧರ್ಮದ ಹೆಸರಿನಲ್ಲಿ ವಿಚಿತ್ರವಾದ ಕ್ರಿಯಾಪದ್ಧತಿಯನ್ನು ಆಚರಿಸುತ್ತಾರೆ. ಆರಾಪೆಕ್ ಆದಿವಾಸಿಗಳು ಬೆಟ್ಟದ ಮೇಲಿಂದ ಬಂಡೆಗಳನ್ನು ಉರುಳಿಬಿಟ್ಟು ಅದರ ಗತಿಯ ಮೇಲಿಂದ ಮಳೆಯನ್ನು ನಿರ್ಧರಿಸುತ್ತಾರೆ. ನೀಲಗಿರಿಯ ತೊದವರು ದೇವರಿಗೆ ನೈವೇದ್ಯವೆಂದು ಸಾಂಪ್ರದಾಯಿಕ ವಿಧಿವಿಧಾನಗಳೊಂದಿಗೆ ಹೆಣ್ಣು ಮಗುವನ್ನು ಬಲಿಕೊಡುತ್ತಾರೆ. ಕೆಲವು ಆದಿವಾಸಿಗಳು ಜಾತ್ರೆ ಉತ್ಸವ ಮತ್ತು ಸಮಾರಂಭಗಳಲ್ಲಿ ಕುಲದೇವತೆಯ ಪ್ರೀತ್ಯರ್ಥಕ್ಕಾಗಿ ಪ್ರಾಣಿ ಪಶುಗಳನ್ನು ಬಲಿಕೊಡುವುದು ರೂಢಿಯಲ್ಲಿದೆ. ಈ ಪದ್ಧತಿಯು ನಾಗರಿಕ ಜನಾಂಗಗಳಲ್ಲಿಯೂ ಪ್ರಚಲಿತವಿರುವುದನ್ನು ಕಾಣುತ್ತೇವೆ."[೧೫]

ದೇವರು ಮತ್ತು ಧರ್ಮದ ಹೆಸರಿನಲ್ಲಿ ನಾವು ಹಲವು ಮಠ, ಮಂದಿರಗಳನ್ನು ನಿರ್ಮಾಣ ಮಾಡುತ್ತೇವೆ. ಮೂರ್ತಿ ಪೂಜೆ ಮಾಡುತ್ತೇವೆ. ಮರಣಾನಂತರ ಮೃತರ ಆತ್ಮಕ್ಕೆ ಸದ್ಗತಿ ದೊರೆಯಲಿ ಎಂದು ಅಂತ್ಯಸಂಸ್ಕಾರ, ಮರಣೋತ್ತರ ಸಂಸ್ಕಾರಗಳನ್ನು ಆಚರಿಸುತ್ತೇವೆ. ಸಮಾಧಿಗಳಿಗೆ ಪೂಜೆ, ಪ್ರಾರ್ಥನೆ ಸಲ್ಲಿಸುತ್ತೇವೆ. ಹೀಗೆ ಧಾರ್ಮಿಕ ಹಿನ್ನೆಲೆಯಲ್ಲಿ ಹಲವಾರು ಆಚರಣೆಗಳು ಪ್ರತಿಯೊಂದು ಸಮಾಜದಲ್ಲಿಯೂ ಪ್ರಚಲಿತದಲ್ಲಿರುವುದನ್ನು ಕಾಣಬಹುದಾಗಿದೆ.

"ಒಟ್ಟಿನಲ್ಲಿ ಎ. ಡಬ್ಲ್ಯೂ. ಗ್ರೀನ್‌ರು ಹೇಳುವಂತೆ ಧರ್ಮವು ಜ್ಞಾನಕ್ಕಿಂತಲೂ ನಂಬಿಕೆಗಳಿಗೆ ಪ್ರಾಧಾನ್ಯತೆ ಪಡೆದಿರುವ ನಂಬಿಕೆಗಳ, ಸಾಂಕೇತಿಕ ಆಚರಣೆಗಳ, ಕ್ರಿಯಾಕರ್ಮಗಳ ಸಂಕೀರ್ಣವಾದ ವ್ಯವಸ್ಥೆ ಆಗಿರುವುದು. ಈ ಸಾಧನೆಗಳ ಮುಖಾಂತರ ವ್ಯಕ್ತಿಯು ಅತಿ ಮಾನುಷ, ಅನಿಯಂತ್ರಿತ ಶಕ್ತಿಯೊಂದಿಗೆ ಬೆರೆಯಲು ಪ್ರಯತ್ನಿಸುತ್ತಾನೆ. ಮಾನವ ಸಮಾಜದಲ್ಲಿ ಅಸಂಖ್ಯಾತ ಜಾತಿ, ಮತ, ಪಂಥ, ಧರ್ಮಗಳಿವೆ. ಹಿಂದೂ, ಜೈನ, ಬೌದ್ಧ, ಸಿಖ್, ಮುಸ್ಲಿಂ ಕ್ರಿಶ್ಚಿಯನ್, ಯಹೂದಿ, ವೀರಶೈವ ಮುಂತಾದ ಧರ್ಮಾನುಯಾಯಿಗಳು ತಮ್ಮದೇ ಆದ ಕೆಲವೊಂದು ಕ್ರಿಯಾವಿಧಾನಗಳನ್ನು ಅನುಸರಿಸುತ್ತಾರೆ."[೧೬]

ಆಚರಣೆಗಳು ಧರ್ಮದ ಆಶ್ರಯದಲ್ಲಿ ಹುಟ್ಟಿ ಬೆಳೆದು ಅವು ಮಾನವನ ಜೀವನದಲ್ಲಿ ನಿರಂತರವಾಗಿ ಚಾಲನೆಯಲ್ಲಿರುತ್ತವೆ. ಧಾರ್ಮಿಕ ಶ್ರದ್ಧೆಯಿಂದ ಕೂಡಿದ್ದು, ಅವು ಬದುಕಿನಲ್ಲಿ ಹೆಚ್ಚು ಮಾನ್ಯತೆ ಗಳಿಸಿಕೊಂಡಿರುತ್ತವೆ. ಆದ್ದರಿಂದ ಆಚರಣೆಗಳಿಗೆ ಭಾವನಾತ್ಮಕವಾದ ಒಡನಾಟ ಬೆರೆತು ಕಟ್ಟುನಿಟ್ಟಾಗಿ ಪಾಲಿಸಲ್ಪಡುತ್ತವೆ. ಎಷ್ಟೇ ಕಷ್ಟದ ಪರಿಸ್ಥಿತಿಯಲ್ಲಿಯೂ, ಆಚರಣೆಗಳನ್ನು ಬಿಡಬಾರದೆಂಬ ಛಲ ಮಾನವನಲ್ಲಿ ಮೂಡಲು ಧರ್ಮದ ನಂಬಿಕೆ ಪ್ರೇರಣೆಯಾಗಿರುತ್ತದೆ. ಹೀಗೆ ಆಚರಣೆಗಳ ಅನುಷ್ಠಾನಕ್ಕೆ ಧಾರ್ಮಿಕ ನಂಬಿಕೆಯೂ ಒಂದು ಪ್ರಮುಖವಾದ ಅಂಶವಾಗಿರುತ್ತದೆ.

ಪ್ರತಿ ಜಾತಿಯ ಜನರೂ ತಮ್ಮ ತಮ್ಮ ಆಚರಣೆಗಳನ್ನು ಉಳಿಸಿಕೊಳ್ಳಲು ಹಾಗೂ ಮುನ್ನಡೆಸಲು ಪ್ರಯತ್ನಿಸುತ್ತಿರುತ್ತಾರೆ.

> "ಸಮಾಜದ ಪ್ರತಿಯೊಂದು ಕ್ಷೇತ್ರದಲ್ಲಿಯೂ ವ್ಯಕ್ತಿಯ ಜನನ, ವೃತ್ತಿ, ಆರ್ಥಿಕ, ಸ್ಥಿತಿಗತಿ ರಾಜಕೀಯ ಸ್ಥಾನಮಾನ, ಧಾರ್ಮಿಕ ಕ್ರಿಯಾವಿಧಿಗಳ ಆಚರಣೆ ಮುಂತಾದ ಸಂಗತಿಗಳ ಆಧಾರದಿಂದ ಸ್ತರ ವಿನ್ಯಾಸಗಳನ್ನು ಗಮನಿಸುತ್ತೇವೆ. ವ್ಯಕ್ತಿಯ ಜನನದ ಆಧಾರದಿಂದ ಜಾತಿ ಮತ್ತು ಉಪಜಾತಿಗಳು ಬೆಳೆದು ಬಂದಿರುತ್ತವೆ. ಮೇಲ್ಜಾತಿ, ಕೆಳಜಾತಿ, ಸ್ಪೃಶ್ಯ - ಅಸ್ಪೃಶ್ಯ ಎಂಬ ತಾರತಮ್ಯಗಳಿಗೆ ಜಾತಿ ವ್ಯವಸ್ಥೆಯೇ ಮೂಲ ಆಧಾರವಾಗಿದೆ."[೧೨]

ಈ ಜಾತಿ ವ್ಯವಸ್ಥೆಯನ್ನು ಭದ್ರವಾಗಿ ಉಳಿಸಿ ಬೆಳೆಸಿರುವುದು ಆಯಾ ಸಮಾಜದ ಜನರು ನಡೆಸಿಕೊಂಡು ಬರುತ್ತಿರುವ ಆಚರಣೆಗಳು. ಈ ಆಚರಣೆಗಳು ರೂಪುಗೊಳ್ಳಲು ಒಂದು ಸಾಮಾಜಿಕ ವರ್ಗದ ಜನರು ಅನುಸರಿಸುವ ವೃತ್ತಿ, ನಂಬಿಕೆ, ಜ್ಞಾನ, ಅನುಭವ, ತಿಳುವಳಿಕೆಯ ಮಟ್ಟ, ಪಡೆದ ಶಿಕ್ಷಣ, ಅವರು ವಾಸಿಸುತ್ತಿರುವ ಭೌತಿಕ ಪರಿಸರ ಇತ್ಯಾದಿ ಅಂಶಗಳು ಕಾರಣವಾಗಿರುತ್ತವೆ. ಒಟ್ಟಿನಲ್ಲಿ ಈ ಆಚರಣೆಗಳು ಸಾಮಾಜಿಕ ಪರಂಪರೆಯಾಗಿ ತಲೆಮಾರಿನಿಂದ ತಲೆಮಾರಿಗೆ ರವಾನಿಸಲ್ಪಡುತ್ತಿವೆ.

೪. ಧಾರ್ಮಿಕ ನಂಬಿಕೆ ಮತ್ತು ಆಚರಣೆಗಳು

> "ಧರ್ಮ ಎಂಬ ಶಬ್ದವು ಸಂಸ್ಕೃತದ 'ಧೃ' ಎಂಬ ಧಾತುವಿನಿಂದ ಹುಟ್ಟಿದೆ. 'ಧೃ' ಅಂದರೆ ಧರಿಸುವುದು. ಧಾರಣೆ ಮಾಡುವುದು. ಯಾವುದನ್ನೂ ಜೀವನದ ಅವಿಭಾಜ್ಯ ಅಂಗವೆಂದು ಪರಿಗಣಿಸಿ ಬದುಕಿನಲ್ಲಿ ಅಳವಡಿಸಿಕೊಳ್ಳಲಾಗಿದೆಯೋ ಅದೇ ಧರ್ಮ."[೧೩]

ಬೇರೆ ಬೇರೆ ಧರ್ಮಗಳು ಜೀವನದ ಅರ್ಥ ಮತ್ತು ಪುರುಷಾರ್ಥಗಳನ್ನು ವಿಧವಿಧವಾಗಿ ನಿರೂಪಿಸುತ್ತವೆ. ಹಿಂದೂ ಧರ್ಮದಲ್ಲಿ ಧರ್ಮಾರ್ಥ ಕಾಮ ಮೋಕ್ಷವೇ ಜೀವನದ ಪರಮ ಪುರುಷಾರ್ಥಗಳಾಗಿವೆ. ಮೋಕ್ಷ ಎಂದರೆ ಮುಕ್ತಿಯನ್ನು ಪಡೆಯುವುದು. ಹುಟ್ಟು - ಸಾವುಗಳೆಂಬ ಭವಬಂಧನದಿಂದ ಮುಕ್ತವಾಗುವುದೇ ಮೋಕ್ಷ ಎಂದು ಹಿಂದೂ ಧರ್ಮವು ಹೇಳುತ್ತದೆ. ಮುಕ್ತಿಯನ್ನು ಪಡೆಯಲು ಭಕ್ತಿಮಾರ್ಗ, ಜ್ಞಾನಮಾರ್ಗ, ಕರ್ಮಮಾರ್ಗಗಳೆಂಬ ಮೂರು ವಿಧಾನಗಳನ್ನು ಹಿಂದೂ ಧರ್ಮದಲ್ಲಿ ಪ್ರತಿಪಾದಿಸಲಾಗಿದೆ. ಮುಕ್ತಿಯ ಪಥವನ್ನು ತೋರಿಸುವುದು ಧರ್ಮದ ಮತ್ತೊಂದು ಪ್ರಮುಖ ಕಾರ್ಯ.

ಬದುಕಿನ ಅಂತಿಮ ಮತ್ತು ಸರ್ವೋತ್ಕೃಷ್ಟವಾದ ಉದ್ದೇಶ ಸದ್ಗತಿ ಅಥವಾ ಮೋಕ್ಷದ ಗಳಿಕೆ. ಅದನ್ನು ಪಡೆಯಲೇಬೇಕೆಂಬ ಆಸೆ ಪ್ರತಿಯೊಬ್ಬ ಧರ್ಮೀಯನಲ್ಲೂ ಇರುತ್ತದೆ. ಆದ್ದರಿಂದ ಈ ಮುಕ್ತಿಯನ್ನು ಪಡೆಯುವ ಸಲುವಾಗಿ ಪ್ರತಿ ಧರ್ಮೀಯನೂ ಹಲವು ರೀತಿಯ ನಂಬಿಕೆಗಳನ್ನು ಹೊಂದಿದ್ದು, ಅವುಗಳನ್ನು ಆಚರಿಸಲು ಪ್ರಯತ್ನಿಸುತ್ತಾನೆ. ಈ ಕಾರಣದಿಂದ ಕೆಲವು ರೀತಿಯ ಆಚರಣೆಗಳು ಬದುಕಿನಲ್ಲಿ ಬಳಕೆಯಾಗುತ್ತಿರುತ್ತವೆ. ಈ ಆಚರಣೆಗಳು ದೇವರು, ಧರ್ಮ, ಪಾಪ - ಪುಣ್ಯ, ಸ್ವರ್ಗ - ನರಕ ಎಂಬ ಹಲವು ನಂಬಿಕೆಗಳ ಹಿನ್ನೆಲೆಯಲ್ಲಿ ರೂಪುಗೊಂಡಿರುತ್ತವೆ.

೫. ಆಚರಣೆಗಳ ಸ್ವರೂಪ

ಆಚರಣೆಗಳ ವೈಶಿಷ್ಟ್ಯಗಳನ್ನು, ಲಕ್ಷಣಗಳನ್ನು ಕೆಳಕಂಡಂತೆ ಪಟ್ಟಿ ಮಾಡಬಹುದು.

೧. ಆಚರಣೆಗಳು ಕಟ್ಟುಪಾಡುಗಳನ್ನು ನಿರ್ಮಿಸುತ್ತವೆ.

೨. ಆಚರಣೆಗಳು ಸಂಕುಚಿತ ಮನೋಭಾವದಿಂದ ಕೂಡಿರುತ್ತವೆ.

೩. ಇವು ಮಾನವನ ವಿಚಾರ ಶಕ್ತಿಯನ್ನು ಮೊಟಕುಗೊಳಿಸುತ್ತವೆ.

೪. ಆಚರಣೆಗಳು ಭಾವನೆಯ ಮೇಲೆ, ಮನಸ್ಸಿನ ಮೇಲೆ ಗಾಢವಾದ ಪ್ರಭಾವ ಬೀರುತ್ತವೆ.

೫. ಆಚರಣೆಗಳಿಂದ ವ್ಯಕ್ತಿಯು ತನ್ನ ಆತ್ಮಶಕ್ತಿಯನ್ನು ಸ್ವಾತಂತ್ರ್ಯವನ್ನು ಕಳೆದುಕೊಳ್ಳುವ ಸಾಧ್ಯತೆಯಿರುತ್ತದೆ.

೬. ಆಚರಣೆಗಳು ಜನರನ್ನು ಒಗ್ಗೂಡಿಸಲು ನೆರವಾಗುತ್ತವೆ. ಹಾಗೆಯೇ ಇತರ ಗುಂಪಿನಿಂದ ಬೇರ್ಪಡಿಸುವ ಶಕ್ತಿಯೂ ಆಗಬಹುದು.

೭. ಆಚರಣೆಗಳ ನಿರ್ಮಾಣದಲ್ಲಿ ಸ್ವಜನ ಪಕ್ಷಪಾತ, ಲಿಂಗ ರಾಜಕಾರಣ, ಸ್ವಾರ್ಥ ಅವ್ಯಕ್ತವಾಗಿ ಕೆಲಸ ಮಾಡುತ್ತಿರುತ್ತದೆ.

೮. ಆಚರಣೆಗಳು ಬಂಧನವನ್ನು ನಿರ್ಮಿಸುತ್ತವೆ.

೯. ಯುವ ಪೀಳಿಗೆಯನ್ನು ಸಮಾಜಕ್ಕೆ ಬದ್ಧರನ್ನಾಗಿ ಮಾಡುತ್ತವೆ.

೧೦. ಯುವಕರ ವರ್ತನೆಯನ್ನು ನಿಯಂತ್ರಿಸಿ, ತಮಗೆ ಬೇಕಾದ ಹಾಗೆ ಅವರ ವ್ಯಕ್ತಿತ್ವವನ್ನು ಚಾರಿತ್ರ್ಯವನ್ನು ರೂಪಿಸಲು ನೆರವಾಗುತ್ತವೆ.

ಹೀಗೆ ಆಚರಣೆಗಳು ತಮ್ಮದೇ ಆದ ವಿಶಿಷ್ಟ ಸ್ವರೂಪವನ್ನು ಪಡೆದು ಸಮಾಜದಲ್ಲಿ ವ್ಯಾಪಕವಾಗಿ ಬಳಕೆಯಾಗಿ, ಸಾಮಾಜಿಕ ನಿಯಂತ್ರಣದ ಸಾಧನದಂತೆ ಕಾರ್ಯ ನಿರ್ವಹಿಸುತ್ತವೆ. ಆಚರಣೆಗಳು ಮತೀಯವಾಗಿ, ಧಾರ್ಮಿಕ ನಂಬಿಕೆಗಳಾಗಿ, ಸಾಮಾಜಿಕ ಪರಂಪರೆಯ ಸಾಧನವಾಗಿ ಹಾಗೂ ಸಂಸ್ಕೃತಿಯ ಭಾಗವಾಗಿ ವಿವಿಧ ನೆಲೆಗಳಲ್ಲಿ, ವಿಧಗಳಲ್ಲಿ ಜನರ ಜೀವನದಲ್ಲಿ ಹಾಸುಹೊಕ್ಕಾಗಿವೆ. ಈ ಆಚರಣೆಗಳು ಪ್ರಾಚೀನ ಕಾಲದಿಂದಲೂ ಸಮಾಜದಲ್ಲಿ ಅಸ್ತಿತ್ವದಲ್ಲಿವೆ. ವಿವಿಧ ಜಾತಿಗಳಲ್ಲಿ, ಮತ ಪಂಥಗಳಲ್ಲಿ ಸಂಪ್ರದಾಯವಾಗಿ ರೂಪುಗೊಂಡು ಬಳಕೆಯಾಗುತ್ತಿವೆ. ಇಂತಹ ಆಚರಣೆಗಳನ್ನು ಅಲ್ಲಮಪ್ರಭು ಗ್ರಹಿಸಿದ ರೀತಿ ಮತ್ತು ಅವುಗಳ ಬಗ್ಗೆ ಅಲ್ಲಮನು ಹೊಂದಿದ್ದ ನಿಲುವು ಏನು ಎಂಬುದನ್ನು ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ವಿಶ್ಲೇಷಣೆಗೆ ಒಳಗು ಮಾಡಿ ಅಧ್ಯಯನ ಮಾಡುವ ಪ್ರಯತ್ನ ಮಾಡಲಾಗಿದೆ. ಈ ಹಿನ್ನೆಲೆಯಲ್ಲಿ ಆಚರಣೆಗಳನ್ನು ಮತೀಯ, ಧಾರ್ಮಿಕ ಹಾಗೂ ಸಾಮಾಜಿಕ ಪರಂಪರೆಯ ಸಾಧನವಾಗಿ ಗುರುತಿಸಲಾಗಿದೆ.

ಅಡಿ ಟಿಪ್ಪಣಿಗಳು

೧. ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟು, ಮೊದಲನೆ ಸಂಪುಟ, ಪ್ರಧಾನ ಸಂಪಾದಕರು : ಡಿ.ಎಲ್. ನರಸಿಂಹಾಚಾರ್, ಪುಟ ೫೮೧.

೨. Kittel's Kannada - English Dictionary, Volume one, (1968), ಸಂ. ಪ್ರೊ. ಎಂ. ಮರಿಯಪ್ಪ ಭಟ್ಟ, ಪುಟ ೧೫೧

೩. ಡಾ|| ಬಾಬಾ ಸಾಹೇಬ್ ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು, ಪುಟ ೪೪೯.
ಮತ ಮತ್ತು ಧರ್ಮ, ಸಂಪುಟ - II, ಭಾಗ ೨, ಪುಟ ೪೪೯.

೪. - ಅದೇ -, ಸಂಪಾದಕರು : ಡಾ|| ಎ.ಎಂ. ರಾಜಶೇಖರಯ್ಯ, ಪುಟ ೪೪೯

೫. - ಅದೇ -, ಸಂಪುಟ II, ಭಾಗ ೨, ಪುಟ. ೪೫೦.

೬. Speaking of Siva, A.K. Ramanujan, Page 178.

೭. - ಅದೇ -, ಪುಟ ೧೮೦.

೮. ಭಾರತೀಯ ಸಮಾಜ, ಚ.ನ. ಶಂಕರ್‌ರಾವ್, ಪುಟ ಸಂಖ್ಯೆ ೫೮, ೪ ಸಂಸ್ಕಾರಗಳು (Sacraments)

೯. ಸಮಾಜಶಾಸ್ತ್ರ, ಚ.ನ. ಶಂಕರ್‌ರಾವ್, ಪುಟ ೨೧೦.

೧೦. - ಅದೇ -, ಪುಟ.

೧೧. - ಅದೇ -, ಪುಟ ೨೦೮-೨೦೯

೧೨. ಸಮಾಜಶಾಸ್ತ್ರದ ತತ್ತ್ವಗಳು, ಎಸ್.ಜಿ. ಹಿರೇಮಠ, ಪುಟ ೧೬೦.

೧೩. ಸಮಾಜಶಾಸ್ತ್ರದ ತತ್ತ್ವಗಳು, ಎಸ್.ಜಿ. ಹಿರೇಮಠ, ಧರ್ಮ, ಪುಟ ೧೯೫.

೧೪. - ಅದೇ -, ಪುಟ ೧೯೯

೧೫. - ಅದೇ -, ಪುಟ ೧೯೯

೧೬. - ಅದೇ -, ಪುಟ ೨೦೦

* * *

ಅಧ್ಯಾಯ – ೨

ಪ್ರಭುದೇವರ ವಚನಗಳು : ಒಂದು ನೋಟ

೧. ಅಲ್ಲಮನ ಬದುಕು

೨. ಅಲ್ಲಮಪ್ರಭುವಿನ ವಚನಗಳ ಸ್ವರೂಪ

೩. ವಿವಿಧ ಜಾತಿಯ ಜನರ ಆಚರಣೆಗಳ ಬಗ್ಗೆ ಅಲ್ಲಮನ ನಿಲುವು

೪. ಆಚರಣೆಯನ್ನು ಬಲಪಡಿಸುವ ನಂಬಿಕೆಗಳು

೫. ಅಲ್ಲಮನ ಸಾಧನೆ

ಅಧ್ಯಾಯ – ೨

ಪ್ರಭುದೇವರ ವಚನಗಳು : ಒಂದು ನೋಟ

೧. ಅಲ್ಲಮನ ಬದುಕು

ಅಲ್ಲಮ ಪ್ರಭುವಿನ ಜೀವನದ ಬಗ್ಗೆ ಮಾಹಿತಿ ಪಡೆಯಲು ಚಾಮರಸನ ಪ್ರಭುಲಿಂಗಲೀಲೆ ನಮಗೆ ನೆರವಾಗುತ್ತದೆ. ಆದರೂ ಪ್ರಭುಲಿಂಗ ಲೀಲೆಯಲ್ಲಿ ಚಾಮರಸನು ಅಲ್ಲಮಪ್ರಭುವನ್ನು ಪುರಾಣ ಪುರುಷನಂತೆ ಚಿತ್ರಿಸಿದ್ದಾನೆ.

> "ಒಂದಾನೊಂದು ದಿನ ಕೈಲಾಸದಲ್ಲಿ ಪರಮೇಶ್ವರಿ ತನ್ನ ಪತಿಯನ್ನು ಕುರಿತು 'ಶಿವನೆ, ನಿನ್ನೊಡ್ಡೋಲಗದೊಳೊಪ್ಪುವ ಮಹಾ ಘನ ಮಹಿಮರೆಲ್ಲರು ಭವಕೆ ಬಾರದೆ ನಿತ್ಯಸುಖದಿಂದಿಪ್ಪರೋ ಮೇಣು ಇವರಿಗೆಯು ನೆಲೆಯಿಲ್ಲವೊ?' ಎಂದು ಕೇಳಿದಳು. ಅದಕ್ಕೆ ಶಿವನು ನಾಮರೂಪ ಕ್ರಿಯೆಗಳನ್ನು ಗೆಲ್ಲಬಲ್ಲವರಿಗೆ ಮಾತ್ರ ನಿತ್ಯಸುಖವೆಂದೂ, ಅದಕ್ಕಾಗಿ ಭೂಮಿಯಲ್ಲಿ ಮಾನವ ಶರೀರಿಗಳಾಗಿ ಹುಟ್ಟಿ ಸಾಧನೆ ಮಾಡಬೇಕೆಂದೂ ಹೇಳಿದನು. ಹಾಗಾದರೆ ಭೂಲೋಕದಲ್ಲಿ ಇದನ್ನು ಸಾಧಿಸುವ ಗುರುವಾರು? ಎಂದು ಗಿರಿಜೆ ಕೇಳಲು, ನಿರಹಂಕಾರ ಮತ್ತು ಸುಜ್ಞಾನಿಗಳ ಬಹುಕಾಲದ ಪ್ರಾರ್ಥನೆಗೆ ಒಲಿದು, ಅವರಿಗೆ ಮಗನಾಗಿ ಹುಟ್ಟಿದ ನನ್ನ ಸಾತ್ವಿಕ ರೂಪದ ಅಲ್ಲಮನೇ ಆ ಗುರು ಎಂದು ಹೇಳಿದನು."[೧]

ಚಾಮರಸನು ಪ್ರಭುವನ್ನು ಸಾಮಾನ್ಯನಂತೆ ಕಾಣದೆ ಅಲೌಕಿಕನಂತೆ ಕಂಡಿರುವನು. ಕಾವ್ಯದಲ್ಲಿ ದೊರೆಯುವ ಮಾಹಿತಿಯಂತೆ ಅಲ್ಲಮನು ನಿರಂಹಂಕಾರ ಮತ್ತು ಸುಜ್ಞಾನಿ ಎಂಬ ಸಾತ್ವಿಕ ದಂಪತಿಗಳ ಮಗನಾಗಿ ಜನಿಸಿದನು. ಅಲ್ಲಮ ಹುಟ್ಟಿದ್ದು ಬಳ್ಳಿಗಾವಿಯಲ್ಲಿ (ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನ ಒಂದು ಚಿಕ್ಕ ಹಳ್ಳಿ).

> ಚಾಮರಸನು ಅಲ್ಲಮನನ್ನು ಒಬ್ಬ ಪವಾಡ ಪುರುಷನಂತೆ ಚಿತ್ರಿಸಿದ್ದಾನೆ. "ಇದು ಸತ್ತವರ ಕಥೆಯಲ್ಲ, ಹುಟ್ಟೆಂಬ ಬೇನೆಯಲ್ಲಿ ನೊಂದು ಬೆಂದು ಕರ್ಮದ ಕತ್ತಲೆಗೆ ಸಿಲುಕಿಕೊಳ್ಳುವವರ ಕ್ಷೇತ್ರವಲ್ಲ; ಹೊತ್ತು ಹೋಗದೆ ಪುಂಡರು ಕೇಳುವಂತಹ ಗರ್ವಿಗಳ ಸಭೆಯಲ್ಲ. ಈ ಪ್ರಭುಲಿಂಗ ಲೀಲೆಯನ್ನು ಸತ್ಯವಂತರಾದ ಶಿವಶರಣರು ತಿಳಿಯುವುದು."[೨]

[illegible]

[illegible]

[illegible]

[illegible]

[illegible]

[illegible]

[illegible]

[illegible]

ಅಲ್ಲಮನ ಬಾಲ್ಯದ ಬಗ್ಗೆ ಹೆಚ್ಚು ವಿವರಗಳು ದೊರೆಯುವುದಿಲ್ಲ. ಅವನ ವೈವಾಹಿಕ ಜೀವನದ ಬಗ್ಗೆಯೂ ಖಚಿತವಾದ ಮಾಹಿತಿ ದೊರೆಯುವುದಿಲ್ಲ. ಅವನು ದೇವಾಲಯದಲ್ಲಿ ಮದ್ದಳೆ ಸೇವೆಯನ್ನು ಸಲ್ಲಿಸುತ್ತಿದ್ದನೆಂದು ತಿಳಿದು ಬರುತ್ತದೆ.

> "ಅವನ ಜೀವನದಲ್ಲಿ ಹೆಣ್ಣೊಂದರ ಪ್ರವೇಶವಾಗುತ್ತದೆ. ಹರಿಹರನ ಪ್ರಕಾರ ಆ ಹೆಣ್ಣು ಕಾಮಲತೆಯಾದರೆ, ಚಾಮರಸನ ಪ್ರಕಾರ ಅವಳು ಮಾಯಾದೇವಿ ಅಲ್ಲಮನ ಸುಖಮಯ ದಾಂಪತ್ಯ ಜೀವನದಲ್ಲಿ ಕಾಮಲತೆಯ ಮರಣದಿಂದಾಗಿ ಒಂದು ಹೊಸ ತಿರುವು ಕಾಣಿಸಿಕೊಳ್ಳುತ್ತದೆಂದು ಹರಿಹರ ಹೇಳಿದರೆ, ತನ್ನನ್ನು ಕೂಡಿಕೊಳ್ಳಲು ಹಲವಂದದಿಂದ ಪ್ರಯತ್ನಿಸುತ್ತಿದ್ದ ಮಾಯಾದೇವಿಯನ್ನು ತಿರಸ್ಕರಿಸಿ ಮಾಯಾ ಕೋಲಾಹಲನಾದಾಗ ಅಲ್ಲಮನ ಜೀವನ ಹೊಸ ದಿಕ್ಕನ್ನು ಹಿಡಿಯಿತೆಂದು ಚಾಮರಸ ಪ್ರತಿಪಾದಿಸುತ್ತಾನೆ."[೩]

ಅಲ್ಲಮ ಪ್ರಭು ೧೨ನೇ ಶತಮಾನದಲ್ಲಿ ಬದುಕಿ ಬಾಳಿದ ಒಬ್ಬ ಶ್ರೇಷ್ಠ ಚಿಂತಕ, ತತ್ತ್ವಜ್ಞಾನಿ, ಅನುಭಾವಿ ವಚನಕಾರ, ಶೂನ್ಯ ಸಿಂಹಾಸನಾಧೀಶನೆಂದೇ ಖ್ಯಾತನಾಗಿದ್ದ ಅಲ್ಲಮನ ಮನಸ್ಸು ನೀರಿನಂತೆ ನಿರಾಳ, ಅಗ್ನಿಯಂತೆ ಪವಿತ್ರ. ಸಮಾಜದಲ್ಲಿ ಆಳವಾಗಿ ಬೇರು ಬಿಟ್ಟಿದ್ದ ಜಾತಿ, ಮತ, ಕುಲ, ಸಂಪ್ರದಾಯಗಳೆಂಬ ಭಾವನೆಯ ಕಿಲುಬು ಲವಲೇಶವೂ ಅಲ್ಲಮನಿಗೆ ಇರಲಿಲ್ಲ ಎಂಬ ಅಂಶ ಅವನ ವಚನಗಳ ಅಧ್ಯಯನದಿಂದ ತಿಳಿದು ಬರುತ್ತದೆ. ಕಾಮಲತೆಯಿಂದ ಜೀವನದಲ್ಲಿ ಹೊಸ ತಿರುವು ಪಡೆದ ಅಲ್ಲಮನು ಅನಿಮಿಷ ದೇವಯ್ಯನೆಂಬ ಗುರುವಿನಿಂದ ಯೋಗಸಿದ್ಧಿಯನ್ನು, ಜ್ಞಾನ ಸಿದ್ಧಿಯನ್ನು ಪಡೆಯುತ್ತಾನೆ. ಲೋಕ ಸಂಚಾರಿಯಾಗಿ ತಾನು ಅಪಾರವಾದ ಅನುಭವವನ್ನು ಗಳಿಸಿಕೊಳ್ಳುತ್ತಾನೆ. ತಾನು ಗಳಿಸಿಕೊಂಡ ಜ್ಞಾನವನ್ನು ಜನಸಾಮಾನ್ಯರ ಉದ್ಧಾರಕ್ಕಾಗಿ, ಲೋಕಕಲ್ಯಾಣಕ್ಕಾಗಿ ಉಪಯೋಗಿಸುತ್ತಾನೆ. ತನ್ನ ಜೀವಿತದ ಕೊನೆಯ ದಿನಗಳನ್ನು ಶ್ರೀಶೈಲದಲ್ಲಿ ಕಳೆದನೆಂದು ಅನೇಕ ಕೃತಿಗಳಿಂದ ತಿಳಿದುಬರುತ್ತದೆ.

> "ಅಪ್ರತಿಮ ಅನುಭಾವಿಯಾಗಿದ್ದ ಪ್ರಭುದೇವ ತನ್ನಷ್ಟಕ್ಕೆ ತಾನು ಎಲ್ಲಿಯೋ ಗುಹಾವಾಸಿಯಾಗಿದ್ದು, ತನ್ನೊಬ್ಬನ ಉದ್ಧಾರವನ್ನು ಮಾತ್ರ ಬಯಸದೆ, ಲೋಕದ ಇತರ ಸಾಧಕರ ಹಾಗೂ ಜನಸಾಮಾನ್ಯರ ಬಗ್ಗೆ ಕಾಳಜಿ ವಹಿಸಿ, ಅವರತ್ತ ಗಮನಹರಿಸಿದುದು ಆ ಕಾಲದ ಉಳಿದ ಯೋಗಿಗಳಿಗಿಂತ ಅವನನ್ನು ವಿಶಿಷ್ಟವಾಗಿಸುತ್ತದೆ. ಪ್ರಭುದೇವನ ಇನ್ನೊಂದು ವಿಶೇಷತೆಯೆಂದರೆ ಸ್ವತಃ ತಾನೇ ಸಾಧಕರನ್ನು ಹುಡುಕಿಕೊಂಡು ಹೋಗಿ, ಅವರಲ್ಲಿದ್ದ ಓರೆಕೋರೆಗಳನ್ನು ತಿದ್ದಿ, ಕುಂದು ಕೊರತೆಗಳನ್ನು ನೀಗಿಸಿ, ಅವರ ಸಾಧನೆ ಸಿದ್ಧಿಗಳನ್ನು ಪ್ರಶಂಸಿಸಿ ಮಾರ್ಗದರ್ಶನ ನೀಡಿದುದು. ವೀರಶೈವ ನಿರಂಜನ ಜಂಗಮ ತತ್ವಕ್ಕೆ ಪ್ರಭುದೇವನ ಜೀವನವೇ ಆದರ್ಶವೆಂಬುದರಲ್ಲಿ ಸಂದೇಹವಿಲ್ಲ."[೪]

ಹೀಗೆ ಅಲ್ಲಮಪ್ರಭುದೇವನ ಜೀವನದ ಬಗ್ಗೆ ಐತಿಹ್ಯದ ರೀತಿಯಲ್ಲಿ ಕೆಲವು ವಿಚಾರಗಳನ್ನು ಕ್ರೋಢೀಕರಿಸಬಹುದೇ ಹೊರತು ಖಚಿತವಾದ ಮಾಹಿತಿ ದುರ್ಲಭವಾಗಿರುವುದು ಕೂಡ ಗಮನಿಸಬೇಕಾದ ಅಂಶ.

೨. ಅಲ್ಲಮಪ್ರಭುವಿನ ವಚನಗಳ ಸ್ವರೂಪ

೧೨ನೇ ಶತಮಾನದಲ್ಲಿ ವಚನಕಾರರು ಸಾಮಾಜಿಕ ಕ್ರಾಂತಿಯನ್ನು ಉಂಟುಮಾಡಿದರು. ಅಲ್ಲಮನ ವಚನಗಳು ಸಾಮಾಜಿಕ ಕ್ರಾಂತಿಯ ಕಹಳೆಯನ್ನು ಮೊಳಗುವುದರಲ್ಲಿ ಯಶಸ್ವಿಯಾಗಿವೆ. ಅಲ್ಲಮನು ತನ್ನ ಯೋಗಸಿದ್ಧಿ, ಜ್ಞಾನಸಿದ್ಧಿ, ಆತ್ಮಸಿದ್ಧಿಗಳಿಂದ ಗಳಿಸಿಕೊಂಡ ಜ್ಞಾನವನ್ನು ಕೊಂಚವೂ ಅಂಜಿಕೆಯಿಲ್ಲದೆ, ಧೈರ್ಯವಾಗಿ ಆಸ್ಫೋಟಿಸಿದ ಕ್ರಾಂತಿಕಾರಿ. ಜನರ ಜೀವನದಲ್ಲಿದ್ದ ಆಚಾರ - ವಿಚಾರಗಳನ್ನು ಅವರಲ್ಲಿದ್ದ ಅಂಧಕಾರಗಳನ್ನು, ಮನೋವಿಕಾರಗಳನ್ನು, ಅನಾಚಾರಗಳನ್ನು ಪ್ರಲೋಭನೆ, ಸ್ವಾರ್ಥ ಲಾಲಸೆ, ಅಲ್ಪತನ ಇತ್ಯಾದಿಯಾಗಿ ಸಕಲ ದುರ್ಗುಣಗಳನ್ನೂ ತನ್ನ ವಚನಗಳಲ್ಲಿ ಪ್ರಸ್ತಾಪಿಸಿರುವನು.

> "ಅಲ್ಲಮನ ವಚನಗಳಲ್ಲಿ ಕಾಣುವಷ್ಟು ತಾತ್ವಿಕ ಚಿಂತನವನ್ನೂ, ವಿಶಾಲ ಪಂಥವನ್ನೂ ಮತ್ತಾವ ವಚನಕಾರರಲ್ಲಿಯೂ ಕಾಣಲಾರೆವು. ಇಂತಹ ವಚನಕಾರರಲ್ಲಿ ಮುಕ್ಕಾಲು ಮೂರು ವೀಸ ಪಾಲಿನ ಜನ ಶಿವಾದಿಕ್ಯ ಸ್ಥಾಪನೆಗಾಗಿಯೂ ವಿಷ್ಣು ಮುಂತಾದ ಮಹಾದೇವತೆಗಳ ದೂಷಣೆಗಾಗಿಯೂ, ಮಾರಿ ಮಸಣಿ ಮುಂತಾದ ಜನಪದ ಜನಪದ ದೈವಗಳ ಅವಹೇಳನೆಗಾಗಿಯೂ, ಗುಡಿಗೋಪುರಗಳ ನಿಂದೆಗಾಗಿಯೂ ತಮ್ಮ ತಮ್ಮ ವಚನ ಖಡ್ಗವನ್ನು ಒರೆಗಳಚಿ ಝಳಪಿಸುವುದು ವೀರದ ಮತ್ತು ಶೈವದ ಒಂದು ಸಲ್ಲಕ್ಷಣವೆಂದು ಭಾವಿಸಿದ್ದರು. ಇದಿಷ್ಟೂ ವೀರಶೈವದ ಖಂಡನ ಭಾಗದಲ್ಲಿ ಒಂದಂಶ. ಇನ್ನು ಆ ಧರ್ಮದ ಮಂಡನ ಭಾಗದಲ್ಲಿ ಧೀಕ್ಷೆಯೆಂದು, ಜಂಗಮಾಧಿಕ್ಯವೆಂದು, ಪಾದೋದಕವೆಂದೂ ಪ್ರಸಾದ, ವಿಭೂತಿಯೆಂದು, ಲಿಂಗಾರ್ಚನೆಯೆಂದೂ, ತಾವು ಬಿಟ್ಟು ಬಂದ ಧರ್ಮದ ಕರ್ಮಠ ಭಾಗವನ್ನೇ ಒಂದಲ್ಲ ಒಂದು ರೀತಿಯಲ್ಲಿ ಪ್ರತಿನಿಧಾನಿಸುವ ಹಲವಾರು ಶುಷ್ಕಾಚಾರಗಳನ್ನು ಕುರಿತು ವಿಫುಲವಾಗಿ ವಚನಶಾಸ್ತ್ರ ಲಿಖಿತವಾಗಿದೆ. ಅಂತಹ ಮತೀಯವಾದ ಭ್ರಮೆ, ಭ್ರಾಂತಿಗಳಾಗಲಿ, ಪರಮತೀಯವಾದ ವಾದ ಕ್ರೋಧಗಳಾಗಲಿ ಯಾವುವೂ ಅಲ್ಲಮನ ಬಳಿಯೇ ಸುಳಿಯಲಿಲ್ಲ."[೫]

ಅಲ್ಲಮಪ್ರಭು ಶರಣ ವೇಷದ ವಂಚಕರು ನಡೆಸುವ ತೋರಿಕೆಯ ಭಕ್ತಿಯನ್ನು ಖಂಡಿಸುತ್ತಾನೆ. ವ್ರತಾಚಾರಗಳನ್ನು ಲೇವಡಿ ಮಾಡುತ್ತಾನೆ. ಯಜ್ಞಯಾಗಾದಿಗಳನ್ನು ಪ್ರಶ್ನಿಸುತ್ತಾನೆ. ಆಡಂಬರದ ಪೂಜಾ ವಿಧಾನವನ್ನು ನಿರಾಕರಿಸುತ್ತಾನೆ. ಹೀಗೆ ಅಲ್ಲಮನ ವಚನಗಳು ಪ್ರಶ್ನೆ, ವಿಡಂಬನೆ, ನಿರಾಕರಣೆಗಳಿಂದ ಮತ್ತು ಖಂಡನೆಗಳಿಂದ ಕೂಡಿವೆ. ಆಳವಾದ ಅನುಭವದಿಂದ ಕೂಡಿವೆ. ನಿಜಶರಣರು ಒಂದು ಹೊಸ ಆಧ್ಯಾತ್ಮಿಕ ಲೋಕವನ್ನು ಕಟ್ಟಿಕೊಳ್ಳಲು ನೆರವಾಗುವಂತಿವೆ. ಹೀಗೆ ಅಲ್ಲಮನ ವಚನಗಳು ಇತರ ವಚನಕಾರರಿಗಿಂತ ವಿಶಿಷ್ಟ ಬಗೆಯಿಂದ ಕೂಡಿವೆ.

೩. ವಿವಿಧ ಜಾತಿಯ ಜನರ ಆಚರಣೆಗಳ ಬಗ್ಗೆ ಅಲ್ಲಮನ ನಿಲುವು

ಅಲ್ಲಮನು ತನ್ನ ಸಮಕಾಲೀನ ಸಮಾಜದಲ್ಲಿ ಆಳವಾಗಿ ಬೇರು ಬಿಟ್ಟಿದ್ದ ಜಾತಿ, ವರ್ಗ, ಲಿಂಗ ವ್ಯವಸ್ಥೆಯನ್ನು ನಿರಾಕರಿಸುತ್ತಾನೆ. ಸ್ಥಾಪಿತವಾಗಿದ್ದ ಎಲ್ಲ ಸಿದ್ಧಾಂತಗಳನ್ನು, ವ್ಯವಸ್ಥೆಗಳನ್ನು, ನಿಯಮಗಳನ್ನು ಖಂಡಿಸುತ್ತಾನೆ. ಎಲ್ಲ ಬಗೆಯ ಮತೀಯವಾದ, ಧಾರ್ಮಿಕವಾದ, ಸಾಂಪ್ರದಾಯಿಕವಾದ ಆಚರಣೆಗಳನ್ನು ಅಲ್ಲಗಳೆಯುತ್ತಾನೆ. ಯಾವ ಉದ್ದೇಶದಿಂದ ಸಾಮಾಜಿಕ ಕ್ರಾಂತಿಯನ್ನುಂಟು ಮಾಡಿದ್ದರೋ, ಆ ಉದ್ದೇಶವನ್ನೇ ಮರೆತು ತಮ್ಮ ಹಳೆಯ ಸಾಂಪ್ರದಾಯಗಳಲ್ಲಿ ಮೈ ಮರೆತಿದ್ದ ಜನರಲ್ಲಿ ಜಾಗೃತಿಯನ್ನು, ಅರಿವನ್ನು ಉಂಟುಮಾಡುತ್ತಾನೆ.

[illegible]

[illegible]

[illegible]

[illegible]

"ವೀರಶೈವದ ಪರಿಭಾಷೆಯನ್ನೇ ಬಳಸಿಕೊಂಡು, ವೀರಶೈವದ ಮತೀಯತೆಯನ್ನು ಕೊಚ್ಚಿ ಸವರುವ ಸ್ತುತ್ಯಕಾರ್ಯದಲ್ಲಿ ಅಲ್ಲಮನಷ್ಟು ಆವೇಶದಿಂದಲೂ, ಅಭಿನಿವೇಶದಿಂದಲೂ ಬಸವಣ್ಣನೂ ಶ್ರಮಿಸಲಾಗಲಿಲ್ಲವೆಂದರೆ ಚಕಿತರಾಗಬೇಕಾಗಿಲ್ಲ."[೬]

"ಅವನ ಆಲೋಚನೆಯೆಲ್ಲ ಮೂಲಭೂತವಾದ ಸುಧಾರಣೆಯತ್ತ ಕೇಂದ್ರೀಕೃತವಾಗಿತ್ತು. ಮಾನವನು ಯಾವ ಧರ್ಮದವನೇ ಆಗಲಿ, ಯಾವ ಕರ್ಮದವನೇ ಆಗಲಿ, ಯಾವ ಸ್ಥಾನದವನೇ ಆಗಲಿ, ಸ್ತರದವನೇ ಆಗಲಿ ಅಷ್ಟರಿಂದಲೇ ಅವನು ತನ್ನ ನಿರುಪಾಧಿಕ ಗುಣವನ್ನು ಮರೆಯದೆ, ಸರ್ವರಲ್ಲಿಯೂ ತನ್ನನ್ನಷ್ಟೇ ಅಲ್ಲ - ಶಿವನನ್ನೇ ಕಾಣುವ ಕಾಣ್ಕೆಯನ್ನು ತೊರೆಯದೆ, ಆ ಅಖಂಡ ಸೃಷ್ಟಿಗೆ ಅವನು ದೊರೆಯಾಗಿ ರಾರಾಜಿಸಬೇಕೆಂಬುದೇ ಅಲ್ಲಮನ ಅಂತರಂಗದ ಅಡಿ - ನಡು - ಮುಡಿಯಲ್ಲಿ ಸೆಲೆಯೊಡೆದು ತುಂಬಿ ತುಳುಕುತ್ತಿದ್ದ ಬಯಕೆಯಾಗಿತ್ತು."[೭]

ಅಲ್ಲಮನ ವಚನಗಳಲ್ಲಿ ಸಾಂಪ್ರದಾಯಿಕ ಆಚರಣೆಗಳಲ್ಲಿ ಅಡಗಿದ್ದ ಅನಾಚರಣೆಗಳು ಬೆತ್ತಲೆಗೊಳ್ಳುತ್ತವೆ. ಅಂಧಶ್ರದ್ಧೆಗಳು ಹೊರಬೀಳುತ್ತವೆ. ಅಲ್ಲಮನು ಸಂಗನ ಬಸವಣ್ಣನ ಜೊತೆ ನಡೆಸುವ ಸಂವಾದದಲ್ಲಿ ಆಚಾರಗಳ ಬಗ್ಗೆ ತನ್ನ ವಿಚಾರವನ್ನು ಈ ಕೆಳಗಿನಂತೆ ವ್ಯಕ್ತಪಡಿಸಿದ್ದಾನೆ.

ಅಱುದ ಶರಣಂಗೆ ಆಚಾರವಿಲ್ಲ
ಆಚಾರವುಳ್ಳವಂಗೆ ಲಿಂಗವಿಲ್ಲ
ಲಿಂಗವಿಲ್ಲದ ಶರಣನ ಸುಳುಹು
ಜಗಕ್ಕೆ ವಿಪರೀತ ಚರಿತ್ರವದು ಪ್ರಕಟವಲ್ಲ ನೋಡಾ।
ಸಂಸಾರಿ ಬಳಸುವ ಬಯಕೆಯನೆಂದೂ ಹೊದ್ದನು
ಸಟೆಯ ಹಿಡಿದು, ದಿಟವ ಮಱೆದು
ಇಲ್ಲದ ಲಿಂಗವನುಂಟೆಂದು ಪೂಜಿಸುವರಾಗಿ ಆಚಾರವುಂಟು
ಆಚಾರವುಳ್ಳವಂಗೆ ಗುರುವುಂಟು
ಲಿಂಗಪೂಜಕಂಗೆ ಭೋಗವುಂಟು
ಈ ಬಱಿಯ ಬಾಯ ಬಣ್ಣಕರೆಲ್ಲರೂ ಪೂಜಕರಾದರು
ಗುಹೇಶ್ವರ ಲಿಂಗವು ಅಲ್ಲಿ ಇಲ್ಲವೆಂಬುದನು
ಈ ವೇಷಲಾಂಛನರೆತ್ತ ಬಲ್ಲರು ಹೇಳಾಸಂಗನ ಬಸವಣ್ಣಾ?[೮] ೧೧೩೬

ಮೇಲಿನ ವಚನದಲ್ಲಿ ಅಲ್ಲಮನು ವೇಷಧಾರಿಗಳಾದ ವಂಚಕರು ನಡೆಸುವ ಲಿಂಗಪೂಜೆಯ ಬೋಳೆತನವನ್ನು ಬಯಲಿಗೆಳೆದಿದ್ದಾನೆ. ಲಿಂಗಪೂಜೆಯ ಹೆಸರಿನಲ್ಲಿ ಅವರು ನಡೆಸುವ ಭೋಗ ಮತ್ತು ಆಡಂಬರದ ಒಣ ಆಲಾಪವನ್ನು ಟೀಕಿಸುತ್ತಿದ್ದಾನೆ. ಅಲ್ಲಮನ ಪ್ರಕಾರ ನಿಜ ಶರಣನಿಗೆ ಯಾವ ಬಗೆಯ ಆಚಾರದ ಅಗತ್ಯವಿಲ್ಲ. ಆಚಾರವಿದ್ದಲ್ಲಿ ಲಿಂಗವಿಲ್ಲ ಎಂಬ ಸತ್ಯವನ್ನು ವೇಷಧಾರಿಗಳು ತಿಳಿಯಲಾರರು. ಆಚಾರದಿಂದ ಗುರು, ಗುರುವಿನಿಂದ ಲಿಂಗ, ಲಿಂಗದಿಂದ ಪೂಜೆ, ಪೂಜೆಯಿಂದ ಭೋಗ, ಭೋಗದಿಂದ ಅರಿವಿನ ಮರೆವು - ಹೀಗೆ ಒಂದರ ಹಿಂದೊಂದು ಸರಪಳಿಯಂತೆ ಸಂಬಂಧ ಹೊಂದಿರುವ ಆಚಾರದ ಅನಾಚಾರವನ್ನು ನಿರಾಕರಿಸುತ್ತಿದ್ದಾನೆ ಅಲ್ಲಮಪ್ರಭು.

"ಅಲ್ಲಮನ ವಚನಗಳಲ್ಲಿ ಕಂಡುಬರುವ ಮೂಲದರ್ಶನವೇ ಸಾಮಾಜಿಕ ಕುಲದ ನಿರಾಕರಣೆ. ಆತನಿಗೆ ಆಧ್ಯಾತ್ಮಿಕ ಸಖ್ಯ ಮತ್ತು ಅನುಭಾವ ಸಂಗ ಎಂಬೆರಡು ಪರಿಕಲ್ಪನೆಗಳು ತುಂಬಾ ಆಪ್ತ."[೯]

ಅಲ್ಲಮ ತನ್ನ ವಚನಗಳಲ್ಲಿ ತನ್ನ ಸಮಕಾಲೀನ ಜನರ ಜೀವನದಲ್ಲಿದ್ದ ವೈರುಧ್ಯಗಳನ್ನು ನಿಸ್ಸಂಕೋಚವಾಗಿ ಅಲ್ಲಗಳೆಯುತ್ತಾನೆ. ಅವನು ಎಲ್ಲ ಜಾತಿಯ ಜನರ ಆಚಾರಗಳನ್ನು ನಿರಾಕರಿಸುತ್ತಾನೆ. ಅವನು ವೈದಿಕರು ನಡೆಸುತ್ತಿದ್ದ ಆಚಾರಗಳನ್ನು ಪ್ರಶ್ನಿಸುತ್ತಾನೆ. ವೈದಿಕರು ವೇದಗಳ ಪಠಣದಲ್ಲಿ, ಅಭ್ಯಾಸದಲ್ಲಿ, ವೇದಾಧ್ಯಯನದಲ್ಲಿ ತುಂಬಾ ಶ್ರದ್ಧೆಯನ್ನು ಇಟ್ಟಿದ್ದರು. ವೇದಾಧ್ಯಯನ ವೈದಿಕರ ಜೀವನದ ಒಂದು ಪ್ರಮುಖ ಆಚರಣೆಯಾಗಿತ್ತು. ಆದರೆ ಅಲ್ಲಮಪ್ರಭು ವೇದವನ್ನು ಓದಿನ ಮಾತು ಎನ್ನುತ್ತಾನೆ.

"ವೇದ ಅಂದರೆ ಜ್ಞಾನ, ಧರ್ಮ ಮತ್ತು ಬ್ರಹ್ಮಜ್ಞಾನ ಬೋಧಕವಾದ ಅಪೌರುಷೇಯ ವಾಕ್ಯರಾಶಿ." (ಅರಿವು)[೧೦]

ಇಂತಹ ಜ್ಞಾನ ರಾಶಿಯನ್ನು ಓದಿನ ಮಾತು ಎನ್ನಬೇಕಾದರೆ, ಅದನ್ನು ಓದುತ್ತಿದ್ದ ಜನರ ಆಚರಣೆಗಳು, ಓದುವ ರೀತಿ, ಅವರ ವರ್ತನೆ ಅಲ್ಲಮನಿಗೆ ಹಿಡಿಸದಿರುವುದು. ಅದೆಷ್ಟು ತಲೆಮಾರಿನ ಋಷಿಮುನಿಗಳ ಜ್ಞಾನದಾಹದ ಫಲವಾಗಿದ್ದ ವೇದವನ್ನು ಓದಿನ ಮಾತು ಅಂದು ಬಿಡುತ್ತಾನೆ. ಅದಕ್ಕೆ ಕಾರಣ ಓದುವಿಕೆ ಗಿಳಿ ಓದಾಗಿರಬಹುದು. ಗಿಳಿ ಮಾತು ಕಲಿತಂತೆ, ಅರಿವಿಲ್ಲದೆ ಸುಮ್ಮನೆ ಓದಿಕೊಂಡಿದ್ದರೆ ಏನು ಫಲ? ಅಥವಾ ಓದುವಿಕೆಯೇ ಆಡಂಬರದ, ಪ್ರದರ್ಶನದ, ಅಹಂಕಾರದ ಮೂಲವಾದರೆ ನಿಜವಾದ ಅರಿವು ಹೇಗೆ ಪ್ರಾಪ್ತವಾಗುವುದು? ಅನುಭವವಿಲ್ಲದ ಓದಿನಿಂದ ಅರಿವು ಲಭಿಸುವುದೇ? ಎಂಬಿತ್ಯಾದಿ ಪ್ರಶ್ನೆಗಳು ಎದುರಾಗುವುವು. ಆದ್ದರಿಂದ ಅಲ್ಲಮ ಇಂತಹ ಓದನ್ನು ತಿರಸ್ಕರಿಸುತ್ತಾನೆ. ಕುರುಡು ಕುರುಡಾಗಿ ವೇದಗಳನ್ನು ಪಠಿಸುವ ಪರಿಪಾಠವನ್ನು ತಿರಸ್ಕರಿಸುತ್ತಾನೆ. ಏಕೆಂದರೆ ಗುರಿಯನ್ನು ಮರೆತು ಕೇವಲ ಮಾರ್ಗದಲ್ಲಿಯೇ ಮೈಮರೆಯುವ ಸಾಧ್ಯತೆ ಇಂತಹ ಆಚರಣೆಗಳಲ್ಲಿ ಇರುತ್ತದೆ. ಆದ್ದರಿಂದ ಅಲ್ಲಮ ಇಂತಹ ಆಚರಣೆಗಳನ್ನು ಅರ್ಥಹೀನ ಆಚರಣೆಗಳು ಎಂದು ನಿರಾಕರಿಸುತ್ತಾನೆ.

ಅಲ್ಲಮಪ್ರಭು ವೀರಶೈವರ ಆಚರಣೆಗಳ್ನು ನಿರಾಕರಿಸುತ್ತಾನೆ. ವೀರಶೈವರು ಗುರು, ಲಿಂಗ, ಜಂಗಮಪೂಜೆಯ ಆಚಾರಗಳನ್ನು ತಪ್ಪದೆ ಪಾಲಿಸುವರು. ಆದರೆ ಅಲ್ಲಮಪ್ರಭು ಈ ರೀತಿಯ ಆಚರಣೆಗಳಿಂದ ಗುಹೇಶ್ವರನನ್ನು ಅರಿಯಲು ಸಾಧ್ಯವಿಲ್ಲ ಎನ್ನುವನು.

"ಆವ ಪದಾರ್ಥವಾದಡೇನು ತಾನಿದ್ದೆಡೆಗೆ ಬಂದುದ ಲಿಂಗಾರ್ಪಿತವ ಮಾಡಿ ಭೋಗಿಸುವುದೇ ಆಚಾರವೆಂದು ಬಸವಣ್ಣ ಹೇಳುವನು. ಆಚಾರವೆಂಬುದು ಕೂರಲಗು, ತಪ್ಪಿ ಬಂದಡೆ ಪ್ರಾಣವ ತಗಲುವುದು ಅದು ಕಾರಣ ಅರಿದರಿದು ಆಚರಿಸಬೇಕು ಎಂದು ಬಸವಣ್ಣ ಎಚ್ಚರಿಸುವನು. 'ವೇದಶಾಸ್ತ್ರ ಪುರಾಣಂಗಳನರಿದ ಸಂಬಂಧಿಗಳಿಗಲ್ಲದೆ ಆಚಾರವಳವಡದು' ಎಂದೂ ಆಚಾರವೆಂಬುದು ಅಗೋಚರ ನೋಡಯ್ಯಾ ಮಾಡಿದಲ್ಲದೆ ಇಲ್ಲ; ಒಡಲು ವಿಡಿದಾಡಿದಡೆ ಓಡಿಯಲಿಲ್ಲಯ್ಯಾ ಎಂದೂ, ಆಚಾರವಿಡಿದು ಲಿಂಗ, ಅನುಭಾವವಿಡಿದು ಜಂಗಮ, ತನುವಿನ ಪ್ರಾಣ ಆಚಾರ, ಮನದ ಪ್ರಾಣ ಅನುಭಾವ, ಇದು ಕಾರಣ ಚೆನ್ನಸಂಗಮದೇವಾ, ಲಿಂಗವನು ಜಂಗಮವನು ಬೇರರಸಲಿಲ್ಲ ಎಂದೂ, ಆಚಾರವೇ ಜಂಗಮ, ವಿಚಾರವೇ ಭಕ್ತನಯ್ಯಾ ಆಚಾರ - ವಿಚಾರವೆಂಬುದು ಸ್ವಾನುಭಾವ ಸಂಭಾಷಣೆ ಎಂದೂ ಚೆನ್ನಬಸವಣ್ಣ ಹೇಳುವನು."[೧೧]

ವೀರಶೈವರು ಲಿಂಗಾಂಗ ಸಾಮರಸ್ಯಕ್ಕೆ ಆಚರಣೆಗಳು ಅಗತ್ಯ ಎಂದು ಭಾವಿಸುವರು. ಭಕ್ತನು ಅನುಸರಿಸಬೇಕಾದ ವಿಧಾನ ಎಂದು ನಂಬುವರು. ಆದರೆ ಅಲ್ಲಮಪ್ರಭು ಆಚಾರವುಳ್ಳವಂಗೆ ಲಿಂಗವಿಲ್ಲ ಎನ್ನುತ್ತಾನೆ, ಹೀಗೆ ಅವನು ವೀರಶೈವರ ಆಚರಣೆಗಳನ್ನು ನಿರಾಕರಿಸುತ್ತಾನೆ.

ಅಲ್ಲಮಪ್ರಭು ಇತರ ಜಾತಿಯ ಜನರು ನಡೆಸುತ್ತಿದ್ದ ಆಚರಣೆಗಳನ್ನೂ ನಿರಾಕರಿಸುತ್ತಾನೆ. ತಮ್ಮ ಲೌಕಿಕ ಬದುಕಿನ ಇಷ್ಟಾರ್ಥಗಳ ಈಡೇರಿಕೆಗಾಗಿ ಹಲವಾರು ದೇವ - ದೇವಿಯರನ್ನು ಪೂಜಿಸುವ, ಹಲವು ರೀತಿಯ ವ್ರತಾಚರಣೆಗಳನ್ನು ಕೈಗೊಳ್ಳುವ ಕ್ರಮ ಎಲ್ಲ ಜಾತಿಯ ಜನರಲ್ಲಿಯೂ ಇದೆ. ಪ್ರಾಣ ಬಲಿಯನ್ನು ನೀಡುವ ಮೂಲಕ ದೇವರನ್ನು ಒಲಿಸಿಕೊಳ್ಳಬಹುದೆಂಬ ನಂಬಿಕೆ ಜನರಲ್ಲಿತ್ತು. ಈಗಲೂ ಅಂತಹ ಕ್ರಮಗಳನ್ನು ಅನುಸರಿಸುವ ರೂಢಿ ವಿವಿಧ ಜಾತಿಗಳಲ್ಲಿದೆ. ಅಲ್ಲಮನು ಇಂತಹ ಆಚರಣೆಗಳು ಭಕ್ತಿಗಾಗಿ ಮಾಡುವ ಆಚರಣೆಗಳಲ್ಲಿ ಎನ್ನುತ್ತಾನೆ. ಇಂತಹ ಆಚರಣೆಗಳನ್ನು ನಿರಾಕರಿಸುತ್ತಾನೆ. ದೇವಾಲಯದ ನಿರ್ಮಾಣವನ್ನೇ ಪ್ರಶ್ನಿಸುತ್ತಾನೆ.

ಹೀಗೆ ಅಲ್ಲಮ ನಮ್ಮ ಸಮಾಜದಲ್ಲಿದ್ದ ಎಲ್ಲ ಜಾತಿಯ ಜನರ ಆಚರಣೆಗಳನ್ನು ನಿರಾಕರಿಸುತ್ತಾನೆ. ಇದರ ಬಗ್ಗೆ ವಿವರವಾದ ಅಧ್ಯಯನವನ್ನು ಮುಂದಿನ ಅಧ್ಯಾಯಗಳಲ್ಲಿ ಮುಂದುವರೆಸಲಾಗಿದೆ.

೪. ಆಚರಣೆಯನ್ನು ಬಲಪಡಿಸುವ ನಂಬಿಕೆಗಳು

"ನಮ್ಮ ಸಮಾಜದಲ್ಲಿರುವ ವರ್ಣಾಶ್ರಮ ಧರ್ಮಕ್ಕೂ, ಕರ್ಮಸಿದ್ಧಾಂತಕ್ಕೂ ನಿಕಟವಾದ ಸಂಬಂಧವಿದೆ. ಚಿಂತನಕಾರನಾದ ಮಹೇಶ್ವರನ ಪ್ರಕಾರ ಕೆಳವರ್ಗದಲ್ಲಿ ಹುಟ್ಟಿದವನೂ ತನ್ನ ಸ್ವವರ್ಣ ಧರ್ಮವನ್ನು ಶ್ರದ್ಧೆ ಹಾಗೂ ನಿಷ್ಕಾಮತೆಯಿಂದ ಮಾಡಿದ್ದಾದರೆ ತನ್ನ ಮುಂದಿನ ಜನ್ಮದಲ್ಲಿ ಮೇಲಿನ ವರ್ಣದಲ್ಲಿ ಜನ್ಮವೆತ್ತುವುದು ಸಾಧ್ಯವಾಗುವುದು. ಆದರೆ ತನ್ನ ಸ್ವ-ವರ್ಣದ ಕಾರ್ಯಗಳನ್ನು ಶ್ರದ್ಧೆಯಿಂದ ಮಾಡದೇ ಇರುವವನು ಪುನಃ ಕೆಳವರ್ಗದಲ್ಲಿಯೇ ಜನಿಸಬೇಕಾಗುವುದು."[೧೨] ದುಷ್ಕರ್ಮದಿಂದಾಗಿ ವ್ಯಕ್ತಿಗೆ ದುರ್ಗತಿ ಪ್ರಾಪ್ತವಾಗುವುದು ನಿಶ್ಚಿತ ಎಂಬ ನಂಬಿಕೆಯಿಂದ ವಿವಿಧ ಜಾತಿಯ ಜನರು ತಮ್ಮ ತಮ್ಮ ಕುಲದ ಆಚಾರಗಳನ್ನು ಚಾಚೂತಪ್ಪದೆ ಪಾಲಿಸಿಕೊಂಡು ಬರುತ್ತಿದ್ದರು.

> "ಮಹಾಭಾರತದಲ್ಲಿ ಭೀಮಸೇನನನ್ನು ಮಹಾಸರ್ಪದ ರೂಪದಲ್ಲಿದ್ದ ನಹುಷನು ಹಿಡಿದುಕೊಂಡಿದ್ದ ಸಂದರ್ಭದಲ್ಲಿ, ಧರ್ಮರಾಜನು ಆಡುವ ಮಾತುಗಳು ಇದನ್ನು ಖಚಿತಪಡಿಸುತ್ತವೆ. ಬ್ರಾಹ್ಮಣನಾರು? ಎಂಬ ಪ್ರಶ್ನೆಗೆ ಧರ್ಮರಾಜನ ಉತ್ತರ 'ಯಾರಲ್ಲಿ ಶಾಸ್ತ್ರಗಳು ಹೇಳುವಂತಹ ಸತ್ಯಸಂಧತೆ, ದಾನಶೀಲತೆ, ಸಚ್ಚಾರಿತ್ರ್ಯತೆ, ವಿರಕ್ತತೆ, ಕ್ಷಮಾಶೀಲತೆ, ಋಜುತ್ವ, ಅನುಕಂಪ ಮುಂತಾದ ಗುಣಗಳಿವೆಯೋ ಆತನೇ ಬ್ರಾಹ್ಮಣ. ಆತನು ತನ್ನ ಕರ್ಮದಿಂದ ಬ್ರಾಹ್ಮಣನೇ. ಅದರಂತೆ ಹುಟ್ಟಿನಿಂದ ಬ್ರಾಹ್ಮಣನಾಗಿದ್ದರೂ, ಈ ಗುಣಗಳನ್ನು ಹೊಂದಿಲ್ಲದಿದ್ದರೆ, ಆತ ಶೂದ್ರನೇ, ಹೀಗೆ ಗುಣ ಸಂಬಂಧವಾದ ಆಚಾರಗಳನ್ನು ಪಾಲಿಸಲು ಶಾಸ್ತ್ರ ಗ್ರಂಥಗಳ ಆಧಾರ ಜನರಲ್ಲಿ ಬಲವಾದ ನಂಬಿಕೆಯನ್ನು ಬೆಳೆಸಿತ್ತು."[೧೩]

ಹೀಗೆ ಪ್ರಾಚೀನ ಕಾಲದಿಂದಲೂ ಜನರು ಕರ್ಮಾಚರಣೆಯಲ್ಲಿ ನಂಬಿಕೆಯನ್ನು ಹೊಂದಿದ್ದು, ತಮ್ಮ ದುಃಸ್ಥಿತಿಗೆ ಪೂರ್ವಜನ್ಮದ ಪಾಪ ಕರ್ಮಗಳೇ ಕಾರಣವೆಂದೂ, ಅದನ್ನು ವಿಧಿ ಬರಹವೆಂದೂ ನಂಬುವರು. ತಮ್ಮ ಅಜಾಗರೂಕತೆಯಿಂದಾದ ತಪ್ಪುಗಳಿಗೆ ಬ್ರಹ್ಮಲಿಖಿತ, ಹಣೆಬರಹ ಎಂದು ನಂಬುವ ಜನ ಇಂದಿಗೂ ಇದ್ದಾರೆ.

೫. ಅಲ್ಲಮನ ಸಾಧನೆ

ತಮ್ಮ ಜೀವನದ ಸ್ಥಿತಿ-ಗತಿಗೆ ಕರ್ಮಸಿದ್ಧಾಂತವನ್ನು ನಂಬುವ ಭಾರತೀಯರು ದೇವರಿಗೂ ಹಲವು ರೀತಿಯ ಅವತಾರಗಳನ್ನೂ ಲೀಲಾ ವಿನೋದಗಳನ್ನು ಸೃಷ್ಟಿಸಿರುವರು. ತಮ್ಮ ಅನುಕೂಲಕ್ಕೆ ಮನೆಗಳನ್ನು ಕಟ್ಟಿಕೊಳ್ಳುವ ನಾವು ದೇವರಿಗೂ ಆಲಯಗಳನ್ನು ನಿರ್ಮಿಸಿ, ಅದರೊಳಗೆ ಶಿಲಾಮೂರ್ತಿಗಳನ್ನು ಪ್ರತಿಷ್ಠಾಪಿಸಿ, ಅಲಂಕರಿಸಿ ಪೂಜಿಸುವೆವು. ಇಂತಹ ಆಚರಣೆಗಳನ್ನು ಅಲ್ಲಮನು ನಿರಾಕರಿಸುವನು, ಸಮಾಜದಲ್ಲಿ ಆಳವಾಗಿ ಬೇರುಬಿಟ್ಟಿದ ಜಾತಿ, ವರ್ಗ, ಪಂಥಗಳೆಂಬ ಯಾವ ಬಗೆಯ ಮೂಲದ ಆಚರಣೆಯನ್ನು ಅಲ್ಲಮನು ಪುರಸ್ಕರಿಸುವುದಿಲ್ಲ. ಮಾನ್ಯಮಾಡುವುದಿಲ್ಲ, ಅಲ್ಲಮನ ದಾರಿ ಬಯಲ ಹೋಗುವ ದಾರಿ, "ಬಸವೇಶ್ವರನು ತನ್ನ ಪ್ರಭಾವಕ್ಕೊಳಗಾದ ಜನರ ಮನದಲ್ಲಿ ಭಕ್ತಿಯನ್ನು ಅರಳಿಸುವ ಜ್ಯೋತಿಸ್ವರೂಪವಾದ ಮೂಲ ವಿಗ್ರಹವಾದರೆ, ಅಲ್ಲಮ ಪ್ರಭುದೇವನು ಈ ಭಕ್ತಿಗೆ ಪ್ರೇರಕವೂ, ಪೂರಕವೂ ಆದ 'ಜ್ಞಾನ'ವನ್ನು, ದೇಶ ದೇಶಗಳಲ್ಲಿ ದೂರದೂರದಲ್ಲಿರುವ ಮುಮುಕ್ಷುಗಳ ಮಾರ್ಗದರ್ಶನಕ್ಕಾಗಿ ಪ್ರಸರಿಸಲು ಜಂಗಮ ರಶ್ಮಿರೂಪಿಯಾಗಿರುವ ಉತ್ಸವ ಮೂರ್ತಿಯಾದನು. ಅವನು ಸಾಧಿಸಿದ ಸಿದ್ಧಿ ಮತ್ತು ಉಪದೇಶಿಸಿದ ಪರಮಾರ್ಥವು ನಿರ್ವಾಣ ಅಥವಾ ಬಯಲು. ಅದನ್ನು ಸಾಕ್ಷಾತ್ಕಾರ ಮಾಡಿಕೊಳ್ಳಲು ಹೇಳಿದ ಮಾರ್ಗ 'ಯೋಗ'".[೧೪] "ಬಯಲು, ಶೂನ್ಯ ಸ್ಥಿತಿಯನ್ನು ಜೇಡರ ದಾಸಿಮಯ್ಯನು 'ಆಡಬಾರದ ಬಯಲು, ನುಡಿಯಬಾರದ ಬಯಲು, ಸುಡಬಾರದ ಬಯಲು, ಹಿಡಿಯಬಾರದ ಬಯಲು, ಈ ಒಡಲಿಲ್ಲದ ಬಯಲೊಳಗೆ ಅಡಗಿದ ಭೇದವ ಈ ಲೋಕದ ಜಡರೆತ್ತ ಬಲ್ಲರೈ" ಎಂದು ಹೇಳಿರುವನು.[೧೫]

> "ಬಯಲು ; ಬ್ರಹ್ಮಾಂಡವು ಮೂರ್ತವಾಗುವುದಕ್ಕೆ ಮುನ್ನಿನ ಸ್ಥಿತಿಯನ್ನು ವಚನಕಾರರು ಬಯಲೆಂದು ಸೂಚಿಸುತ್ತಾರೆ. ಇಂದ್ರಿಯಾತೀತವಾದ ಈ ಅಮೂರ್ತ ಸ್ಥಿತಿ ಗೂಢವಾದುದು; ಅಲೆಗಳಿಲ್ಲದ ಸಮುದ್ರದಂತೆ ಶಾಂತ - ಸ್ತಬ್ಧ. ಮೂಲ ಸ್ಥಿತಿಯಲ್ಲಿ ಬಯಲು. ತರುವಾಯ ಬಯಲಿನಿಂದ ಜಗತ್ತು. ಕೊನೆಯಲ್ಲಿ ಬಯಲಿನಲ್ಲಿಯೇ ಜಗತ್ತು ಲಯವಾಗುತ್ತದೆ. ಶೂನ್ಯ ಮತ್ತು ನಿರವಯ ಎಂಬ ಶಬ್ದಗಳು ಬಯಲಿನ ಪರ್ಯಾಯ ಶಬ್ದಗಳು."[೧೬]

ಅಲ್ಲಮಪ್ರಭು ಸಮಾಜದಲ್ಲಿ ಯಾವ ಬಗೆಯ ಸಾಂಸ್ಥಿಕವಾದ ಕೊಳೆಯೂ ನಿಲ್ಲಬಾರದು ಎಂಬ ಆಶಯವನ್ನು ತನ್ನ ವಚನಗಳಲ್ಲಿ ವ್ಯಕ್ತಪಡಿಸಿದ್ದಾನೆ. ಬಯಲನ್ನು ಹೋಗುವ ಮಾರ್ಗಕ್ಕೆ ಅಡ್ಡಿಯಾಗುವ ಎಲ್ಲ ಬಗೆಯ ಆಚಾರಗಳನ್ನು, ಆಚರಣೆಗಳನ್ನು ನಿರಾಕರಿಸಿ, ಆತ್ಮೋನ್ನತಿಗೆ ಸೂಕ್ತವಾದ ಸಾಧನಾ ಮಾರ್ಗವನ್ನು ವ್ಯಕ್ತಿಯು ಅನುಸರಿಸಲು ಸ್ವಾತಂತ್ರ್ಯ ಮತ್ತು ಮುಕ್ತವಾದ ವಾತಾವರಣ ಸಮಾಜದಲ್ಲಿರಬೇಕೆಂದು ಬಯಸುತ್ತಾನೆ.

> "ಅಲ್ಲಮನು ತಾನಾಗಲಿ, ತನ್ನ ಸಹಜೀವಿಗಳಲ್ಲಿ ಯಾವನಾಗಲಿ ಎಂದೂ ಅಲ್ಪವೆಂದೂ, ಅನಲ್ಪವಾದುದು ಅಸಾಧ್ಯವೆಂದೂ ಕ್ಷಣಾರ್ಧವೂ ಬಗೆದವನಲ್ಲ. ಆ ನಿಲುವಿನಲ್ಲಿ ನಿಂತ ಅವನ ಮೂರ್ತಿಯ ಔನ್ನತ್ಯ ಮತ್ತು ಅವನ ವಾಣಿಯ ಪ್ರಕರ್ಷತೆ ಅಳ್ಳದೆಯವನನ್ನೂ ಹುಲಿಯಾಗಿಸುವ ಸ್ಪರ್ಶಗುಣವನ್ನು ಪಡೆದುಕೊಂಡಿತ್ತು."[೧೭]

ಹೀಗೆ ಅಲ್ಲಮಪ್ರಭು ತನ್ನ ವಚನಗಳ ಮೂಲಕ ಸಮಾಜದಲ್ಲಿದ್ದ ಎಲ್ಲ ಬಗೆಯ ಮೂಢನಂಬಿಕೆಗಳನ್ನು, ಆಚಾರ - ವಿಚಾರಗಳನ್ನು ನಿರ್ಮೂಲನ ಮಾಡಬೇಕೆಂಬ ಆಶಯವನ್ನು ಹೊಂದಿದ್ದನು. ಜನರಲ್ಲಿದ್ದ ಅಲ್ಪತನವನ್ನು ಅವರ ಅರಿವಿಗೆ ತರುವ ಮೂಲಕ ಪ್ರತಿಯೊಬ್ಬರ ಆತ್ಮೋದ್ಧಾರಕ್ಕಾಗಿ ನೆರವಾಗುವಂತಹ ವಚನಗಳನ್ನು ರಚಿಸಿದನು.

[illegible]

[illegible]

> [illegible]

[illegible]

> [illegible]

[illegible]

ಅರ್ಥವಿಲ್ಲದ ಆಚಾರದಲ್ಲಿ ಮೈಮರೆಯುವ ಜನರನ್ನು ಎಚ್ಚರಿಸಿದನು. ಹಿರಿಯರು, ಗುರುಗಳು, ಶರಣರು ಎನಿಸಿಕೊಂಡವರು ತಮಗೆ ಅರಿವಿಲ್ಲದಂತೆ ಮೈಗೂಡಿಸಿಕೊಂಡಿದ್ದ ಅನಾಚಾರಗಳನ್ನು ಅವರ ಅರಿವಿಗೆ ತರುವ ಪ್ರಯತ್ನ ಮಾಡಿದನು.

ಅಲ್ಲಮನ ವಚನಗಳು ವೈಚಾರಿಕತೆಯಿಂದ ಕೂಡಿದ್ದು, ಪ್ರತಿಯೊಬ್ಬರ ವ್ಯಕ್ತಿತ್ವದ ವಿಕಾಸಕ್ಕೆ ನೆರವಾಗುವಂತಿವೆ. ಇದು ಅಲ್ಲಮನ ಸಾಧನೆ ಹಾಗೂ ಸಿದ್ಧಿ, ಹಾಗಾಗಿ ಅಲ್ಲಮನ ವಚನಗಳು ಇಂದಿಗೂ ಹೆಚ್ಚು ಪ್ರಸ್ತುತವಾಗುತ್ತವೆ.

ಅಡಿಟಿಪ್ಪಣಿಗಳು

೧. ಚಾಮರಸನ ಪ್ರಭುಲಿಂಗಲೀಲೆ, ಅನುವಾದ : ಡಾ. ಎಸ್. ವಿದ್ಯಾಶಂಕರ್, ಪುಟ (ಪೀಠಿಕೆ) ೩

೨. ಚಾಮರಸನ ಪ್ರಭುಲಿಂಗಲೀಲೆ, ಅನು : ಡಾ. ಎಸ್. ವಿದ್ಯಾಶಂಕರ್, (ಮಂಗಳಾಚರಣ), ಪುಟ ೨೧.

೩. ಅಲ್ಲಮ ಪ್ರಭುದೇವರ ವಚನ ಸಂಪುಟ, ಸಂ : ಡಾ. ಬಿ.ವ್ಹಿ.ಮಲ್ಲಾಪುರ, ಪುಟ (ಪ್ರಸ್ತಾವನೆ) XIX

೪. ಅದೇ, ಪು. XVIII

೫. ಪ್ರಭುದೇವರ ಷಟ್ಸ್ಥಲದ ವಚನಗಳು, ಪೀಠಿಕೆ, ಸಂ. ಮತ್ತು ವ್ಯಾಖ್ಯಾನಕಾರ : ಡಾ. ಎಲ್. ಬಸವರಾಜು, ಪು. XI

೬. ಅದೇ, ಪು. XXXIX

೭. ಅದೇ, ಪು. XI

೮. ೧೧೩೬, ಅಲ್ಲಮನ ವಚನ ಚಂದ್ರಿಕೆ, ಸಂ. : ಎಲ್. ಬಸವರಾಜು, ಪು. ೨೫೫.

೯. ಅಲ್ಲಮನ ಪ್ರಭು ಮತ್ತು ಶೈವ ಪ್ರತಿಭೆ, ಲೇ. : ಡಿ.ಆರ್. ನಾಗರಾಜ್, ಪು. ೧೬೮.

೧೦. ಸಂಕ್ಷಿಪ್ತ ಕನ್ನಡ ನಿಘಂಟು (ಪರಿಷ್ಕೃತ), ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ಪು. ೧೧೮೧

೧೧. ವಚನ ಪರಿಭಾಷಾ ಕೋಶ, ಸಂ. : ಡಾ. ಎಸ್. ವಿದ್ಯಾಶಂಕರ್, ಪು. ೨೦

೧೨. ಭಾರತೀಯ ಸಮಾಜ, ವಿಸ್ತೃತ ಆವೃತ್ತಿ (೧೯೯೮), ಚ.ನ. ಶಂಕರರಾವ್, ಪು. ೫೭-೫೮.

೧೩. ಅದೇ, ಪು. ೫೮.

೧೪. ಅಲ್ಲಮನ ವಚನ ಚಂದ್ರಿಕೆ, ಸಂ. : ಎಲ್. ಬಸವರಾಜು, ಪು. ೪೪.

೧೫. ವಚನ ಪರಿಭಾಷಾ ಕೋಶ, ಸಂ. : ಡಾ. ಎಸ್. ವಿದ್ಯಾಶಂಕರ್, ಪು. ೧೪೧.

೧೬. ವಚನಕಮ್ಮಟ, ಸಂ. : ಕೆ. ಮರುಳಸಿದ್ದಪ್ಪ, ಕಿ.ರಂ. ನಾಗರಾಜ, ಪು. ೧೬೧.

೧೭. ಪ್ರಭುದೇವರ ಷಟ್ಸ್ಥಲದ ವಚನಗಳು, ಸಂ. : ಡಾ. ಎಲ್. ಬಸವರಾಜು, ಪು. XXXVIII.

* * *

ಅಧ್ಯಾಯ – ೩

ಮಾಯಾ ಪರಿಕಲ್ಪನೆಯ ನಿರಾಕರಣೆ

ಅಧ್ಯಾಯ – ೩

ಮಾಯಾ ಪರಿಕಲ್ಪನೆಯ ನಿರಾಕರಣೆ

ವೈದಿಕರಲ್ಲಿ ಅದ್ವೈತ, ದ್ವೈತ ಮತ್ತು ವಿಶಿಷ್ಟಾದ್ವೈತ ಎಂಬ ಮೂರು ಸಿದ್ಧಾಂತಗಳು ಪ್ರಚಲಿತದಲ್ಲಿವೆ. ವೈದಿಕ ಮತ ಪ್ರವರ್ತಕ ಆಚಾರ್ಯರುಗಳಾದ ಶಂಕರ, ರಾಮಾನುಜ ಮತ್ತು ಮಧ್ವರು ಈ ಮೂರು ಸಿದ್ಧಾಂತಗಳನ್ನು ಕ್ರಮವಾಗಿ ಪ್ರತಿಪಾದಿಸಿದರು. ಉಪನಿಷತ್ತು, ಬ್ರಹ್ಮಸೂತ್ರ ಮತ್ತು ಶ್ರೀ ಭಗವದ್ಗೀತೆಗಳು ಇವರಿಗೆ ಪವಿತ್ರವಾದ ಧರ್ಮಗ್ರಂಥಗಳಾಗಿವೆ. ಉಪನಿಷತ್ತುಗಳನ್ನು ವೇದಾಂತ ಎನ್ನುವರು.

> "ಉಪನಿಷತ್ತುಗಳು ವೇದಗಳ ಶಿರಸ್ಸು, ವೇದಗಳ ಆರಂಭ ಭಾಗಗಳಲ್ಲಿ ಯಜ್ಞಯಾಗಾದಿಗಳು ವಿವರಿಸಲ್ಪಟ್ಟಿವೆ. ಅವುಗಳ ಅಂತ್ಯ ಭಾಗಗಳಲ್ಲಿ ಪರಬ್ರಹ್ಮವು ಪ್ರತಿಪಾದಿಸಲ್ಪಟ್ಟಿದೆ. ಆದುದರಿಂದ ಅವೇ ಉಪನಿಷತ್ತಿನ ಭಾಗಗಳು, ಉಪಸಮೀಪೇ ಬ್ರಹ್ಮದ ಹತ್ತಿರದಲ್ಲಿ ನಿಷೀದಂತೆ ಕುಳಿತಿವೆ ಎಂಬುದು ಆ ಉಪನಿಷತ್ ಶಬ್ದದ ನಿರ್ವಚನ. ಆದುದರಿಂದ ಈ ಭಾಗವು ನೇರವಾಗಿ ಪರಬ್ರಹ್ಮವನ್ನು ನಮಗೆ ತೋರಿಸಿಕೊಡುತ್ತವೆ ಎಂದು ಅಭಿಪ್ರಾಯ."[೧]

ಮಾಯಾ ಪರಿಕಲ್ಪನೆ ಅದ್ವೈತ ಸಿದ್ಧಾಂತದ ಫಲ. ಅದ್ವೈತ ಸಿದ್ಧಾಂತವನ್ನು ಪ್ರತಿಪಾದಿಸಿದವರು ಶ್ರೀ ಶಂಕರಾಚಾರ್ಯರು. ಈ ಸಿದ್ಧಾಂತದ ಪ್ರಕಾರ ಇಡೀ ಜಗತ್ತು ಬ್ರಹ್ಮಮಯವಾದುದು. ಜ್ಞಾನದ ಮೂಲಕ ಬ್ರಹ್ಮ ಸಾಕ್ಷಾತ್ಕಾರವಾದಾಗ ಮಾತ್ರ ಬ್ರಹ್ಮದ ನಿಜಸ್ವರೂಪ ತಿಳಿಯುವುದು. ಆಗ ಕಾಣುವ ಜಗತ್ತು ಇಲ್ಲವಾಗಿ ಎಲ್ಲವೂ ಬ್ರಹ್ಮಮಯ ಎಂಬ ಅನುಭವ ಉಂಟಾಗುತ್ತದೆ. ಬ್ರಹ್ಮವನ್ನು ಮಾಯೆ ಮುಸುಕಿರುವುದರಿಂದ ಜಗತ್ತು, ದುಃಖ, ಸುಖ ಎಂಬ ಅನುಭವ ಜೀವನಿಗೆ ಉಂಟಾಗುತ್ತದೆ. ಹೀಗೆ ಇಡೀ ಜಗತ್ತು ಬ್ರಹ್ಮಮಯವಾಗಿದ್ದು, ಉಳಿದ ನಾಮರೂಪಗಳೆಲ್ಲವೂ ಮಾಯೆಯಿಂದಾಗಿರುತ್ತದೆ. ಅಂದರೆ ಬ್ರಹ್ಮವೊಂದೇ ಸತ್ಯ. ಉಳಿದುವೆಲ್ಲವೂ ಮಿಥ್ಯ. ಮಾಯೆಯ ಕಾರಣದಿಂದ ಅವು ನಮಗೆ ಸತ್ಯವಾಗಿ ಗೋಚರಿಸುತ್ತವೆ. ಮಾಯಾಪೊರೆ ಕಳಚಿದೊಡನೆ, ಜೀವಾತ್ಮ ಮತ್ತು ಪರಮಾತ್ಮ ಎಂಬ ಭೇದ ಕಳಚಿ ಎರಡೂ ಒಂದೇ ಎಂಬ ಅರಿವು ಬರುತ್ತದೆ. ಈ ಅರಿವಿಗಾಗಿ ಸದ್ಗುರುವಿನ ಸನ್ಮಾರ್ಗ ಅಗತ್ಯ ಎಂಬುದೇ ಅದ್ವೈತ ಸಿದ್ಧಾಂತ ದರ್ಶನ.

ವೇದಾಂತ ದರ್ಶನದ ಈ ಸಿದ್ಧಾಂತ ಪ್ರತಿಪಾದನೆಗೆ ಹೆಣ್ಣು, ಹೊನ್ನು, ಮಣ್ಣು ಎಂಬ ತ್ರಿವಿಧ ಮಾಯೆ ಎಂಬ ಪರಿಕಲ್ಪನೆಯನ್ನು ಜನಸಾಮಾನ್ಯರಲ್ಲಿ ಪ್ರಚಾರ ಮಾಡಲಾಯಿತು. ಇದರಿಂದಾಗಿ ಹೆಣ್ಣನ್ನು ಮಾಯೆ ಎಂದು

ಪರಿಗಣಿಸಿ ಅವಳನ್ನು ಕೀಳಾಗಿ ಕಾಣಲಾಗುತ್ತಿತ್ತು. ಪುರುಷನಿಗೆ ಸಮಾನವಾದ ಗೌರವ, ವಿಶ್ವಾಸವನ್ನು ಹೆಣ್ಣಿಗೆ ನೀಡಿರಲಿಲ್ಲ.

"ಮಾಯೆ : ಶುದ್ಧಾದ್ವೈತಿಗಳಲ್ಲಿ ಮಾಯೆಗೆ ಒಂದು ವಿಶೇಷಾರ್ಥವಿದೆ. ಜಗತ್ತು ಸುಳ್ಳೆಂದು ಅವರು ವಾದಿಸುವರು. ಇದೇ ಅವರ ಪ್ರಕಾರ ಮಾಯೆ."[೨]

"ವೇದ - ಉಪನಿಷತ್ತುಗಳ ಕಾಲದಲ್ಲಿ ಗಾರ್ಗಿ, ಮೈತ್ರೇಯಿಯರಂಥ ಕೆಲವರು ಆಧ್ಯಾತ್ಮವಿದ್ಯೆಯಲ್ಲಿ ಬಲ್ಲಿದರಾಗಿದ್ದು, ಪುರುಷ ಸಮಾನ ಅವಕಾಶಗಳನ್ನು ಪಡೆದುಕೊಂಡಿದ್ದರೆಂದು ತಿಳಿದು ಬಂದರೂ ಮುಂದೆ ಧರ್ಮಶಾಸ್ತ್ರಗಳು ಹುಟ್ಟಿಕೊಂಡ ಮೇಲೆ ಏನೆಲ್ಲ ಕಟ್ಟುಪಾಡುಗಳು ನಿರ್ಮಿತವಾಗಿ, ಅವಳಿಗೆ ನಿಯಮ - ನಿರ್ಬಂಧಗಳ ಶೃಂಖಲೆಯನ್ನು ತೊಡಿಸಲಾಯಿತು. ಸ್ತ್ರೀಯು ಮೋಕ್ಷಯೋಗ್ಯಳಲ್ಲವೆಂದು ಹೇಳುವ ಮೂಲಕ ಭಾರತೀಯರು ಹೆಣ್ಣಿನ ಆಧ್ಯಾತ್ಮಿಕ, ಸಾಮಾಜಿಕ, ಆರ್ಥಿಕ, ನೈತಿಕ ಸಾಂಸ್ಕೃತಿಕ ಅವಕಾಶಗಳನ್ನೆಲ್ಲ ಕಿತ್ತುಕೊಂಡು ಅವಳನ್ನು ಮತ್ತಷ್ಟು ಕನಿಷ್ಠಳನ್ನಾಗಿ ಮಾಡಿದರು. ಇಂಥ ಸಂದರ್ಭದಲ್ಲಿ ಹುಟ್ಟಿ ಬಂದ ಶಿವಶರಣರು ಸ್ತ್ರೀ ಸಮಾಜವನ್ನು ಸಾಮಾಜಿಕ ಆಧಾರದ ಮೇಲೆ ಕಟ್ಟಲು ತೊಡಗಿದರು."[೩]

ಅಲ್ಲಮಪ್ರಭು ಮಾಯಾ ಪರಿಕಲ್ಪನೆಯನ್ನು ನಿರಾಕರಿಸುತ್ತಾನೆ.

ಹೊನ್ನು ಮಾಯೆಯೆಂಬರು, ಹೊನ್ನು ಮಾಯೆಯಲ್ಲ
ಮಣ್ಣು ಮಾಯೆಯೆಂಬರು, ಮಣ್ಣು ಮಾಯೆಯಲ್ಲ
ಹೆಣ್ಣು ಮಾಯೆಯೆಂಬರು, ಹೆಣ್ಣು ಮಾಯೆಯಲ್ಲ
ಮನದ ಮುಂದಣ ಆಸೆಯೆ ಮಾಯೆ ಕಾಣಾ ಗುಹೇಶ್ವರ![೪] ೭೨

ಅಲ್ಲಮನ ದೃಷ್ಟಿಯಲ್ಲಿ ಹೊನ್ನು, ಮಣ್ಣು, ಹೆಣ್ಣು ಮಾಯೆಯಲ್ಲ. ಜೀವನಧರ್ಮ ನಿಂತಿರುವುದೇ ಈ ಮೂರು ವಿಧವಾದ ದ್ರವ್ಯಗಳ ಮೇಲೆ. ಇವು ಅತ್ಯಂತ ಅಮೂಲ್ಯವಾದವುಗಳು. ಇವನ್ನು ಅತಿ ಎಚ್ಚರದಿಂದ ಬಳಸಿಕೊಳ್ಳಬೇಕು. ಈ ಮಣ್ಣಿನಿಂದ ಕಾಯ, ಈ ದೇಹದ ರಚನೆಗೆ ಪಂಚಭೂತಗಳಲ್ಲೊಂದಾದ ಮಣ್ಣು ಅಗತ್ಯ. ಅಂತಿಮವಾಗಿ ಲೀನವಾಗುವುದೂ ಮಣ್ಣಿನಲ್ಲಿಯೇ. ಹೊನ್ನು ಕೂಡಾ ಈ ಭೂಮಿಯ ಒಂದು ಭಾಗವೇ ಆಗಿದೆ. ಆರ್ಥಿಕ ವ್ಯವಹಾರಕ್ಕೆ ಹೊನ್ನು, ಅರ್ಥ ಅತಿ ಅವಶ್ಯ. ಇನ್ನು ಹೆಣ್ಣು ಜೀವಜಾಲದ ಮುಂದುವರಿಕೆಗೆ ಅನಿವಾರ್ಯವಾದ ಸೃಷ್ಟಿಯ ಲಿಂಗ ವ್ಯವಸ್ಥೆಯ ಮುಖ್ಯ ಪ್ರಭೇದ. ಸಕಲ ಜೀವ ಜಂತುಗಳಾದಿಯಾಗಿ ಮುಂದಿನ ಪೀಳಿಗೆಯ ರಚನೆಗೆ ಹಾಗೂ ಸಂರಕ್ಷಣೆಗೆ ಹೆಣ್ಣು ಎಂಬ ರಚನೆ ಅತ್ಯವಶ್ಯ ಎಂಬುದು ವೈಜ್ಞಾನಿಕ ಸತ್ಯ. ಹಾಗಾಗಿ ಅಲ್ಲಮಪ್ರಭು ಈ ಹೊನ್ನು, ಹೆಣ್ಣು ಮಣ್ಣು ಎಂಬುದನ್ನು ತ್ರಿವಿಧ ಮಾಯೆಯಲ್ಲ ಎಂದು ನಿರ್ದಾಕ್ಷಿಣ್ಯವಾಗಿ ತನ್ನ ಈ ವಚನದಲ್ಲಿ ಪ್ರತಿಪಾದಿಸಿದ್ದಾನೆ. ಮುಂದುವರೆದು ಮನದ ಮುಂದಿರುವ ಆಸೆಯೇ ಮಾಯೆ ಎನ್ನುತ್ತಾನೆ.

ಆಸೆ ಎಂಬುದು ಒಂದು ಮನೋ ವ್ಯಾಪಾರ. ಎಲ್ಲ ಆಸೆಗಳು ಹುಟ್ಟುವುದು, ಬೆಳೆಯುವುದು, ಅಳಿಯುವುದು, ವಿಕಾರ ಹೊಂದುವುದು ಮನಸ್ಸಿನಲ್ಲಿ. ಅಂತಹ ಮನೋವ್ಯಾಪಾರ ಕಲುಷಿತವಾದರೆ ಮಾನವ ಎಲ್ಲ ರೀತಿಯ ಭ್ರಮೆಗಳಿಗೆ ಒಳಗಾಗುತ್ತಾನೆ. ಆಗ ತನ್ನ ಅರಿವನ್ನು ಕಳೆದುಕೊಳ್ಳುತ್ತಾನೆ. ಮರುಳನಾಗುತ್ತಾನೆ. ಮರುಳತನದಿಂದ

[illegible]

[illegible]

[illegible]

[illegible]

[illegible]

ದುರಳತನವೂ ತಾನೇ ತಾನಾಗಿ ಬರುತ್ತದೆ. ನಮ್ಮ ಮನಸ್ಸಿನ ಎಲ್ಲ ದುಃಖಗಳಿಗೂ ಆಸೆಯೇ ಕಾರಣ ಎಂದು ಬುದ್ಧನು ಹೇಳಿದ್ದನ್ನು ಇಲ್ಲಿ ಸ್ಮರಿಸಬಹುದು. ಆದ್ದರಿಂದ ನಮ್ಮ ಮನಸ್ಸಿನ ಆಸೆಯನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳಬೇಕೆಂಬುದೇ ಅಲ್ಲಮನ ವಚನದ ಆಶಯ. ಹೀಗೆ ಅಲ್ಲಮ ಮಾಯಾ ಪರಿಕಲ್ಪನೆಯನ್ನು ನಿರಾಕರಿಸಿ, ಹೆಣ್ಣಿನ ಅಸಮಾನತೆಯನ್ನು ಪರಿಹರಿಸಲು ಪ್ರಯತ್ನಿಸುತ್ತಾನೆ. ಆತ್ಮಕ್ಕೆ ಲಿಂಗಭೇದವಿಲ್ಲ ಎಂಬ ತತ್ತ್ವವನ್ನು ಪ್ರತಿಪಾದಿಸುತ್ತಾನೆ.

ಹೀಗೆ ಅಲ್ಲಮ ಮನದ ಮುಂದಣ ಆಸೆಯೇ ಮಾಯೆ ಎನ್ನುವ ಮೂಲಕ ಸಾಂಪ್ರದಾಯಿಕವಾಗಿದ್ದ ಮಾಯಾವಾದವನ್ನು ನಿರಾಕರಿಸುತ್ತಾನೆ. ಪಟ್ಟಭದ್ರ ಹಿತಾಸಕ್ತಿಯನ್ನು ಮುರಿಯುತ್ತಾನೆ.

ಬ್ರಹ್ಮಪಾಶ, ವಿಷ್ಣುಮಾಯೆ ಎಂಬ ಬಲೆಯ ಬೀಸಿ
ಹೊನ್ನು, ಹೆಣ್ಣು, ಮಣ್ಣು, ತೋಱಿ ಮುಕ್ಕಣ್ಣನಾಡಿದ ಬೇಂಟೆಯು
ಆಸೆ ಎಂಬ ಕುಟುಕನಿಕ್ಕಿ
ಹೇಸದೆ ಕೊಂದೆಯಲ್ಲಾ ಗುಹೇಶ್ವರಾ![೫] ವ. ೨೧

ಬ್ರಹ್ಮ, ವಿಷ್ಣು, ಮಹೇಶ್ವರರು ಸೃಷ್ಟಿ, ಸ್ಥಿತಿ, ಲಯಗಳಿಗೆ ಕಾರಣರು ಎಂಬ ನಂಬಿಕೆ ಪ್ರಾಚೀನ ಕಾಲದಿಂದಲೂ ನಮ್ಮ ಸಮಾಜದಲ್ಲಿದೆ. ಜೀವ ಹುಟ್ಟಿದ ಮೇಲೆ ಅದು ಪಾಶವೇ. ವಿಷ್ಣು ಜೀವನ ನಿರ್ವಹಣೆಯ ರೀತಿಗೆ ಕಾರಣಕರ್ತನು. ಮುಕ್ಕಣ್ಣನಾದ ಪರಶಿವನು ಹೊನ್ನು, ಹೆಣ್ಣು, ಮಣ್ಣುಗಳ ಬಗ್ಗೆ ಆಸೆಯೆಂಬ ಕಾಳನ್ನು ಚೆಲ್ಲಿ ಜೀವಗಳ ಬೇಟೆಯಾಡುವನು.

ಮಾಯೆ - ಶುದ್ಧಾದ್ವೈತಿಗಳ ನಿಲುವನ್ನು ಶರಣರು ಒಪ್ಪುವುದಿಲ್ಲ.

"ಮಾಡುವ ಕಾರ್ಯದಲ್ಲಿ ಎರಡು ಬಗೆ. ಕೆಟ್ಟದ್ದಕ್ಕೆ ಪ್ರೇರಣೆ ಮಾಡುವುದೇ ಮಾಯೆಯು. ಇದನ್ನು ಮೊದಲಿಗೆ ಮಾರಮಾಡಬೇಕೆಂದು ಶಿವಶರಣರು ಹೇಳುವರು. ಶಿವಶರಣರು ತಮ್ಮ ವಚನಗಳಲ್ಲಿ ಸಂಸಾರ ಹೇಯಸ್ಥಲ, ಮಾಯಾವಿಡಂಬನ ಸ್ಥಲ ಎಂದು ಸ್ಥಲವನ್ನು ಕಲ್ಪಿಸಿ ಮನುಷ್ಯನು ಈ ಮಾಯೆಯಿಂದ ದೂರವಾಗಬೇಕೆಂದು ಹೇಳಿರುವರು."[೬]

"ಸಾಧನೆಯಲ್ಲಿ ನಿರತನಾದ ಭಕ್ತನ ಮನದಲ್ಲಿ ತಳಮಳವನ್ನುಂಟು ಮಾಡಿ ಅವನನ್ನು ಸತ್ಪಥದಲ್ಲಿ ನಡೆಯುವಂತೆ ಮಾಡುವ ದುಷ್ಟಶಕ್ತಿಯನ್ನು 'ಮಾಯೆ' ಎಂದು ಶರಣರು ಭಾವಿಸಿದಂತಿದೆ."[೭]

ಆಸೆಯಿಂದ ಉಂಟಾಗುವ ಮೋಹವೇ ಮಾಯಾಪಾಶ. ಈ ಆಸೆಯೆಂಬ ಗುಟುಕನ್ನು ಇಕ್ಕಿದವನು ಮುಕ್ಕಣ್ಣ. ಇಲ್ಲಿ ಅಲ್ಲಮ ಆಸೆಯಿಂದ ಉಂಟಾಗುವ ಮೋಹವೇ ಮಾಯಾಪಾಶ ಎನ್ನುತ್ತಿದ್ದಾನೆಯೇ ಹೊರತು ಹೆಣ್ಣು, ಹೊನ್ನು, ಮಣ್ಣುಗಳನ್ನು ತಮ್ಮಷ್ಟಕ್ಕೆ ತಾವೇ ಮಾಯೆ ಎನ್ನುತ್ತಿಲ್ಲ.

ಈ ಮಾಯಾಪಾಶ ಯಾರನ್ನೂ ಬಿಡದು. ಅದು ಎಲ್ಲರನ್ನು ಒಳಗೊಂಡಿದೆ ಎಂಬುದನ್ನು ಮತ್ತೊಂದು ವಚನದಲ್ಲಿ ಈ ರೀತಿ ತಿಳಿಸುತ್ತಾನೆ.

ಬ್ರಹ್ಮ ಘನವೆಂದಡೆ ಬ್ರಹ್ಮನ ನುಂಗಿತ್ತು ಮಾಯೆ
ವಿಷ್ಣು ಘನವೆಂದಡೆ ವಿಷ್ಣುವ ನುಂಗಿತ್ತು ಮಾಯೆ
ರುದ್ರ ಘನವೆಂದಡೆ ರುದ್ರನ ನುಂಗಿತ್ತು ಮಾಯೆ
ತಾ ಘನವೆಂದಡೆ ತನ್ನ ನುಂಗಿತ್ತು ಮಾಯೆ
ಸರ್ವವೊ ನಿನ್ನ ಮಾಯೆ
ಒಬ್ಬರನೊಳಗೊಂಡಿತ್ತೆ ಹೇಳಾ ಗುಹೇಶ್ವರಾ?[೮] ವ.ಸಂ. ೨೨

"ಬ್ರಹ್ಮ, ವಿಷ್ಣು, ರುದ್ರ ಇವರಲ್ಲಿ ಯಾರೂ ಶ್ರೇಷ್ಠರಲ್ಲ. ಏಕೆಂದರೆ ಈ ಮೂವರೂ ಮಾಯಾಶಕ್ತಿಗೆ ಒಳಗಾಗಿದ್ದಾರೆ. ಮಾಯೆಯ ಮೂರು ರೂಪಗಳಾದ ಕ್ರಿಯಾಶಕ್ತಿ, ಜ್ಞಾನಶಕ್ತಿ, ಇಚ್ಛಾಶಕ್ತಿಯಲ್ಲಿ ಮೂವರೂ ಮೋಹಿತರು. ಈ ಜಗತ್ತಿನಲ್ಲಿ ಯಾವನೇ ವ್ಯಕ್ತಿ ತಾನು ಕ್ರಿಯೆಯಲ್ಲಿ, ಶಕ್ತಿಯಲ್ಲಿ, ಜ್ಞಾನದಲ್ಲಿ ಶ್ರೇಷ್ಠರೆಂದು ಭಾವಿಸಿದರೆ ಆ ರೂಪದಲ್ಲಿಯೆ ಆ ಮಾಯೆ ಅವನನ್ನು ನುಂಗಿ ಬಿಟ್ಟಿರುತ್ತದೆ. ಈ ಮಾಯೆ ಒಬ್ಬರನ್ನು ಒಳಗೊಂಡಿದೆಯೆ? ದೇವ ದೇವತೆಗಳನ್ನು, ಸಕಲ ಜೀವಜಂತುಗಳನ್ನು ಆವರಿಸಿದೆ. ಎಲ್ಲವೂ ಮಾಯೆ. ಈ ಮಾಯೆ ಗುಹೇಶ್ವರ ನಿನ್ನ ಅಧೀನ."[೯]

ಬ್ರಹ್ಮ, ವಿಷ್ಣು, ಮಹೇಶ್ವರ ಎಂಬುದು ದೊಡ್ಡ ದೊಡ್ಡ ಪದವಿಗಳು. ಒಬ್ಬೊಬ್ಬರಿಗೆ ಒಂದೊಂದು ಜವಾಬ್ದಾರಿ, ಇವರಲ್ಲಿ ಯಾರು ಹೆಚ್ಚು? ಯಾರು ಕಡಿಮೆ? ಎಂಬ ಭಾವ ಮನಸ್ಸಿನ ಅಹಂಕಾರಕ್ಕೆ ಕಾರಣವಾಗುತ್ತದೆ. ನಾನು ದೊಡ್ಡವನು. ಅಜೇಯ ಎನ್ನುವ ಎಲ್ಲರನ್ನೂ ನುಂಗಿ ಹಾಕುವುದೇ ಮಾಯೆ. ಅಹಂಕಾರಕ್ಕಿಂತಲೂ ಮಿಗಿಲಾದ ಮಾಯೆ ಇನ್ನೊಂದಿಲ್ಲ. ಅಹಂಕಾರದಿಂದ ಮನುಷ್ಯ ಅರಿವನ್ನು ಕಳೆದುಕೊಳ್ಳುತ್ತಾನೆ, ನಾಶ ಹೊಂದುತ್ತಾನೆ. ಆದ್ದರಿಂದ ತಾ ಘನ, ಶ್ರೇಷ್ಠ ಎಂಬ ಭಾವ ಬಂದೊಡನೆ ತನ್ನ ಮಾಯೆ ಆವರಿಸುತ್ತದೆ. ಇದೆಲ್ಲವೂ ನಿನ್ನ ಅಧೀನ. ನಿನ್ನ ಇಚ್ಛೆಯಂತೆ ನಡೆಯುವ ಕ್ರಿಯೆ ಎಂದು ಅಲ್ಲಮಪ್ರಭು ಹೇಳುತ್ತಿದ್ದಾನೆ. ಹೀಗೆ ಮಾಯೆ ಎಂಬ ಶಕ್ತಿ ಜಗತ್ತನ್ನು ನಿಯಂತ್ರಿಸುತ್ತದೆ ಎಂಬ ಪರಿಕಲ್ಪನೆಯನ್ನು ಅಲ್ಲಮಪ್ರಭು ನಿರಾಕರಿಸುತ್ತಾನೆ.

ದೇವರೆಲ್ಲರ ಹೊಡೆ ತಂದು ದೇವಿಯರೊಳಗೆ ಕೂಡಿತ್ತು ಮಾಯೆ
ಹರಹರಾ, ಮಾಯೆ ಇದ್ದೆಡೆಯ ನೋಡಾ
ಶಿವಶಿವಾ, ಮಾಯೆ ಇದ್ದೆಡೆಯ ನೋಡಾ
ಎರಡೆಂಬತ್ತು ಕೋಟಿ ಪ್ರಮಂಥಗಣಂಗಳು
ಅಂಗಾಲ ಕಣ್ಣವರು, ಮೈಯೆಲ್ಲ ಕಣ್ಣವರು, ನಂದಿವಾಹನ ರುದ್ರರು
ಇವರೆಲ್ಲರೂ ಮಾಯೆಯ ಕಾಲುಗಾಹಿನ ಸರಮಾಲೆ
ಕಾಣಾ ಗುಹೇಶ್ವರಾ.[೧೦] ೨೩

"ಮಹಾಲಿಂಗ : ಅನಂತಕೋಟಿ ರುದ್ರಾದಿಗಳೆಲ್ಲರೂ ತಾವು ನಿತ್ಯ ಪರಿಪೂರ್ಣವಾದ ಮಹಾಘನ ಪರಶಿವತತ್ತ್ವ ಸ್ವರೂಪರೆಂದರಿಯದೆ ಕೈಲಾಸವೆಂಬ ಪ್ರಾದೇಶಿಕಪುರದಲ್ಲಿ ಆಶ್ರಿತರಾಗಿದ್ದು - ಅಲ್ಲಿಯ ಸಾಲೋಕ್ಯ ಸಾಮೀಪ್ಯ ಸಾರೂಪ್ಯ ಸಾಯುಜ್ಯರೆಂಬ ಅಲ್ಪ ಪದವಿಗಳಿಗೆ ಎರಗಿ ಮೆಚ್ಚಿ ಮರುಳಾಗಿರುವದಾಗಿ ಇವರೆಲ್ಲರೂ ಮಾಯಾಸಕ್ತರೆ."[೧೧]

ಮಾಯೆ ಇಲ್ಲದ ಎಡೆಯೇ ಇಲ್ಲ. ದೇವಾದಿದೇವತೆಗಳನ್ನು ಈ ಮಾಯೆ ಆವರಿಸಿಬಿಟ್ಟಿದೆ. ಇದರಿಂದ ಬಿಡಿಸಿಕೊಳ್ಳುವುದು ಕಷ್ಟ. ಏಕೆಂದರೆ ಈ ಅಧಿಕಾರ, ಪದವಿ ಎಂಬ ಮೋಹಕ್ಕೆ ಒಳಗಾದವರು ಯಾರೇ ಆಗಿರಲಿ, ಅವರು ಮಾಯಾಪಾಶಕ್ಕೆ ಬಂಧಿಯಾದವರೇ. ಮಾಯೆಯ ಕಾಲುಗಾಹಿನ ಸರಮಾಲೆ ಎಂದು ಅಲ್ಲಮಪ್ರಭು ಹೇಳುತ್ತಿದ್ದಾನೆ.

ಒಟ್ಟಿನಲ್ಲಿ ಅಲ್ಲಮನ ದೃಷ್ಟಿಯಲ್ಲಿ ಮಾಯೆ ಎಂಬುದು ನಮ್ಮ ಭ್ರಮೆಗಳು. ಹಣ, ಅಧಿಕಾರ, ಅಂತಸ್ತು, ಪದವಿ, ಹೊನ್ನು, ಹೆಣ್ಣು, ಮಣ್ಣಿನ ಮೇಲಿನ ಒಡೆತನದಿಂದ ಸುಖ, ಸಂತೋಷ ಪ್ರಾಪ್ತವಾಗುವುದೆಂದು, ಜೀವವು ಸದಾ ಹೆಣಗಾಡುವುದೇ ಮಾಯೆ. ಈ ರೀತಿಯ ಆಸೆಗಳಿಗೆ ಒಳಗಾದವರು ಅವುಗಳಿಂದ ಮುಕ್ತರಾಗುವುದು ಕಷ್ಟ. ಅದರಿಂದ ಹಲವು ಸಂಕಷ್ಟಗಳಿಗೆ ಒಳಗಾಗುವರು. ಆದ್ದರಿಂದ ನಮ್ಮ ಮನಸ್ಸನ್ನು, ಆಸೆಯನ್ನು ಸರಿಯಾದ ನಿಯಂತ್ರಣದಲ್ಲಿರಿಸಿಕೊಳ್ಳದೆ, ಅತಿಯಾದ ದುರಾಸೆಯನ್ನು ಬೆಳೆಸಿಕೊಂಡು ಅದರ ಹಿಂದೆ ಓಡುತ್ತಿದ್ದರೆ, ಅದರಿಂದ ಮುಕ್ತರಾಗದೆ ಹೆಣಗಬೇಕಾಗುತ್ತದೆ.

ಮಾಯೆ ಎಂಬ ಒಂದು ಶಕ್ತಿ ಇಡೀ ಜಗತ್ತನ್ನೇ ಆವರಿಸಿದೆ. ಆದ್ದರಿಂದ ಮಿಥ್ಯವಾದ ಜಗತ್ತು ಸತ್ಯವಾಗಿ ಗೋಚರಿಸುತ್ತದೆ ಎಂಬ ಅದ್ವೈತವಾದಿಗಳ ಮಾಯಾ ಪರಿಕಲ್ಪನೆಯನ್ನು ಅಲ್ಲಮಪ್ರಭು ನಿರಾಕರಿಸಿ, ಅದು ಮನುಷ್ಯನ ಅಂತರಂಗದಲ್ಲಿಯೇ ಹುದುಗಿರುವ ಆಸೆಗಳು. ಒಂದು ಮನೋವ್ಯಾಪಾರ ಎಂಬ ಚಿಂತನೆ ಅಲ್ಲಮನ ವಚನಗಳಿಂದ ವ್ಯಕ್ತವಾಗುತ್ತಿದೆ.

ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಹೆಣ್ಣು ಮಾಯೆ ಎಂದು ಪರಿಕಲ್ಪಿಸಿ ಹೆಣ್ಣನ್ನು ಮಣ್ಣು - ಹೊನ್ನುಗಳೆಂಬ ವಸ್ತುಗಳೊಂದಿಗೆ ಹೋಲಿಸಿದ್ದರು. ಅವಳ ಎಲ್ಲ ರೀತಿಯ ಸ್ವಾತಂತ್ರ್ಯಗಳನ್ನು ಹರಣ ಮಾಡಿ ತಮ್ಮ ನಿಯಂತ್ರಣದಲ್ಲಿಟ್ಟುಕೊಂಡಿದ್ದರು. ಮನಸ್ಸಿನ ವಿಕಾರಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳದ ಜನ ಹೆಣ್ಣು ಮಾಯೆ, ಹೆಣ್ಣಿನಿಂದ ಪುರುಷ ಆತ್ಮ ಸಾಕ್ಷಾತ್ಕಾರ ಪಡೆಯಲಾರ, ಅವಳಿಂದ ದೂರವಿದ್ದು, ಆಧ್ಯಾತ್ಮಿಕ ಸಾಧನೆ ಮಾಡಬೇಕು ಎಂಬ ತಪ್ಪು ಕಲ್ಪನೆಗಳನ್ನು ಅಲ್ಲಮ ನಿರಾಕರಿಸುತ್ತಿದ್ದಾನೆ.

ಹೆಣ್ಣು - ಗಂಡಿಗಿಂತ ಭಿನ್ನ ಎಂಬ ಜೈವಿಕ ಸತ್ಯವನ್ನು ಒಪ್ಪಿಕೊಂಡು ವಚನಕಾರರು ಹೆಣ್ಣಿಗೆ ಗಂಡು ಮಾಯೆ, ಗಂಡಿಗೆ ಹೆಣ್ಣು ಎಂದರು. ಅಲ್ಲಮಪ್ರಭು ಮನದ ಮುಂದಣ ಆಸೆಯೇ ಮಾಯೆ ಎಂದು ಹೇಳಿದನು. ಈ ಆಸೆ ಎಂಬುದು ಮನುಷ್ಯ ಜೀವಿಯಲ್ಲಿ ಇರುತ್ತದೆ. ಹೆಣ್ಣಾಗಲಿ, ಗಂಡಾಗಲೀ, ಆಸೆಯಿಲ್ಲದ ಮಾನವರು ಅಪರೂಪ. ಇದನ್ನು ಸರಿಯಾಗಿ ಗ್ರಹಿಸದ ಜನ ಹೆಣ್ಣು ಮಾತ್ರ ಮಾಯೆ ಅವಳಿಂದ ಪುರುಷ ನಾಶವಾಗುತ್ತಾನೆ ಎಂದು ದೂಷಿಸುವುದು ತಪ್ಪು. ಹಾಗೆಯೇ ಮಣ್ಣು, ಹೊನ್ನುಗಳು ತಮ್ಮ ಪಾಡಿಗೆ ತಾವಿರುತ್ತವೆ. ನಮ್ಮ ಮನಸ್ಸನ್ನು ನಿಯಂತ್ರಣದಲ್ಲಿರಿಸಿಕೊಳ್ಳಲಾರದ ಜನ ಅವುಗಳನ್ನು ಪಡೆಯಲು ಹೊಡೆದಾಡಿ ನಾಶ ಹೊಂದುವರೇ ವಿನಃ ಅವುಗಳು ಮಾನವನ ನಾಶಕ್ಕೆ ಕಾರಣವಲ್ಲ.

ಹೀಗೆ ಮಾನಸಿಕ ದೌರ್ಬಲ್ಯಗಳನ್ನು ಸರಿಯಾಗಿ ಗ್ರಹಿಸದ ಜನ ಹೆಣ್ಣು, ಹೊನ್ನು, ಮಣ್ಣು ಮಾಯೆ ಎಂದು ಪರಿಕಲ್ಪಿಸಿದ್ದನ್ನು ಅಲ್ಲಮಪ್ರಭು ನಿರಾಕರಿಸುತ್ತಾನೆ. ಪ್ರಖರ ವಿಚಾರವಾದಿಯಾಗಿದ್ದ ಅಲ್ಲಮ ಅರ್ಥ ಸಂಬಂಧವಾಗಿದ್ದ, ಲಿಂಗ ಸಂಬಂಧವಾಗಿದ್ದ, ಜಾತಿ ಸಂಬಂಧವಾಗಿದ್ದ ಎಲ್ಲ ಬಗೆಯ ಅಸಮಾನತೆಗಳನ್ನು ನಿರಾಕರಿಸುತ್ತಾನೆ. ಹೀಗೆ ಅಲ್ಲಮಪ್ರಭು ಮಾಯಾಪರಿಕಲ್ಪನೆಯನ್ನು ನಿರಾಕರಿಸಿ ಹೆಣ್ಣು - ಗಂಡಿನ ಸಮಾನತೆಯನ್ನು ಮೆರೆಯುತ್ತಾನೆ.

[illegible]

[illegible]

[illegible]

[illegible]

[illegible]

[illegible]

[illegible]

ದೈಹಿಕವಾದ ಬದಲಾವಣೆಗಳು ಜೈವಿಕ ಕಾರಣದಿಂದ ಉಂಟಾಗಿರುವಂತಹದು. ಕೇವಲ ಬಾಹ್ಯವಾಗಿ ತೋರುವ ಲಕ್ಷಣಗಳು. ಆದರೆ ದೇಹದೊಳಗೆ ಸುಳಿದಾಡುವ ಆತ್ಮಕ್ಕೆ ಈ ಭೇದವಿರುವುದಿಲ್ಲ ಎಂಬ ಆಧ್ಯಾತ್ಮ ಚಿಂತನೆಯು, ಆತ್ಮಜ್ಞಾನವೂ ಇದರಲ್ಲಡಗಿದೆ. ಇದನ್ನರಿಯದ ಜನ ಹೆಣ್ಣು ಮಾಯೆ ಎನ್ನುವ ಅವೈಜ್ಞಾನಿಕವಾದ ನಂಬಿಕೆಯನ್ನು ಅಲ್ಲಮ ನಿರಾಕರಿಸುತ್ತಾನೆ.

ಅಡಿಟಿಪ್ಪಣಿಗಳು

೧. ಗೀತಾರ್ಥ ಸಂಗ್ರಹ ಕವಚ, ಗ್ರಂಥಕರ್ತ ಮತ್ತು ಪ್ರಕಾಶಕ ಶೇಟ್ಟಲೂರ್ ಶ್ರೀನಿವಾಸ ರಂಗಾಚಾರ್ಯ (ಮುನ್ನುಡಿ).

೨. ವಚನ ಪರಿಭಾಷಾ ಕೋಶ, ಸಂ. : ಡಾ. ಎಸ್. ವಿದ್ಯಾಶಂಕರ, ಪು. ೧೭೨

೩. ಶಿವಶರಣೆಯರ ವಚನ ಸಂಪುಟ, ಸಂ. : ಡಾ. ಎಂ.ಎಂ. ಕಲಬುರ್ಗಿ, ಪ್ರಸ್ತಾವನೆ.

೪. ಪ್ರಭುದೇವರ ಷಟ್ಸ್ಥಲ ವಚನಗಳು, ಸಂ. : ಡಾ. ಎಲ್. ಬಸವರಾಜು (ವ.ಸಂ. ೭೨), ಭಕ್ತಸ್ಥಲ, ಪು. ೧೦೭, ವ. ಸಂಖ್ಯೆ ೭೨.

೫. ಪ್ರ.ದೇ.ಷ. ವಚನಗಳು, ಡಾ. ಎಲ್. ಬಸವರಾಜು, ಮಾಯಾವಿಲಾಸ ವಿಡಂಬನ ಸ್ಥಲ, ಪು. ಸಂಖ್ಯೆ ೪೦, ವ. ಸಂಖ್ಯೆ ೨೧.

೬. ವಚನ ಪರಿಭಾಷಾಕೋಶ, ಡಾ. ಎಸ್. ವಿದ್ಯಾಶಂಕರ, ಪು. ೧೭೩.

೭. ಅದೇ, ಪು. ೧೭೩.

೮. ಪ್ರಭುದೇವರ ಷಟ್ಸ್ಥಲದ ವಚನಗಳು, ಡಾ. ಎಲ್. ಬಸವರಾಜು, ಮಾಯಾವಿಲಾಸ ವಿಡಂಬನ ಸ್ಥಲ, ಪು.ಸಂ. ೪೦, ವ.ಸಂ. ೨೨.

೯. ಅಲ್ಲಮ ಪ್ರಭುದೇವರ ವಚನ - ನಿರ್ವಚನ, ಶ್ರೀ ಸಿದ್ದೇಶ್ವರ ಸ್ವಾಮಿಗಳು, ಪು. ೩೫.

೧೦. ಪ್ರ.ದೇ.ಷ. ವಚನಗಳು, ಡಾ. ಎಲ್. ಬಸವರಾಜು, ಮಾಯಾವಿಲಾಸ ವಿಡಂಬನ ಸ್ಥಲ, ಪು. ೪೧, ವ. ಸಂ. ೨೩.

೧೧. ಅದೇ, ಪು. ೪೨

* * *

ಅಧ್ಯಾಯ – ೪

ವೈದಿಕ ಆಚರಣೆಗಳ ಬಗೆಗೆ ಅಲ್ಲಮನ ನಿಲುವು

೧. ವೈದಿಕರು ಯಾರು?

೨. ಯಜ್ಞಯಾಗಾದಿಗಳ ನಿರಾಕರಣೆ

೩. ಆಹಾರ ಪದ್ಧತಿಯ ಬಗೆಗಿನ ಭಾವನೆಯ ನಿರಾಕರಣೆ

೪. ವೇದ ಶಾಸ್ತ್ರಗಳ ನಿರಾಕರಣೆ

೫. ಜಾತಿ ಶ್ರೇಷ್ಠತೆಯ ನಿರಾಕರಣೆ

೬. ಹಿರಿಯರ ಹಿರಿಯತನದ ನಿರಾಕರಣೆ

೭. ವ್ರತ ನೇಮಗಳ ನಿರಾಕರಣೆ

೮. ಮಠ ಮಾನ್ಯತೆಯ ನಿರಾಕರಣೆ

ಅಧ್ಯಾಯ – ೪

ವೈದಿಕ ಆಚರಣೆಗಳ ಬಗೆಗೆ ಅಲ್ಲಮನ ನಿಲುವು

ಭಾರತೀಯ ಸಮಾಜದ ವರ್ಣಾಶ್ರಮ ವ್ಯವಸ್ಥೆಯಲ್ಲಿ ವೈದಿಕರು ಪ್ರಥಮ ಶ್ರೇಣಿಯಲ್ಲಿರುವರು. ಇವರು ತಮ್ಮ ದಿನನಿತ್ಯದ ಜೀವನದಲ್ಲಿ ತಮ್ಮದೇ ಆದ ಆಚಾರ - ವಿಚಾರಗಳನ್ನು, ನಿರ್ದಿಷ್ಟವಾದ ಕ್ರಿಯಾ ವಿಧಿಗಳನ್ನು, ಆಚರಣೆಗಳನ್ನು ಅಳವಡಿಸಿಕೊಂಡಿರುವರು. ಅವರ ಆಚಾರ - ವಿಚಾರಗಳ ಬಗ್ಗೆ ಅಲ್ಲಮನು ತಳೆದ ನಿಲುವು ಏನೆಂದು ತಿಳಿಯುವ ಮುನ್ನ ವೈದಿಕರೆಂದರೆ ಯಾರು ಎಂದು ತಿಳಿಯೋಣ.

೧. ವೈದಿಕರು ಯಾರು?

ಧರ್ಮಗ್ರಂಥಗಳಲ್ಲಿ ಉಲ್ಲೇಖಿಸಿರುವಂತೆ ಪ್ರಾಚೀನ ಹಿಂದೂ ಸಮಾಜವು ನಾಲ್ಕು ವಿಭಾಗಗಳಿಂದ ಕೂಡಿದ್ದು ಅವುಗಳನ್ನು ವರ್ಣವೆಂದು ಕರೆಯಲಾಗಿದೆ. ಅವು ಕ್ರಮವಾಗಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ. ವರ್ಣದ ನಿಷ್ಕರ್ಷೆಯು ವ್ಯಕ್ತಿಯ ಹುಟ್ಟಿನಿಂದಾಗುವುದಿಲ್ಲ. ಆದರೆ ಆತನ ಗುಣ, ನಡತೆ ಅಥವಾ ಆಚಾರಗಳಿಂದ ಎಂದು ಧರ್ಮಗ್ರಂಥಗಳು ಖಚಿತವಾಗಿ ತಿಳಿಸುತ್ತವೆ.

೧. ಮಹಾಭಾರತದ ವನಪರ್ವದಲ್ಲಿನ ಶ್ಲೋಕವೊಂದು ಹೀಗೆ ತಿಳಿಸುತ್ತದೆ. ಬ್ರಾಹ್ಮಣತ್ವದ ಕಾರಣವು ಜನ್ಮವಲ್ಲ, ಸಂಸ್ಕಾರವಲ್ಲ, ವೇದಾಧ್ಯಯನವಲ್ಲ, ಕುಲವೂ ಅಲ್ಲ. ಅದರ ಕಾರಣವು ಸದಾಚಾರ ಮಾತ್ರವಾಗಿರುತ್ತದೆ.

೨. ಭಗವದ್ಗೀತೆಯಲ್ಲಿ ಖಚಿತವಾಗಿ ತಿಳಿಸಿರುವಂತೆ ಹುಟ್ಟಿನಿಂದ ಪ್ರತಿಯೊಬ್ಬನೂ ಪ್ರಾಣಿಯೇ ಆಗಿರುತ್ತಾನೆ. ತನ್ನ ಉತ್ತಮ ಕಾರ್ಯಗಳಿಂದಾಗಿಯೆ ಆತ ಬ್ರಾಹ್ಮಣನಾಗುತ್ತಾನೆ.

೩. ಛಾಂಡೂಕ್ಯ ಉಪನಿಷತ್ತಿನಲ್ಲಿ ಬರುವ ಸತ್ಯಕಾಮ ಜಾಬಾಲನೆಂಬ ವಿದ್ಯಾರ್ಥಿಯ ಕಥೆಯು ವರ್ಣವು ಆಚಾರದಿಂದಲೇ ನಿರ್ಧಾರಿತವಾಗುವುದು ಎನ್ನುವುದಕ್ಕೆ ಮತ್ತೊಂದು ಆಧಾರ (ತನ್ನ ಕುಲ - ಗೋತ್ರವರಿಯದ ಸತ್ಯಕಾಮ ಜಾಬಾಲನೆಂಬ ಶಿಷ್ಯನು ಬ್ರಾಹ್ಮಣ ವರ್ಗಕ್ಕೆ ಸೇರಿದವನೆಂದು ಆತನ ಗುರುವಾದ ಗೌತಮ ಋಷಿಯು ಜಾಬಾಲನ ಗುಣ ಮತ್ತು ನಡತೆಯಿಂದಲೇ ಕಂಡು ಕೊಂಡ ಪ್ರಕರಣ).

ವಿರಾಟ ಪುರುಷನ ಮಹಾಶರೀರದ ಮುಖದಿಂದ ಬ್ರಾಹ್ಮಣನು ಉತ್ಪತ್ತಿಯಾದನೆಂದು ಋಗ್ವೇದದ ಪುರುಷ ಸೂಕ್ತದಲ್ಲಿ ಬರುವ ವಿವರಣೆ ತಿಳಿಸುತ್ತದೆ.

ಹೀಗೆ ಸತ್ವಗುಣವನ್ನು ಪ್ರಧಾನವಾಗುಳ್ಳ ಮತ್ತು ವಿರಾಟ ಪುರುಷನ ಮುಖದಿಂದ ಆವಿರ್ಭವಿಸಿದ ಬ್ರಾಹ್ಮಣರು ಆತ್ಮಸಂಯಮ, ಮಾನಸಿಕ ಪ್ರಸನ್ನತೆ ವಿರಕ್ತತೆ, ಪವಿತ್ರತೆ, ಋಜುತ್ವ, ತಾಳ್ಮೆ, ಕ್ಷಮಾಗುಣ, ಸತ್ಯಸಂಧತೆ ಮತ್ತು ಸುಶೀಲತೆ ಈ ಮೊದಲಾದ ಗುಣಗಳನ್ನು ಬೆಳೆಸಿಕೊಳ್ಳಬೇಕೆಂದು ನಿರೀಕ್ಷಿಸಲಾದವರು. ಹಾಗೆಯೇ ಅಧ್ಯಯನ, ಅಧ್ಯಾಪನ, ತಪಸ್ಸು, ಧ್ಯಾನ, ಚಿಂತನೆ, ಪೌರೋಹಿತ್ಯ, ಆಧ್ಯಾತ್ಮಿಕ ಜ್ಞಾನ ಸಂಪಾದನೆ, ಇತರ ವರ್ಣಗಳವರಿಗೆ ಸಲಹೆ ಮಾರ್ಗದರ್ಶನ ಮಾಡುವುದು ಬ್ರಾಹ್ಮಣರ ಪ್ರಮುಖ ಕಾರ್ಯವಾಗಿದ್ದಿತು. ಮೋಕ್ಷ ಸಂಪಾದನೆಯ ಹೊರತಾಗಿ ಉಳಿದಂತೆ ಎಲ್ಲಾ ವಿಚಾರಗಳಲ್ಲೂ ತನ್ನ ಸ್ವಂತದ ಉತ್ಕರ್ಷ ಮತ್ತು ವೈಭವಕ್ಕಿಂತಲೂ ಸಮಾಜದ ಏಳಿಗೆ ಮತ್ತು ಲೋಕ ಕಲ್ಯಾಣದ ಬಗ್ಗೆಯೇ ಕಾಳಜಿ ವಹಿಸುವ ವರ್ಗ ಎಂಬ ಕಾರಣದಿಂದ ಬಹಳ ಹಿಂದಿನಿಂದಲೂ ಹಿಂದೂ ಸಮಾಜದಲ್ಲಿ ಗೌರವಕ್ಕೆ ಹಾಗೂ ಮನ್ನಣೆಗೆ ಪಾತ್ರವಾಗಿರುವವರು ಬ್ರಾಹ್ಮಣರು ಅಥವಾ ವೈದಿಕರು.[೧]

ಬ್ರಾಹ್ಮಣರು ಅಥವಾ ವೈದಿಕರು ಭಾರತೀಯ ಸಮಾಜದ ಜಾತಿಯ ಶ್ರೇಣಿಯಲ್ಲಿ ತುಟ್ಟ ತುದಿಯಲ್ಲಿರುವವರು. ಶ್ರೇಷ್ಠರೂ, ಪೂಜ್ಯರೂ ಎಂದು ಇತರ ವರ್ಗಗಳ ಮನ್ನಣೆಗೆ ಪಾತ್ರರಾಗಿದ್ದವರು. ಇವರು ಯಜ್ಞಯಾಗಾದಿಗಳು, ವೇದಾಧ್ಯಯನ, ವ್ರತ - ನೇಮಗಳು, ಪೂಜೆ - ಪುರಸ್ಕಾರಗಳು, ಧಾರ್ಮಿಕ ಕ್ರಿಯಾವಿಧಿಗಳು, ಇತ್ಯಾದಿಯಾದ ಆಚರಣೆಗಳನ್ನು ಹೊಂದಿದ್ದರು. ಪ್ರಾಚೀನ ಭಾರತೀಯ ಸಮಾಜದಲ್ಲಿ ಇವು ಸಾಂಪ್ರದಾಯಿಕವಾದ ಕಟ್ಟುನಿಟ್ಟಾದ ಆಚರಣೆಗಳಾಗಿದ್ದವು. ಪ್ರತಿಯೊಬ್ಬ ವೈದಿಕನೂ ಅವುಗಳನ್ನು ಕಡ್ಡಾಯವಾಗಿ ಆಚರಿಸಬೇಕೆಂಬ ನಂಬಿಕೆ, ಶ್ರದ್ಧೆ ಪ್ರಾಚೀನರಲ್ಲಿತ್ತು. ಈ ಆಚರಣೆಗಳ ಬಗ್ಗೆ ಅಲ್ಲಮನ ನಿಲುವು ಏನೆಂದು ವಿಚಾರ ಮಾಡೋಣ.

೨. ಯಜ್ಞಯಾಗಾದಿಗಳ ನಿರಾಕರಣೆ

ವೈದಿಕರಿಗೆ ಯಜ್ಞ ಯಾಗಾದಿಗಳು ಒಂದು ಪವಿತ್ರವಾದ ಆಚರಣೆಯಾಗಿತ್ತು. ಗೃಹಸ್ಥನಾದವನು ತನ್ನ ಪತ್ನಿಯೊಂದಿಗೆ ಪ್ರತಿನಿತ್ಯವೂ ಪಂಚ ಮಹಾಯಜ್ಞಗಳನ್ನು ಮಾಡಬೇಕೆಂದು ಶಾಸ್ತ್ರಗಳು ವಿಧಿಸಿದ್ದವು. ಯಜ್ಞ ಎಂದರೆ ಪೂಜೆ, ತ್ಯಾಗ ಮತ್ತು ದಾನ ಎಂಬ ಮೂರು ಅಂಶಗಳನ್ನು ಒಳಗೊಂಡಿವೆ. ಸೂಕ್ಷ್ಮವಾಗಿ ಅದನ್ನು ಪರಿತ್ಯಾಗ ಎಂದೂ ಹೇಳಬಹುದು. ಇತರರ ಉಪಕಾರಕ್ಕಾಗಿ ತನ್ನಲ್ಲಿರುವುದನ್ನು ಪ್ರೀತಿಯಿಂದ, ಅರ್ಪಣ ಬುದ್ಧಿಯಿಂದ ತ್ಯಾಗ ಮಾಡಿ ದಾನ ಮಾಡುವುದೇ ಯಜ್ಞದಲ್ಲಿ ಅಡಗಿರುವ ವಿಶೇಷ ತತ್ವ. ಯಜ್ಞದಿಂದ ವ್ಯಕ್ತಿಯಲ್ಲಿ ಹೃದಯ ಗುಣ - ಸಂಪತ್ತುಗಳು ಬೆಳೆಯುತ್ತದೆ ಎಂದು ನಂಬಲಾಗಿದೆ.

ಪಂಚ ಯಜ್ಞಗಳು ಯಾವುವೆಂದರೆ,

೧. **ಬ್ರಹ್ಮಯಜ್ಞ(ವೇದ ಯಜ್ಞ)** ಈ ಯಜ್ಞದ ಮೂಲಕ ಋಷಿ ಮುನಿಗಳ ಸೇವೆ ಮತ್ತು ಪೂಜೆ ಮಾಡಿದಂತಾಗಿ ಯಜ್ಞಕರ್ತೃವು ಅವರ ಅನುಗ್ರಹಕ್ಕೆ ಪಾತ್ರನಾಗುತ್ತಾನೆ.

೨. **ದೇವ ಯಜ್ಞ :** ಈ ಯಜ್ಞದಂತೆ ಹೋಮಕಾರ್ಯ ಮಾಡಿ ದೇವತೆಗಳಿಗೆ ಹವನ ದ್ರವ್ಯಗಳನ್ನು ಅಥವಾ ಆಹುತಿಯನ್ನು ಅರ್ಪಿಸಿ ಅವರ ಆಶೀರ್ವಾದ ಪಡೆಯುವುದು.

೩. **ಪಿತೃಯಜ್ಞ :** ತನ್ನ ಕುಟುಂಬದ ಹಿರಿಯರಿಗೆ, ಪೂರ್ವಜರಿಗೆ ಶಾಸ್ತ್ರೋಕ್ತವಾಗಿ ಜಲತರ್ಪಣ ಬಿಡುವುದು.

೪. **ಭೂತಯಜ್ಞ :** ಶುದ್ಧವಾದ ಸ್ಥಳದಲ್ಲಿ ಆಹಾರವನ್ನು ನಾಲ್ಕು ದಿಕ್ಕುಗಳಲ್ಲಿಟ್ಟು ತನಗಿಂತ ಜಗತ್ತಿನಲ್ಲಿ ಕೀಳಾದವರು, ನಿರ್ಗತಿಕರು, ಪಶು - ಪಕ್ಷಿಗಳು ಎಲ್ಲರಿಗೂ ಆಹಾರ ದೊರೆಯುವಂತೆ ಮಾಡುವುದು. ಭೂತದಯೆ ಮತ್ತು ದೀನಾನುಕಂಪಕ್ಕಾಗಿ ಮಾಡುವುದು.

"ಮನುಷ್ಯ ಯಜ್ಞ: ಮನುಷ್ಯನು ಇತರರನ್ನು ತನ್ನವರು ಎಂದು ಪ್ರೀತಿಯಿಂದ ಕಾಣುತ್ತಾ ಅವರೊಡನೆ ಸ್ನೇಹದಿಂದ ಸಹಕಾರದಿಂದ ಬಾಳುವುದು."[೨]

ಈ ಪಂಚ ಮಹಾಯಜ್ಞಗಳಿಂದ ತಾನು ತನ್ನ ದೇವ ಋಣ, ಋಷಿ ಋಣ ಮತ್ತು ಪಿತೃ ಋಣಗಳೆಂಬ ಮೂರು ಬಗೆಯ ಋಣಗಳನ್ನು ಸಂದಾಯ ಮಾಡಬೇಕೆಂದು ಶಾಸ್ತ್ರಗಳು ಹೇಳುವುದರಿಂದ ವೈದಿಕರು ಯಾಗ ಯಜ್ಞಾದಿ ಕರ್ಮಗಳನ್ನು ಶ್ರದ್ಧೆಯಿಂದ ಆಚರಿಸುತ್ತಿದ್ದರು.

ಪ್ರಾಚೀನ ಕಾಲದಿಂದಲೂ ಮಾನ್ಯ ಮಾಡಲಾಗಿದ್ದ, ವೈದಿಕರ ಪವಿತ್ರ ಆಚರಣೆಯಾಗಿದ್ದ ಯಜ್ಞ-ಯಾಗಾದಿಗಳನ್ನು ಅಲ್ಲಮಪ್ರಭು ತನ್ನ ವಚನದಲ್ಲಿ ಟೀಕಿಸುತ್ತಾನೆ.

"ಹೋಮವ ಮಾಡುವರ ಕಂಡೆ,
ಹೊಗೆಯ ನಿಲಿಸುವರನಾರನೂ ಕಾಣೆ,
ದೂರ ದಾರಿಯ ನಡೆವರ ಕಂಡೆ
ಕಾಲುಗಳ ನುಂಗುವರನಾರನೂ ಕಾಣೆ,
ಆಳುತ್ತ ಬೊಬ್ಬೆಗೊಟ್ಟು ರಣದೊಳಗೆ
ಮುಂಡ ಮುಂದೆ ನಡೆದಾಡುವರ ಕಂಡೆ
ಹರಿದ ಶಿರವ ಹಿಡಿದುಕೊಂಡು ಕುಣಿದಾಡುವನಾದನೂ
ಕಾಣೆ ಕಾಣಾ ಗುಹೇಶ್ವರ.[೩] ವ.ಸಂ. : ೪೮೯

ಈ ವಚನದಲ್ಲಿ ಅಲ್ಲಮಪ್ರಭು ಮಾನವನಿಗೆ ಅಸಾಧ್ಯವಾದ ಕೆಲವು ಕ್ರಿಯೆಗಳನ್ನು ಉಲ್ಲೇಖಿಸುತ್ತ ಮಾನವನ ಮಿತಿಯನ್ನು ಎತ್ತಿ ತೋರಿಸಿದ್ದಾನೆ. ಹೋಮ ಮಾಡುವುದೇ ಹೊರತು ಹೋಮದಿಂದ ಬರುವ ಹೊಗೆಯನ್ನು ಯಾರೂ ನಿಲ್ಲಿಸಲಾರರು. ಹರಿದ ಶಿರವ ಹಿಡಿದುಕೊಂಡು ಕುಣಿದಾಡುವರನ್ನು ಕಾಣೆ ಎನ್ನುತ್ತಾನೆ.

"ದೂರ ದೂರ ಯಾತ್ರೆ ಮಾಡುವವರನ್ನು ಕುರಿತು ಆ ಯಾರೂ ಇದ್ದಲ್ಲೇ ನಿಷ್ಕಾಮ ಕರ್ಮ ಮಾಡಲಿಲ್ಲವೆಂದೂ, ಮಾಡಿದ ಯುದ್ಧಗಳಲ್ಲಿ ಮಡಿದು ವಿಲಿವಿಲಿ ಒದ್ದಾಡಿದವರನ್ನು ಕುರಿತು - ಆ ಯಾರೂ ಆನಂದ ಪಡೆಯಲಿಲ್ಲವೆನ್ನುತ್ತ ಎಲ್ಲರೂ ಎಲ್ಲವನ್ನೂ ಮಾಡಿ ತಾವೂ ಹಾಳಾಗಿ, ಲೋಕಕ್ಷೇಮಕ್ಕೂ ಕುತ್ತು ತಂದರೆಂದು ಪ್ರಭು ವಿಷಾದಿಸುತ್ತಿರುವನು."[೪]

ಹೋಮ ಮಾಡಿದರೂ, ಅದರಿಂದ ಮಾನವನು ಏನನ್ನೂ ಸಾಧಿಸಲಾರ. ಹೋಮದಿಂದ, ಯಾತ್ರೆ ಮಾಡುವುದರಿಂದ, ರಣದೊಳಗೆ ಯುದ್ಧ ಮಾಡುವುದರಿಂದ ಮಾನವ ಏನನ್ನು ಸಾಧಿಸುತ್ತಾನೆ? ಅದರಿಂದ ಅವನಿಗೆ ಯಾವ ಆನಂದ ದೊರೆಯುತ್ತದೆ. ಹೋಮ ಮಾಡುವುದರಿಂದ ದೇವರನ್ನು ಸಂಪ್ರೀತಗೊಳಿಸಬಹುದೆಂದು ನಂಬಿದ್ದ ವಿಚಾರವನ್ನು ಅಲ್ಲಮ ಟೀಕಿಸುತ್ತಿದ್ದಾನೆ. ಇಂತಹ ಆಚರಣೆಗಳಿಂದ ಆಧ್ಯಾತ್ಮಿಕ ಸಿದ್ಧಿ ದೊರೆಯಲಾರದು ಎಂದು ಅಲ್ಲಮನು ಹೋಮ, ಹವನಗಳ ಆಚರಣೆಯ ಅಗತ್ಯವನ್ನು ಒರೆಗೆ ಹಚ್ಚುತ್ತಾನೆ. ಹೀಗೆ ಒಂದು ಸಾಂಪ್ರದಾಯಿಕ ಆಚರಣೆಯಾಗಿದ್ದ ಹೋಮವನ್ನು ನಿರಾಕರಿಸುತ್ತಾನೆ.

೩. ಆಹಾರ ಪದ್ಧತಿಯ ಬಗೆಗಿನ ಭಾವನೆಯ ನಿರಾಕರಣೆ

ವೈದಿಕರು ಸಸ್ಯಹಾರಿಗಳು. ಅವರು ಮದ್ಯ ಮಾಂಸಾಹಾರವನ್ನು ಸೇವಿಸುವುದಿಲ್ಲ. ಅವರು ಆಹಾರ ಸೇವೆಯಲ್ಲಿ ಹಲವಾರು ನಿಯಮಗಳನ್ನು ಪಾಲಿಸುವರು. ಅವರ ಆಹಾರ ಪದ್ಧತಿಯ ಬಗ್ಗೆ ಅಲ್ಲಮನ ಒಂದು ವಚನ ಈ ರೀತಿ ಇದೆ.

ಮದ್ಯ ಮಾಂಸಾದಿಗಳ ಮುಟ್ಟವೆಂದೆಂಬಿರಿ, ನೀವು ಕೇಳಿರೇ
ಮದ್ಯವಲ್ಲದೇನು ಅಷ್ಟಮದಂಗಳು?
ಮಾಂಸವಲ್ಲವೇನು ಸಂಸಾರ ಸಂಗ?
ಈ ಉಭಯವನತಿಗಳೆದಾತನೆ ಗುಹೇಶ್ವರ
ಲಿಂಗದಲ್ಲಿ ಲಿಂಗೈಕ್ಯನು.[೫] ೪೭೮

"ಮನುಷ್ಯರ ಬುದ್ಧಿಗೆಡಿಸುವುದರಿಂದ ಮದ್ಯಸೇವೆಯನ್ನು, ಸಮಾಜ ಜೀವನಕ್ಕೆ ಅತ್ಯವಶ್ಯಕವಾದ ಸೂಕ್ಷ್ಮ ಸಂವೇದನೆಗಳನ್ನು ಧಿಕ್ಕರಿಸುವಂತಾಗುವುದರಿಂದ ಮಾಂಸಭಕ್ಷಣೆಯನ್ನೂ ಮಾಡಬಾರದೆಂದು ಧರ್ಮಶಾಸ್ತ್ರ ಹೇಳುತ್ತದೆ. ತಾಮಸ ಗುಣಗಳನ್ನು ವರ್ಜಿಸಬೇಕೆಂದಾಗ, ಅದರ ಕೆಲವು ಉತ್ತೇಜಕ ಪದಾರ್ಥಗಳನ್ನು ವರ್ಜಿಸಬೇಕೆಂಬುದು ಒಳ್ಳೆಯ ಉಪಾಯವೇ ಆದರೂ, ಆ ಸಂಬಂಧವಾಗಿ ಮಾನವರ ಸ್ವಭಾವದಲ್ಲೇ ಇರುವ ಮದಮೋಹಾದಿಗಳನ್ನು ಅಂತರ್ಮಾನಸ ಸಾಧನೆಗಳಿಂದ ಮೊದಲು ನಿರೋಧಿಸದಿರುವುದು ಬಹಳ ಶೋಚನೀಯವೆಂಬುದನ್ನು ಒತ್ತಿ ಹೇಳುತ್ತಿರುವರು ಪ್ರಭುದೇವರು."[೬]

ಮದ್ಯ ಮಾಂಸಗಳನ್ನು ವರ್ಜಿಸುವುದು ಸುಲಭ. ಆದರೆ ಮಾನವ ಅಷ್ಟಮದಗಳಿಂದ ಬಿಡುಗಡೆ ಹೊಂದುವುದು ತುಂಬಾ ಕಷ್ಟ. ಅಷ್ಟಮದಗಳು ಮಾನವನ ಶರೀರದೊಳಗಿರುವ ಮನಸ್ಸಿನಲ್ಲಿ ಆವಿರ್ಭಾವಗೊಂಡು ಅಲ್ಲೇ ನೆಲೆಸಿ ಮಾನವನನ್ನು ನಾಶಮಾಡುತ್ತವೆ. ಆದ್ದರಿಂದ ನಮ್ಮಲ್ಲಿರುವ ಅಷ್ಟಮದಗಳು ಮದ್ಯದಂತೆ ಮನಸ್ಸನ್ನು ಪ್ರಚೋದನೆಗೊಳಿಸುವ ಅಂಶಗಳಾಗಿವೆ. ಆದ್ದರಿಂದ ಅಲ್ಲಮಪ್ರಭು ಅಷ್ಟಮದಗಳು ಮದ್ಯವಲ್ಲವೆ ಎಂಬ ಪ್ರಶ್ನೆಯನ್ನು ಎತ್ತಿದ್ದಾನೆ.

"ಅಷ್ಟಮದಗಳು : ಕುಲಮದ, ಛಲಮದ, ಧನಮದ, ರೂಪಮದ, ಯೌವನ ಮದ, ವಿದ್ಯಾಮದ, ರಾಜಮದ, ತಪೋಮದ."[೭]

ಸಂಸಾರ ಸಂಗವನ್ನು ಮಾಂಸ ಅಲ್ಲವೆ? ಎಂದು ಕೇಳುತ್ತಿದ್ದಾನೆ. ಸಂಸಾರ ಪ್ರಪಂಚದಲ್ಲಿರುವ ಮಾನವ ಮಾಂಸಾಹಾರ ಸೇವಿಸುವುದಿಲ್ಲವೆಂದು ಹೇಳಿಕೊಂಡರೆ ಅದರಿಂದ ಏನೂ ಪ್ರಯೋಜನವಿಲ್ಲ. ಮಾಂಸಾಹಾರ ಸೇವನೆಯಿಂದ ಉಂಟಾಗುವ ತಾಮಸ ಪ್ರವೃತ್ತಿಗಳೇ ಸಂಸಾರ ಸಂಗದಿಂದಲೂ ಆಗುತ್ತದೆ ಎಂಬುದು ಅಲ್ಲಮನ ವಿಚಾರವಾಗಿದೆ.

"ಸಂಸಾರ ಪ್ರಪಂಚ - ವಿಷಯ ವಾಸನಾ ಪ್ರಪಂಚ. ವಚನಕಾರರ ದೃಷ್ಟಿಯಲ್ಲಿ ಸಂಸಾರವೆಂದರೆ ವಿಷಯ ಲಂಪಟತನ, ಭಕ್ತನು ವಿಷಯಾಸಕ್ತನಾಗದೆ ಸದ್ಗುಣವಂತನಾಗಿರಬೇಕೆಂದು

ವಚನಕಾರರು ಇಚ್ಛಿಸುವರು. ಪಶುಪತಿ ಮಾಡಿದ ವಿಷಯವಿಧಿ ಹದಿನಾಲ್ಕು ಪ್ರಪಂಚವನ್ನೂ ಕಾಡುತ್ತಿರುವುದು."[೮]

ಈ ಉಭಯವನತಿಗಳೆದಾತ ಲಿಂಗೈಕ್ಯನು ಎಂದು ಅಲ್ಲಮಪ್ರಭು ಲಿಂಗವಂತರ ಲಕ್ಷಣವನ್ನು ಹೇಳಿರುವನು.

"ಲಿಂಗೈಕ್ಯ ; ನಿರೂಪು ಆಗುವುದು. ಲಿಂಗದೊಡನೆ ಬೆರೆಯುವುದು ಅಥವಾ ಒಂದಾಗುವುದು ಲಿಂಗೈಕ್ಯವೆಂದು ಬಸವಣ್ಣ ಹೇಳುವನು. ಲಿಂಗೈಕ್ಯರನುವ ಲಿಂಗೈಕ್ಯರೆ ಬಲ್ಲರು ಎಂದು ಅಕ್ಕಮಹಾದೇವಿ ಹೇಳುವಳು. ಆಸೆ ರೋಷಗಳಿಲ್ಲದವನು ಲಿಂಗೈಕ್ಯನೆಂದು ಅಲ್ಲಮ ಹೇಳುವನು. ಐಕ್ಯನೆಂಬಾತ ಅನ್ಯವನರಿಯ ತನ್ನುವ ನರಿಯ, ಸಕಲವನರಿಯ, ನಿಷ್ಕಲವನರಿಯ ಎಂದು ಸಿದ್ಧರಾಮ ಹೇಳುವನು."[೯]

ಹೀಗೆ ಅಲ್ಲಮಪ್ರಭು ಲಿಂಗೈಕ್ಯರ ಗುಣಸ್ವಭಾವವನ್ನು ಈ ವಚನದಲ್ಲಿ ತಿಳಿಸುತ್ತಾನೆ. ಕೇವಲ ಬಾಹ್ಯ ಆಚರಣೆಯಾದ ಮದ್ಯಮಾಂಸಗಳ ವರ್ಜನೆಯಷ್ಟೇ ಸಾಲದು. ನಿಜಶರಣನು ಅಷ್ಟಮದಗಳಿಂದ, ಸಂಸಾರ ಸಂಗದಿಂದ ಮುಕ್ತನಾಗಿರಬೇಕು ಎಂದು ಹೇಳುವನು.

ಅಷ್ಟೇ ಅಲ್ಲದೆ ಮದ್ಯಮಾಂಸ ವರ್ಜನೆಯಿಂದ ತಾನು ಶ್ರೇಷ್ಠನೆಂಬ ಅಹಂಕಾರವನ್ನು ಪ್ರಶ್ನಿಸಿದಂತಿದೆ. ನಿನ್ನೊಳಗಿರುವ ಮದಗಳು ಬಿಡದವರೆಗೆ ನೀನೆಲ್ಲಿ ಶ್ರೇಷ್ಠನಾಗುವೆ? ಎಂದು ಕೇಳುತ್ತಿರುವಂತಿದೆ. ಅಲ್ಲಮಪ್ರಭು ಈ ವಚನದಲ್ಲಿ ವೈದಿಕರ ಆಹಾರ ಪದ್ಧತಿ ಹಾಗೂ ಅದನ್ನು ಹೊಂದಿದ್ದರೂ ಅವರನ್ನು ಬಿಡದೆ ಕಾಡುವ ಮದ ಮೋಹಾದಿಗಳು ಅದರಿಂದ ಉಂಟಾಗುವ ಅಹಂಕಾರ, ಇತರರ ಬಗೆಗೆ ಅವರು ಹೊಂದಿದ್ದ ತಿರಸ್ಕಾರ ಭಾವನೆಗಳನ್ನು ನಿರಾಕರಿಸುತ್ತಾನೆ. ಕೇವಲ ಆಹಾರ ಪದ್ಧತಿಯಿಂದ ಒಬ್ಬನ ಶ್ರೇಷ್ಠತೆಯನ್ನು ಅಳೆಯಲಾಗುವುದಿಲ್ಲ. ಅವನಲ್ಲಿರುವ ಗುಣಸ್ವಭಾವಗಳಿಂದ ಒಬ್ಬ ವ್ಯಕ್ತಿ ಶ್ರೇಷ್ಠನಾಗುತ್ತಾನೆ. ಆದ್ದರಿಂದ ಬಾಹ್ಯ ಆಚರಣೆಗಳು ಪುರಸ್ಕಾರ ಯೋಗ್ಯವಲ್ಲ ಎಂಬುದನ್ನು ಪ್ರತಿಪಾದಿಸುತ್ತಾನೆ.

೪. ವೇದ ಶಾಸ್ತ್ರಗಳ ನಿರಾಕರಣೆ

ವೇದವೆಂಬುದು ಓದಿನ ಮಾತು, ಶಾಸ್ತ್ರವೆಂಬುದು ಸಂತೆಯ ಸುದ್ದಿ
ಪುರಾಣವೆಂಬುದು ಪುಂಡರ ಗೋಷ್ಠಿ, ತರ್ಕವೆಂಬುದು ತಗರ ಹೋರಟೆ
ಭಕ್ತಿಯೆಂಬುದು ತೋರುಂಬ ಲಾಭ
ಗುಹೇಶ್ವರನೆಂಬುದು ಮೀರಿದ ಘನವು.[೧೦] ೪೬೫

"ವೇದಗಳು ೪, ಋಗ್ವೇದ, ಯಜುರ್ವೇದ, ಸಾಮವೇದ ಮತ್ತು ಅಥರ್ವಣವೇದ ಯಜ್ಞಯಾಗಾದಿಗಳ ಕಾಲದಲ್ಲಿ ಋತ್ವಿಜರು ಋಗ್ವೇದದ ಮಂತ್ರಗಳನ್ನು ಪಠಿಸುತ್ತಿದ್ದರು. ವೇದಗಳಲ್ಲಿ ಪ್ರತಿಪಾದಿತವಾಗಿರುವ ವಿಷಯವನ್ನು ಮೂರು ಖಂಡಗಳಾಗಿ ಮಾಡಿರುತ್ತಾರೆ. ಅವು ಕರ್ಮಕಾಂಡ, ಉಪಸನಾ ಕಾಂಡ ಮತ್ತು ಜ್ಞಾನಕಾಂಡ, ಕರ್ಮಕಾಂಡವು ಯಾಗಗಳು ವಿವಿಧ ರೀತಿಯ ಸಂಸ್ಕಾರ ಪದ್ಧತಿಗಳು ಮತ್ತು ಅವುಗಳನ್ನು ಆಚರಿಸುವ ಕ್ರಮ, ಅನುಸರಿಸಬೇಕಾದ ನಿಯಮಗಳನ್ನು ಒಳಗೊಂಡಿದೆ. ಮಂತ್ರಭಾಗ ಮತ್ತು ಬ್ರಾಹ್ಮಣಗಳು ವೇದದ ಕರ್ಮಕಾಂಡಕ್ಕೆ ಸೇರುತ್ತವೆ. ಉಪಾಸನಾ ಕ್ರಮವು ವಿವಿಧ ರೀತಿಯ ಧ್ಯಾನಾದಿ ಕ್ರಮಗಳನ್ನು, ಉಪಾಸನಾ ವಿಧಿಗಳ ವಿವರಣೆಯನ್ನೊಳಗೊಂಡಿದೆ.

"ಜ್ಞಾನಕಾಂಡವು ಬಾಹ್ಯ ಆಚರಣೆ, ಬಾಹ್ಯಕರ್ಮ ಮತ್ತು ಯಜ್ಞಯಾಗದ ಹಂತ ಮುಗಿದ ಮೇಲೆ ಮುಂದೆ ಪರಿಪೂರ್ಣವಾದ ಸತ್ಯವೂ, ಸುಂದರವೂ, ಶಿವಮಯವೂ ಆದ ಪದವಿಯೊಂದಿದೆ. ಅದನ್ನು ಪಡೆಯುವ ಸಾಧನ ಮಾರ್ಗಗಳನ್ನು ಒಳಗೊಂಡಿರುವ ವೇದಭಾಗವೇ ಜ್ಞಾನಕಾಂಡ. ಇದನ್ನು 'ಉಪನಿಷತ್' ಎಂದೂ ಹೇಳುವದುಂಟು. ಆಶ್ರಮಗಳಲ್ಲಿ ಕೊನೆಯದಾದ ಸನ್ಯಾಸಾಶ್ರಮವನ್ನು ಸೇರಿದಾತನಿಗೆ ಆತ್ಮ ಸಾಕ್ಷಾತ್ಕಾರವನ್ನು ಸಾಧಿಸಲು ನೆರವಾಗುವ ಭಾಗವಿದು."[೧೧]

ವೈದಿಕರು ವೇದಾಧ್ಯಯನಕ್ಕೆ ಹೆಚ್ಚು ಮಹತ್ವ ನೀಡಿದ್ದರು. ಹಾಗೆಯೇ ಪುರಾಣಗಳು, ಶಾಸ್ತ್ರಗಳೂ ಕೂಡಾ ಮಹತ್ವ ಪಡೆದಿದ್ದವು. ಆದರೆ ಅಲ್ಲಮ ಈ ವೇದಗಳನ್ನು ಪುರಾಣಗಳನ್ನು ಶಾಸ್ತ್ರಗಳನ್ನು ತರ್ಕವನ್ನೂ ಟೀಕೆಗೆ ಗುರಿಮಾಡಿದ್ದಾನೆ.

"ಅರ್ಥವಾಗದೆ ಬರೀ ಓದುವುದು ವೇದ, ಅಂತೆ ಕಂತೆಯ ಹರಟೆ ಹೊಡೆಯುವುದು ಶಾಸ್ತ್ರ, ಪರ - ವಿರೋಧದ ಸ್ತುತಿ - ನಿಂದೆಯ ಕತೆ ಕಟ್ಟುವುದು ಪುರಾಣ, ಟಗರುಗಳ ಕಾಳಗದಂತೆ ಬರೀ ಘರ್ಷಣೆ ನಡೆಸುವುದು - ತರ್ಕ!"[೧೨]

ಬರೀ ಓದಿನಿಂದ ಅನುಭವ ಪ್ರಾಪ್ತವಾಗದು. ವೇದಗಳನ್ನು ಎಷ್ಟು ಓದಿದರೇನು? ಅನುಭವಕ್ಕಿಳಿಯದ ಜ್ಞಾನ ಓದಿನ ಮಾತಾಗುತ್ತದೆ. ಅರಿವಿಲ್ಲದ ಜನ ವೇದ, ಪುರಾಣ, ಶಾಸ್ತ್ರ, ತರ್ಕಗಳೆಂದು ಒಣಹರಟೆಯಲ್ಲಿ ಕಾಲ ಕಳೆಯುತ್ತಿದ್ದರೆ ಅದರಿಂದ ಏನು ಪ್ರಯೋಜನವಾಗದು ಎಂದು ಇವುಗಳ ಪ್ರಾಮುಖ್ಯತೆಯನ್ನು ಅಲ್ಲಮ ನಿರಾಕರಿಸುತ್ತಾನೆ.

ಅವರು ಮಾಡುವ ಭಕ್ತಿಯನ್ನು 'ತೋರಿ ಉಂಬ ಲಾಭ' ಎಂದು ಟೀಕಿಸುತ್ತಾನೆ. ಗುರು ಹಿರಿಯರು, ಜಂಗಮರು ಜನರಲ್ಲಿ ಭಕ್ತಿಯ ಭಾವವನ್ನು ಬಿತ್ತಿ ಬೆಳೆಸುವುದರಿಂದ ಭಕ್ತರು ಜಂಗಮರನ್ನು, ಹಿರಿಯರನ್ನು ಕರೆದು ಗೌರವಿಸಿ, ಅವರ ಸೇವೆ ಮಾಡಿಕಳಿಸುವರು. ಆದ್ದರಿಂದ ಭಕ್ತಿಯೆಂಬುದನ್ನು ತೋರಿಸಿ ಅದರಿಂದ ಲಾಭ ಪಡೆಯುವ ಪುರುಹಿತವರ್ಗವನ್ನು ಅಲ್ಲಮ ಟೀಕಿಗೆ ಗುರಿಪಡಿಸಿ ಸಾಮಾನ್ಯ ಜನರನ್ನು ಎಚ್ಚರಿಸುತ್ತಾನೆ.

'ಗುಹೇಶ್ವರನನ್ನು ಮೀರಿದ ಘನವು' ಎನ್ನುತ್ತಾನೆ. ಈ ಎಲ್ಲ ಬಾಹ್ಯ ಆಚರಣೆಗಳಿಂದ ಗುಹೇಶ್ವರನನ್ನು ಅರಿಯಲು ಸಾಧ್ಯವಿಲ್ಲ ಎಂಬುದು ಅಲ್ಲಮನ ಅಭಿಮತ.

'ಘನ ಎಂದರೆ ಲಿಂಗ, ಪರಮಾತ್ಮ'.[೧೩]

ಆದ್ದರಿಂದ ಅಲ್ಲಮಪ್ರಭು ವೈದಿಕರ ಪ್ರಮುಖ ಆಚರಣೆಗಳಾದ ವೇದಾಧ್ಯಯನ, ಪುರಾಣ ಶ್ರವಣ, ಶಾಸ್ತ್ರಗಳ ಅಧ್ಯಯನ ಮತ್ತು ಪಾಲನೆ ಮುಂತಾದ ಆಚರಣೆಗಳನ್ನು ನಿರಾಕರಿಸುತ್ತಾನೆ. 'ಮಾಡಿ ಮಾಡಿ ಕೆಟ್ಟರು ಮನವಿಲ್ಲದೆ' ಎಂಬ ಬಸವಣ್ಣನವರ ವಚನವನ್ನು ಈ ಸಂದರ್ಭದಲ್ಲಿ ಉಲ್ಲೇಖಿಸಬಹುದು.

ಉದ್ದೇಶವನ್ನು ತಿಳಿಯದೆ, ಸುಮ್ಮನೆ ಮಾಡುವ ಯಾವ ಕಾರ್ಯವಾದರೂ ಅದು ವ್ಯರ್ಥವೇ. ಗುಹೇಶ್ವರನ ಬಗ್ಗೆ ಅರಿವು, ಪಡೆಯುವ ಉದ್ದೇಶವಿಲ್ಲದೆ, ಸಾಧನೆಯಿಲ್ಲದೆ ಯಾಂತ್ರಿಕವಾಗಿ ಮಾಡುವ ಆಚರಣೆಗಳು ಓದಿನ ಮಾತು, ಸಂತೆಯ ಸುದ್ದಿ, ಪುಂಡರ ಗೋಷ್ಠಿ ಮತ್ತು ಟಗರುಗಳ ಕಾಳಗದಂತಿರುತ್ತದೆ. ಇದರಿಂದ ಎಲ್ಲವನ್ನೂ

ಮೀರಿದ ಘನವನ್ನು ಈ ಆಚರಣೆಗಳಿಂದ ಅರಿಯಲು ಸಾಧ್ಯವಿಲ್ಲ ಎಂದು ಅಲ್ಲಮ ಪ್ರತಿಪಾದಿಸುತ್ತಾನೆ. ಹೀಗೆ ವೈದಿಕರ ವೇದ - ಶಾಸ್ತ್ರಗಳ, ಪುರಾಣಗಳ ಮಹತ್ವವನ್ನು ನಿರಾಕರಿಸುತ್ತಾನೆ.

೫. ಜಾತಿ ಶ್ರೇಷ್ಠತೆಯ ನಿರಾಕರಣೆ

ಕುಲ ಮದ, ಛಲ ಮದ, ವಿದ್ಯಾಮದದವರ ತೋರದಿರಾ।
ಅವರ ಆರೂಢ ಪದವಿಯನೆನಗೆ ತೋರದಿರಾ।
ಅವರ ಗರುವ ಗಂಭೀರ ತನವನೆನಗೆ ತೋರದಿರಾ।
ಶಮೆದಮೆಯುಳಿದು, ದಶಮುಖ ನಿಂದು,
ಲಿಂಗದಲ್ಲಿ ಲೀಯವಾದವರನಲ್ಲದೆ ಎನಗೆ ತೋರದಿರಾ ಗುಹೇಶ್ವರ.[೧೪] ೪೬೪

ಈ ವಚನದಲ್ಲಿ ಅಲ್ಲಮಪ್ರಭು ಕುಲ ಮದ, ಛಲ ಮದ, ವಿದ್ಯಾಮದದ ಬಗ್ಗೆ ವಿಚಾರ ಮಾಡಿದ್ದಾನೆ. ನಮ್ಮ ಸಮಾಜದಲ್ಲಿರುವ ಜಾತಿ ಶ್ರೇಣಿಯಲ್ಲಿ ಕೆಲವು ಜಾತಿಯ ಜನರಿಗೆ ತಾವು ಶ್ರೇಷ್ಠ ಕುಲದವರು ಆದ್ದರಿಂದ ಉಚ್ಚರು, ಉಳಿದವರು ನೀಚರು ಎಂಬ ಭಾವವಿರುತ್ತದೆ. ತಾವು ಮಾಡುವ ವೃತ್ತಿಯ ಬಗ್ಗೆಯೂ ಹೆಮ್ಮೆಪಟ್ಟುಕೊಳ್ಳುವ ಜನ ಸಮಾಜದಲ್ಲಿರುತ್ತಾರೆ. ತಮ್ಮ ವೃತ್ತಿ ಸಂಬಂಧವಾದ ಪದವಿಯಿಂದ ಅಹಂನ್ನು ಮೈಗೂಡಿಸಿಕೊಂಡಿರುತ್ತಾರೆ. ಇನ್ನು ಕೆಲವರಿಗೆ ಎಲ್ಲಿಲ್ಲದ ಛಲವಿರುತ್ತದೆ. ಇಂತಹವರನ್ನು ನೋಡಲು ಅಲ್ಲಮ ಇಚ್ಛಿಸುವುದಿಲ್ಲ. ಮದ ಎಂಬುದು ಮಾನವನನ್ನು ವಿನಾಶದ ಅಂಚಿಗೆ ಕೊಂಡೊಯ್ಯುವ ಸಾಧನ.

> "ತೈತರೀಯ ಬ್ರಾಹ್ಮಣದ ಪ್ರಕಾರ ಇಡೀ ವಿಶ್ವವು ಬ್ರಹ್ಮನಿಂದ ಸೃಷ್ಟಿಯಾಗಿದೆ. ಜನರು ಹೇಳುವಂತೆ ಋಗ್ವೇದದಿಂದ ವೈಶ್ಯರು, ಯಜುರ್ವೇದದಿಂದ ಕ್ಷತ್ರಿಯರು, ಸಾಮವೇದದಿಂದ ಬ್ರಾಹ್ಮಣರು ಆವಿರ್ಭವಿಸಿದರು. ಇದೇ ಸಾಹಿತ್ಯದಲ್ಲಿ ಇನ್ನೊಂದು ಕಡೆ 'ಬ್ರಾಹ್ಮಣರು ದೇವತೆಗಳಿಂದಲೂ ಮತ್ತು ಶೂದ್ರರು ಅಸುರರಿಂದಲೂ ಹುಟ್ಟಿಕೊಂಡರು' ಎಂಬ ಉಲ್ಲೇಖ ಬರುತ್ತದೆ."[೧೫]

ತಾವು ದೇವತೆಗಳಿಂದ ಜನಿಸಿದವರು ಎಂಬ ಅಹಂಕಾರ ವೈದಿಕರಲ್ಲಿರುತ್ತದೆ. ಈ ಅಹಂಕಾರದಿಂದ ಅವರು ಅರಿವನ್ನು ಕಳೆದುಕೊಳ್ಳಬಹುದು. ಅಂತಹವರ ಮುಖವನ್ನು ಎನಗೆ ತೋರದಿರಾ ಎಂದು ಗುಹೇಶ್ವರನಲ್ಲಿ ಅಲ್ಲಮಪ್ರಭು ಮೊರೆಯಿಡುತ್ತಿದ್ದಾನೆ. ಅವರಿಗೆ ಎಲ್ಲಿಲ್ಲದ ಗರುವ, ಗಾಂಭೀರ್ಯವಿರುತ್ತದೆ. ಹಾಗೆಯೇ ವಿದ್ಯಾಮದ ಉಂಟಾಗಲು ಅವರು ಪಡೆದ ವಿದ್ಯೆ ಮಾಡುವ ವೃತ್ತಿ ಕಾರಣವಾಗಿರುತ್ತದೆ.

> "ಜಾತಿಗಳಲ್ಲಿ ಕಾಣಬರುವ ಮೇಲರಿಮೆ ಮತ್ತು ಕೀಳರಿಮೆಯ ಭಾವನೆಗಳು ಅವರು ಅನುಸರಿಸುವ ಶ್ರೇಷ್ಠ ಅಥವಾ ಹೀನ ವೃತ್ತಿಗಳಿಂದಾಗಿಯೇ ನಿರ್ಧಾರಿತವಾಗುತ್ತವೆ ಎಂದು ನೆಸ್‌ಪೀಲ್ಡ್ ಅವರು ಪ್ರತಿಪಾದಿಸಿದ್ದಾರೆ. ಪೌರೋಹಿತ್ಯ, ಅಧ್ಯಾಪನ ವ್ಯಾಪಾರ, ಸರ್ಕಾರಿ ಕೆಲಸ, ಸೇನಾಕಾರ್ಯ, ಲೆಕ್ಕಿಗತನ ಮುಂತಾದವು ಶ್ರೇಷ್ಠ ವೃತ್ತಿಗಳೆನಿಸಿಕೊಂಡಿದ್ದರೆ, ಚಮ್ಮಾರಿಕೆ, ಕಮ್ಮಾರಿಕೆ, ಮಡಿವಾಳತನ, ಗಾಣಿಗತನ, ಪರಿಚಾರಿಕೆಯ ಕೆಲಸ, ಬೀದಿ ಗುಡಿಸುವುದು - ಇವೆಲ್ಲವೂ 'ನೀಚ' ಕೆಲಸಗಳೆನಿಸಿಕೊಂಡಿದ್ದವು. ಇದರಿಂದ ಜಾತಿ - ಜಾತಿ ನಡುವೆ ಉಚ್ಛ - ನೀಚ ಎಂಬ ವ್ಯತ್ಯಾಸ

ತಲೆದೋರಿ ಸಾಮಾಜಿಕ ಅಂತರ ಏರ್ಪಟ್ಟಿತು. ಜಾತಿ ವ್ಯವಸ್ಥೆಯು ಹೀಗೆ, ವೃತ್ತಿ ಆಧಾರಿತವಾಗಿ ಉತ್ಪನ್ನವಾಗಿದೆಯೇ ಹೊರತು ಅದಕ್ಕೂ, ಧರ್ಮಕ್ಕೂ ಅಥವಾ ಜನಾಂಗೀಯ ವ್ಯತ್ಯಾಸಗಳಿಗೂ ಯಾವುದೇ ಸಂಬಂಧವಿರುವುದಿಲ್ಲ ಎಂದು ನೆಸ್‌ಫೀಲ್ಡ್ ವಾದಿಸಿದ್ದಾರೆ."[೧೬]

ಹೀಗಾಗಿ ತಾವು ಮಾಡುವ ವೃತ್ತಿಯಿಂದ, ಪಡೆದ ಶಿಕ್ಷಣದಿಂದ ಕೆಲವರಲ್ಲಿ ವಿದ್ಯಾಮದವಿರುತ್ತದೆ. ಇಂತಹವರನ್ನು ಅಲ್ಲಮ ನೋಡಬಯಸುವುದಿಲ್ಲ.

"ಶಮೆ - ಮನೋನಿಗ್ರಹ, ದಮೆ - ಇಂದ್ರಿಯ ನಿಗ್ರಹ, ಜಿತೇಂದ್ರಿಯತ್ವ."[೧೭]

ಯಾರಲ್ಲಿ ಮನೋನಿಗ್ರಹ ಮತ್ತು ಇಂದ್ರಿಯ ನಿಗ್ರಹ ಉಳಿದಿರುತ್ತದೆಯೋ, ಯಾರಲ್ಲಿ ಹತ್ತು ಮುಖದ ವಿವಿಧ ಮುಖವಾಡಗಳು ಕಳಚಿ, ಲಿಂಗದಲ್ಲಿ ಐಕ್ಯವಾಗಿರುತ್ತಾರೆಯೋ ಅಂತಹವರನ್ನು ಮಾತ್ರ ಅಲ್ಲಮ ತನಗೆ ತೋರು ಎಂದು ಗುಹೇಶ್ವರನಲ್ಲಿ ಬೇಡಿಕೆ ಸಲ್ಲಿಸುತ್ತಾನೆ.

ಸಮಾಜದಲ್ಲಿ ತಮ್ಮ ಹುಟ್ಟಿನಿಂದ, ಜಾತಿಯಿಂದ ತಾವು ಮೇಲೆಂದು ಬೀಗುವವರು ಹಾಗೂ ತಾವು ಸಾಧಿಸಿದ ಸಾಧನೆ, ಪಡೆದ ವಿದ್ಯೆಯಿಂದ ಗಳಿಸಿದ ಪದವಿ, ಅಂತಸ್ತುಗಳಿಂದ ಅಹಂಕಾರ ಪಡುವವರ ವರ್ತನೆಯನ್ನು ಅಲ್ಲಮ ತಿರಸ್ಕರಿಸುತ್ತಾನೆ. ಇಂತಹ ಪದವಿಗಳಿಂದ ಅಹಂಕಾರ ಪ್ರಾಪ್ತವಾಗುವುದಾದರೆ, ಅಂತಹ ಪದವಿಯಿರುವವರ ಗೊಡವೆಯೇ ತನಗೆ ಬೇಡ, ತಾನು ನೋಡಬಯಸುವುದಿಲ್ಲ ಎಂದು ಕುಲ, ಛಲ, ವಿದ್ಯಾ ಮದಗಳನ್ನು ಗರುವ ಗಾಂಭೀರ್ಯವನ್ನು ನಿರಾಕರಿಸುತ್ತಾನೆ. ಈ ರೀತಿ ವೈದಿಕರಲ್ಲಿದ್ದ ಕುಲಶ್ರೇಷ್ಠತೆಯ ಭಾವನೆಯನ್ನು ವಿದ್ಯಾ ಶ್ರೇಷ್ಠತೆಯ ಭಾವನೆಗಳನ್ನು ಅಲ್ಲಮ ನಿರಾಕರಿಸುತ್ತಾನೆ. ಇವುಗಳಿಂದ ನಿಜವಾದ ಅರಿವು ಪ್ರಾಪ್ತವಾಗದು ಎಂಬುದು ಅಲ್ಲಮನ ಗ್ರಹಿಕೆಯಾಗಿದೆ.

೬. ಹಿರಿಯರ ಹಿರಿಯತನದ ನಿರಾಕರಣೆ

ವೇದ ವೇದಿಸಲರಿಯದೆ ಕೆಟ್ಟವು
ಪುರಾಣ ಪೂರೈಸಲರಿಯದೆ ಕೆಟ್ಟವು
ಹಿರಿಯರು ತಮ್ಮ ತಾವರಿಯದೆ ಕೆಟ್ಟರು
ತಮ್ಮ ಬುದ್ಧಿ ತಮ್ಮನೆ ತಿಂದಿತ್ತು!
ನಿಮ್ಮನೆತ್ತ ಬಲ್ಲರು ಗುಹೇಶ್ವರಾ?[೧೮] ೩೨೪

"ವೇದಾದಿಗಳು ಮಡಿಯಾದರೂ ಎಂಜಲ ಬಾಯಲ್ಲಿ ಓದಿಸಿಕೊಳ್ಳುತ್ತವೆ. ಹಾಗೆ ಈ ಹಿರಿಯರೆಂಬ ಆಚಾರ್ಯರೂ ಏನೇ ವಾದ - ಖಂಡನೆ - ಸಿದ್ಧಾಂತದ ಮಾತನಾಡಿದರೂ ಆತ್ಮ - ಜ್ಞಾನಿಗಳಾಗಲಿಲ್ಲ - ಬುದ್ಧಿ ಜೀವಿಗಳೆನಿಸಿಕೊಂಡರೂ ಶಿವಾನುಭವ ಅವರಿಗೆ ಲಭ್ಯವಾಗಲಿಲ್ಲ."[೧೯]

ವೇದಗಳು ಅರಿವಿಗೆ ಬಾರದೆ ಕೆಟ್ಟವು. ಪುರಾಣಗಳು ಪೂರೈಸಲರಿಯದೆ ಕೆಟ್ಟವು. ಹಿರಿಯರು ಎಷ್ಟೇ ಬುದ್ಧಿವಂತರಾದರೂ ತಮ್ಮನ್ನು ತಾವು ಅರಿಯದೆ ಕೆಟ್ಟರು. ಇಂತಹವರು ಗುಹೇಶ್ವರನನ್ನು ಅರಿಯಲು ಸಾಧ್ಯವೇ ಎಂದು ಪ್ರಶ್ನಿಸುತ್ತಾನೆ.

ತಮ್ಮನ್ನು ತಾವರಿಯದ ಹಿರಿಯರಿಂದ, ಇತರರಿಗೆ ಗುಹೇಶ್ವರನನ್ನು ತಿಳಿಯುವ ಮಾರ್ಗದರ್ಶನ ದೊರೆಯುವುದಿಲ್ಲ. ಇಂತಹ ಹಿರಿತನದಿಂದ ತಮಗೂ ಪ್ರಯೋಜನವಿಲ್ಲ. ಬೇರೆಯವರಿಗೂ ಲಾಭವಿಲ್ಲ. ತಾವು ಹಿರಿಯರೆಂದು ಹೇಳಿಕೊಂಡು ಎಲ್ಲವನ್ನೂ ತಿಳಿದವರು, ತಮಗಿಂತ ದೊಡ್ಡವರು ಯಾರೂ ಇಲ್ಲ ಎಂಬ ಪೊಳ್ಳುತನವನ್ನು ಬೆಳೆಸಿಕೊಳ್ಳುವರು. ಇದರಿಂದ ಅವರು ನಾಶಹೊಂದುವರು.

ಆದ್ದರಿಂದ ಅಲ್ಲಮಪ್ರಭು ತಮ್ಮನ್ನು ತಾವರಿಯದ, ಗುಹೇಶ್ವರನನ್ನು ಅರಿಯದ, ಡೋಂಗಿ ಹಿರಿಯರ ಹಿರಿತನದ ಪದವಿಯನ್ನು ನಿರಾಕರಿಸುತ್ತಾನೆ. ಸಮಾಜದಲ್ಲಿ ಪುರೋಹಿತ ವರ್ಗವು ತಾವು ಎಲ್ಲರಿಗಿಂತ ಹಿರಿಯರು ಎಂದು ಹೇಳಿಕೊಂಡು ತಮ್ಮಲ್ಲಿರುವ ವಿಶೇಷ ಬುದ್ಧಿಯಿಂದ ಎಲ್ಲರನ್ನೂ ವಂಚಿಸುವರು. ಇತರರಿಗೆ ಆಧ್ಯಾತ್ಮಿಕ ಮಾರ್ಗ ತೋರುವೆವೆಂದು ಸಮಾಜದಲ್ಲಿ ಎಲ್ಲರಿಂದ ಗೌರವ ಅಪೇಕ್ಷಿಸುವರ ಬಗ್ಗೆ ಎಚ್ಚರಿಸುತ್ತಾನೆ.

೭. ವ್ರತ ನೇಮಗಳ ನಿರಾಕರಣೆ

ನದಿಯ ಜಲ, ಕೂಪ ಜಲ, ತಟಾಕ ಜಲವೆಂದು
ಹಿರಿದು ಕಿರಿದಾದುದ ನಱಿಯರು
ಬೇಱೆ ಮತ್ತೊಂದು ಭಾಷೆ, ವ್ರತ, ನೇಮಂಗಳಹಿಡಿವ
ಶೀಲ ಸಂಬಂಧಿಗಳು ಜಾತ್ಯಂಧಕರು
ನಿಮ್ಮನೆತ್ತಬಲ್ಲರು ಗುಹೇಶ್ವರಾ?[೨೦] ೩೨೬

"ನದಿಯ ನೀರು ಉತ್ತಮ. ಅದನ್ನು ಬಿಟ್ಟರೆ ಕೆರೆಯ ನೀರು, ಅದನ್ನು ಬಿಟ್ಟರೆ ಬಾವಿಯ ನೀರು ಉತ್ತಮ ಎಂದು ಜೀವನಾಧಾರವಾದ ನೀರನ್ನೇ ಅವೈಜ್ಞಾನಿಕವಾಗಿ ಭೇದ ಮಾಡಿ ನೇಮ - ವ್ರತಗಳನ್ನು ಹಿಡಿಯುವರು ಮೂಢಜನರು. ಹಾಗೆಯೇ ಸಮಾಜದಲ್ಲಿಯ ಜನರನ್ನೂ ಮೇಲು - ಕೀಳೆಂದು ವಿಂಗಡಿಸುವ ಜನರು ದೇವರ ವಿಚಾರವನ್ನೇನು ಬಲ್ಲರು ಎಂದು ಅಲ್ಲಮನು ಜಾತಿಭೇದ ಮಾಡುವ ಆ ಮಡಿವಂತರನ್ನು ಧಿಃಕರಿಸುತ್ತಿರುವನು."[೨೧]

ನೀರಿನ ಮೂಲ ಒಂದೇ, ಸ್ವರೂಪ ಒಂದೆ. ಆದರೂ ಅದು ಇರುವ ಸ್ಥಳದ ಆಧಾರದ ಮೇಲೆ ನದಿ ನೀರು ಶ್ರೇಷ್ಠ. ಉಳಿದ ನೀರು ಪೂಜೆಗೆ ಅರ್ಹವಲ್ಲ ಎಂದು ತೀರ್ಥಕ್ಕೆ ಅಭಿಷೇಕಕ್ಕೆ ನೀರನ್ನು ಹುಡುಕಿತರುವರು. ಮಡಿ ನೀರು ಎಂದು ಮಡಿಯಿಂದ ವ್ರತನೇಮಗಳನ್ನು ಆಚರಿಸುವರು. ಇಂತಹ ಮೂಢಾತ್ಮರು ಆಚಾರ ಸಂಬಂಧಿಗಳು ಜಾತ್ಯಂಧಕರಾಗಿರುವರು. ಮಾನವರನ್ನು ಜಾತಿಯ ಆಧಾರದ ಮೇಲೆ ಮೇಲು - ಕೀಳು ಉಚ್ಚ-ನೀಚ ಎಂದು ವಿಂಗಡಿಸುವ ಈ ಅಂಧಕರು ಗುಹೇಶ್ವರನನ್ನು ಎತ್ತಬಲ್ಲರು? ಎಂಬ ಪ್ರಶ್ನೆ ಎತ್ತಿದ್ದಾನೆ. ಹೀಗೆ ಅಲ್ಲಮಪ್ರಭು ಜಾತಿಯ ಹೆಸರಿನಲ್ಲಿ ನಡೆಸುವ ವ್ರತ, ನೇಮ, ಶೀಲಗಳೆಂಬ ಆಚರಣೆಗಳನ್ನು ನಿರಾಕರಿಸಿದ್ದಾನೆ.

"ವ್ರತ ನೇಮಗಳನ್ನು ಕಟ್ಟುನಿಟ್ಟಾಗಿ ಆಚರಿಸುವ ಶೀಲವಂತರನ್ನು ಪ್ರಭುದೇವ ಟೀಕಿಸಿರುವನು, ಅವನ ಪ್ರಕಾರ ಶೀಲವೆಂಬುದು ಸಂಕಲ್ಪ; ಶೀಲವೆಂಬುದು ಸೂತಕ; ಚೆನ್ನಬಸವಣ್ಣ ಶೀಲವಂತನ ಅರಿವು ಸೂತಕದಲ್ಲಿ ಹೋಯಿತ್ತು ಎಂದಿರುವನು."[೨೨]

೮. ಮಠ ಮಾನ್ಯತೆಯ ನಿರಾಕರಣೆ

ಮಠವೇಕೋ ಪರ್ವತವೇಕೋ, ಜನವೇಕೋ ನಿರ್ಜನವೇಕೋ
ಚಿತ್ತ ಸಮಾಧಾನವುಳ್ಳ ಶರಣಂಗೆ?
ಮತ್ತೆ ಹೊರಗಣ ಚಿಂತೆ ಧ್ಯಾನ ಮೌನ ಜಪತಪವೇಕೋ
ತನ್ನ ತಾನರಿಯದ ಶರಣಂಗೆ - ಗುಹೇಶ್ವರಾ?[೨೩] ೧೨೫

ಚಿತ್ತಸಮಾಧಾನವುಳ್ಳ ಶರಣಂಗೆ ಬಾಹ್ಯ ಆಚರಣೆಗಳಾದ ಧ್ಯಾನ, ಮೌನ, ಜಪತಪ ಇದ್ಯಾವುದರ ಅಗತ್ಯವೂ ಇರುವುದಿಲ್ಲ. ತನ್ನನ್ನು ತಾನು ಅರಿಯದಿದ್ದರೆ ಇವೆಲ್ಲದರಿಂದ ಯಾವ ಪ್ರಯೋಜನವೂ ಉಂಟಾಗದು.

ಜನರು ಚಿತ್ತ ಸಮಾಧಾನಕ್ಕಾಗಿ ಮಠಗಳಿಗೆ ಭೇಟಿ ನೀಡುವರು. ಆ ಮಠಗಳಲ್ಲಿ ಆಧ್ಯಾತ್ಮ ಚಿಂತನೆ, ಆಧ್ಯಾತ್ಮ ವಿಚಾರ, ಪ್ರವಚನಗಳು ನಡೆಯುವುವು. ಹಾಗೆಯೇ ಪರ್ವತಗಳ ಮೇಲೆ ನಿರ್ಮಿಸಲಾದ ದೇವಾಲಯಗಳಿಗೆ ಭೇಟಿ ನೀಡುವರು. ನಿರ್ಜನವಾದ ಪ್ರದೇಶದಲ್ಲಿ ಧ್ಯಾನ - ಮೌನ ಆಚರಿಸುವರು. ಅರಿಷಡ್ವರ್ಗಗಳಿಗೆ ಬಲಿಯಾದರೆ ಯಾವ ಜಪ - ತಪ - ಧ್ಯಾನಗಳಿಂದಲೂ ಮನಃಶಾಂತಿ ಲಭಿಸುವುದಿಲ್ಲ. ತನ್ನನರಿತರೆ ಚಿತ್ತ ಸಮಾಧಾನ ತಾನೇ ತಾನಾಗಿ ಉಂಟಾಗುವುದು. ಆಗ ಈ ಬಾಹ್ಯ ಆಚರಣೆಗಳ ಅಗತ್ಯವಿರುವುದಿಲ್ಲ. ಹೀಗೆ ಅಲ್ಲಮ ಪ್ರಭು ವೈದಿಕರ ಪ್ರಮುಖ ಆಚರಣೆಗಳಾದ ಜಪ-ತಪ, ಧ್ಯಾನ - ಮೌನ ಇತ್ಯಾದಿ ಆಚರಣೆಗಳನ್ನೂ, ಮಠಗಳ ಮಾನ್ಯತೆಯನ್ನು ನಿರಾಕರಿಸುತ್ತಾನೆ.

ಹೀಗೆ ಅಲ್ಲಮಪ್ರಭು ವೈದಿಕರು ನಡೆಸುತ್ತಿದ್ದ ಮತಾಚರಣೆಗಳನ್ನು ನಿರಾಕರಿಸುತ್ತಾನೆ. ಅಲ್ಲಮನ ದೃಷ್ಟಿ ಅರ್ಥವಿಲ್ಲದ ಆಚರಣೆಗಳ ನಿರಾಕರಣೆಯ ಕಡೆ ಇರುತ್ತದೆ. ಗುಹೇಶ್ವರನನ್ನು ಅರಿಯಲು ಈ ಬಾಹ್ಯ ಆಚರಣೆಗಳಿಂದ ಸಾಧ್ಯವಿಲ್ಲ ಎಂಬುದನ್ನು ಪ್ರತಿಪಾದಿಸುತ್ತಾನೆ. ಆದ್ದರಿಂದ ವೈದಿಕರು ಯಾಂತ್ರಿಕ ನಡೆಸುತ್ತಿದ್ದ ಯಜ್ಞ - ಯಾಗಾದಿಗಳನ್ನು, ವೇದಾಧ್ಯಯನವನ್ನು ವ್ರತಾಚರಣೆಗಳನ್ನು, ಆಹಾರ ಪದ್ಧತಿಯ ಬಗ್ಗೆ ಹೊಂದಿದ್ದ ಶ್ರೇಷ್ಠತಾ ಭಾವನೆಯನ್ನು ಮಠ ಮಂದಿರಗಳ ಮಾನ್ಯತೆಯನ್ನು, ಕುಲದ ಬಗ್ಗೆ ಹೊಂದಿದ್ದ ಅಹಮಿಕೆಯನ್ನು ನಿರಾಕರಿಸುತ್ತಾನೆ. ಸಾಂಪ್ರದಾಯಿಕವಾಗಿ ರೂಢಿಯಲ್ಲಿದ್ದ ಅವುಗಳ ಪ್ರಭುತ್ವವನ್ನು ಮಾನ್ಯತೆಯನ್ನು ಮುರಿಯುವ ಪ್ರಯತ್ನ ಮಾಡಿದ್ದಾನೆ.

ಅಡಿಟಿಪ್ಪಣಿಗಳು

೧. ಭಾರತೀಯ ಸಮಾಜ, ವಿಸ್ತೃತ ಆವೃತ್ತಿ, ಚ.ನ. ಶಂಕರ್‌ರಾವ್, ಪು. ೫೫.
೨. ಅದೇ, ಪು. ೪೯.
೩. ಪ್ರಭುದೇವರ ಷಟ್ಸ್ಥಲದ ವಚನಗಳು, ಸಂ. ಡಾ. ಎಲ್. ಬಸವರಾಜು, ಶರಣ ಸ್ಥಲ, ಪು. ೫೫೨, ವ. ಸಂಖ್ಯೆ ೪೮೯.
೪. ಪ್ರಭುದೇವರ ಷಟ್ಸ್ಥಲದ ವಚನಗಳು, ಸಂ : ಡಾ. ಎಲ್. ಬಸವರಾಜು (೧ಬಸವರಾಜು ಅವರ ವ್ಯಾಖ್ಯಾನ), ಪು. ೫೫೨.
೫. ಅಲ್ಲಮನ ವಚನ ಚಂದ್ರಿಕೆ, ಸಂ. : ಎಲ್. ಬಸವರಾಜು, ಶರಣಸ್ಥಲ, ಪು. ೧೦೫, ವ. ಸಂಖ್ಯೆ. ೪೭೮.
೬. ಪ್ರಭುದೇವರ ಷಟ್ಸ್ಥಲದ ವಚನಗಳು, ಡಾ. ಎಲ್. ಬಸವರಾಜು, ಶರಣ ಸ್ಥಲ, ಪು. ೫೪೧.
೭. ವಚನ ಪರಿಭಾಷಾ ಕೋಶ, ಡಾ. ಎಸ್. ವಿದ್ಯಾಶಂಕರ, ಪು. ೧೪.
೮. ವಚನ ಪರಿಭಾಷಾ ಕೋಶ, ಡಾ. ಎಸ್. ವಿದ್ಯಾಶಂಕರ, ಪು. ೨೫೭.
೯. ವಚನ ಪರಿಭಾಷಾ ಕೋಶ, ಡಾ. ಎಸ್. ವಿದ್ಯಾಶಂಕರ, ಪು. ೧೯೮-೧೯೯.

೧೦. ಪ್ರಭುದೇವರ ಷಟ್ಸ್ಥಲ ವಚನಗಳು, ಸಂ. : ಡಾ. ಎಲ್. ಬಸವರಾಜು, ಶರಣಸ್ಥಲ, ಪು. ೫೨೭, ವ.ಸಂ. ೪೬೫.

೧೧. ಭಾರತೀಯ ಸಮಾಜ, ವಿಸ್ತೃತ ಆವೃತ್ತಿ - ೧೯೯೮, ಲೇ : ಚ.ನ. ಶಂಕರರಾವ್, (ಭಾರತದ ವಿಶಿಷ್ಟ ಸಾಂಸ್ಕೃತಿಕ ಪರಂಪರೆ), ಪು. ೨೮-೨೯.

೧೨. ಪ್ರಭುದೇವರ ಷಟ್ಸ್ಥಲದ ವಚನಗಳು, ಡಾ. ಎಲ್. ಬಸವರಾಜು, ಶರಣ ಸ್ಥಲ, ಪು. ೫೨೭.

೧೩. ವಚನ ಪರಿಭಾಷಾ ಕೋಶ, ಸಂ. : ಡಾ. ಎಸ್. ವಿದ್ಯಾಶಂಕರ, ಪು. ೬೨.

೧೪. ಅಲ್ಲಮನ ವಚನ ಚಂದ್ರಿಕೆ, ಸಂ : ಎಲ್. ಬಸವರಾಜು, ಪು. ೧೦೨, ವ.ಸಂ. ೪೬೪.

೧೫. ಭಾರತೀಯ ಸಮಾಜ, ಚ.ನ. ಶಂಕರ್‌ರಾವ್, ಪು. ೧೮೧.

೧೬. ಭಾರತೀಯ ಸಮಾಜ, ಚ.ನ. ಶಂಕರ್‌ರಾವ್, ಪು. ೧೮೩.

೧೭. ಸಂಕ್ಷಿಪ್ತ ಕನ್ನಡ ನಿಘಂಟು (ಪರಿಷ್ಕೃತ), ಅ.ಶ್ರೀ.ಎನ್. ಬಸವಾರಾಧ್ಯ, ಪು. ೫೮೬ ಮತ್ತು ೧೯೯೫.

೧೮. ಪ್ರಭುದೇವರ ಷಟ್ಸ್ಥಲದ ವಚನಗಳು, ಸಂ. : ಡಾ. ಎಲ್. ಬಸವರಾಜು, ಶರಣ ಸ್ಥಲ, ಪು. ೩೯೧, ವ. ಸಂ. ೩೨೪.

೧೯. ಪ್ರಭುದೇವರ ಷಟ್ಸ್ಥಲದ ವಚನಗಳು, ಸಂ. : ಡಾ. ಎಲ್. ಬಸವರಾಜು, ಶರಣಸ್ಥಲ, ಪು. ೩೯೨.

೨೦. ಪ್ರಭುದೇವರ ಷಟ್ಸ್ಥಲದ ವಚನಗಳು, ಸಂ. : ಡಾ. ಎಲ್. ಬಸವರಾಜು, ಶರಣ ಸ್ಥಲ, ಪು. ೩೯೨, ವ. ಸಂಖ್ಯೆ ೩೨೬.

೨೧. ಪ್ರಭುದೇವರ ಷಟ್ಸ್ಥಲದ ವಚನಗಳು, ಸಂ. : ಡಾ. ಎಲ್. ಬಸವರಾಜು, ಪು. ೩೯೪.

೨೨. ವಚನ ಪರಿಷಾಭಾ ಕೋಶ, ಸಂ. : ಡಾ. ಎಸ್. ವಿದ್ಯಾಶಂಕರ, ಪು. ೨೩೭.

೨೩. ವಚನ ಕಮ್ಮಟ, ಸಂ. : ಕೆ. ಮರುಳಸಿದ್ದಪ್ಪ, ಕಿ.ರಂ. ನಾಗರಾಜ, ಪು. ೨೮, ವ. ಸಂ. ೧೨೫.

* * *

ಅಧ್ಯಾಯ – ೫

ಶೈವರು ನಡೆಸುತ್ತಿದ್ದ ಆಚರಣೆಗಳ ಬಗೆಗೆ

೧. ವೀರಶೈವ ಧರ್ಮ

೨. ಗುರು ಲಿಂಗ ಜಂಗಮರ ಬಗ್ಗೆ ಇದ್ದ ಘನತ್ವದ ಭಾವನೆಯ ನಿರಾಕರಣೆ

೩. ಲಿಂಗದ ನಿರಾಕರಣೆ

೪. ಮೂರ್ತಿಪೂಜೆಯ ನಿರಾಕರಣೆ

೫. ಇಷ್ಟಲಿಂಗದ ನಿರಾಕರಣೆ

೬. ದೇವಾಲಯ ನಿರ್ಮಾಣದ ನಿರಾಕರಣೆ

೭. ವಿವಿಧ ನೇಮಗಳ ನಿರಾಕರಣೆ

೮. ಹಿರಿಯರೆಂಬ ಅಹಂನ ನಿರಾಕರಣೆ

ಅಧ್ಯಾಯ – ೫

ಶೈವರು ನಡೆಸುತ್ತಿದ್ದ ಆಚರಣೆಗಳ ಬಗೆಗೆ

೧. ವೀರಶೈವ ಧರ್ಮ

"ವೀರಶೈವ ಧರ್ಮದ ಹುಟ್ಟಿನ ಬಗ್ಗೆ ವೀರಶೈವರಲ್ಲಿಯೇ ಗೊಂದಲಗಳಿವೆ. ಅದು ಬಸವಣ್ಣನಿಂದಲೇ ಆರಂಭವಾಯಿತೆಂದು ಬಸವಾನುಯಾಯಿಗಳು ಹೇಳಿದರೆ, ಆ ಪೂರ್ವದಲ್ಲಿ ಪಂಚಾಚಾರ್ಯರಿದ್ದರು. ಅವರಿಂದಲೇ ಈ ಧರ್ಮ ಹುಟ್ಟಿತೆಂದು ಹೇಳುವವರು ಇನ್ನು ಹಲವರಿದ್ದಾರೆ. ವೀರಶೈವ ಧರ್ಮ ಶೈವಧರ್ಮದ ಮುಂದುವರಿದ ಭಾಗ, ಅದಕ್ಕೆ ಬಸವಣ್ಣ ಒಂದು ವಿಶಿಷ್ಟ ರೂಪವನ್ನು ಕೊಟ್ಟ ಎಂದು ತಿಳಿಯುವವರೆ ಹೆಚ್ಚು ಜನ."[೧]

"ತಮಿಳುನಾಡಿನ ಬದುಕಿನೊಂದಿಗೆ ಶೈವ ಧರ್ಮ ಹಾಸುಹೊಕ್ಕಾಗಿದ್ದುಂಟು. ಅನ್ಯಧರ್ಮಗಳ ಆಗಮನದಿಂದ, ಅವುಗಳ ತೀವ್ರತರ ಪ್ರಸರಣದಿಂದ, ಪೈಪೋಟಿಯಿಂದ ದಿಕ್ಕುಗಾಣದಿದ್ದಾಗ, ಶಕ್ತಿಗುಂದಿದಾಗ, ಅದಕ್ಕೆ ಚೈತನ್ಯವಾಹಿನಿಯಾಗಿ ಸುಳಿದು ಬಂದವರು ಅಪ್ಪರ್ ಹಾಗೂ ಸಂಬಂಧರು. ಆರನೇ ಶತಮಾನದ ಉತ್ತರಾರ್ಧದಲ್ಲಿ ಶೈವಧರ್ಮಕ್ಕೆ ಒದಗಿದ ವಿಪತ್ತಿನಿಂದ ಪಾರುಗಾಣಿಸಲು ಅಪ್ಪರ್ ಹಾಗೂ ಸಂಬಂಧರು ತಮಿಳುನಾಡಿನಾದ್ಯಂತ ಸಂಚರಿಸಿ ಅನ್ಯಧರ್ಮೀಯರನ್ನು ವಾದದಲ್ಲಿ ಸೋಲಿಸಿ, ರಾಜರುಗಳ ಮನವೊಲಿಸಿ, ಅವರನ್ನು ಶೈವಧರ್ಮಕ್ಕೆ ಪರಿವರ್ತಿಸಿ, ತಮ್ಮ ತೇವಾರಂಗಳ ಮೂಲಕ ಶಿವಭಕ್ತಿಯ ಬೀಜವನ್ನು ಜನಮನದಲ್ಲಿ ಬಿತ್ತಿದರು.

ತಮಿಳುನಾಡಿನಲ್ಲಿ ನಡೆದಂತಹ ಧಾರ್ಮಿಕ ಆಂದೋಲನ ಕರ್ನಾಟಕದಲ್ಲಿ ೧೨ನೇ ಶತಮಾನದಲ್ಲಿ ಬಸವಾದಿ ಶಿವಶರಣರಿಂದ, ಆ ವೇಳೆಗಾಗಲೇ ತಮ್ಮ ಆಚಾರ - ವಿಚಾರಗಳಿಂದ ಹಳವಂಡವಾಗಿದ್ದ ಜೈನ ಹಾಗೂ ವೈದಿಕ ಧರ್ಮಗಳ ವಿರುದ್ಧ ನಡೆಯಿತು. ಕನ್ನಡ ನಾಡಿನ ಸುತ್ತೆಲ್ಲ ಈ ಕ್ರಾಂತಿಯ ಬಿರು ಬೀಸು ಹರಡಿ ದೊಡ್ಡ ಮಟ್ಟದಲ್ಲಿ ವೈಚಾರಿಕ ಚಿಂತನೆ ನಡೆಯಿತು. ವರ್ಣ, ವರ್ಗಗಳ ಸಂಕೋಲೆಯನ್ನು ಕಳಚಿ, ಎಚ್ಚೆತ್ತ ಸಮಾಜ ಹೊಸ ಧರ್ಮದ ಉದಯಕ್ಕೆ ಸ್ವಾಗತಿಸಿತು. ವೀರಶೈವ ಧರ್ಮ ಜೈನ ಹಾಗೂ ವೈದಿಕ ಧರ್ಮಗಳ ಪ್ರಭಾವವನ್ನು ಕ್ರಮೇಣ ಬದಿಗೊತ್ತಿ ವಿಶ್ವ ವಿಶಾಲವಾದ, ಸರ್ವಜನಾದರಣೀಯವೂ, ಸರ್ವಕಾಲಿಕವೂ ಆದ ತತ್ತ್ವಗಳನ್ನು ಮುಂದಿಟ್ಟು ಸುಖೀ ಸಮಾಜದ ನಿರ್ಮಾಣಕ್ಕೆ ಸನ್ನದ್ಧವಾಯಿತು."[೨]

ಶೈವಧರ್ಮ ಕರ್ನಾಟಕದಲ್ಲಿ ೧೨ನೇ ಶತಮಾನಕ್ಕೆ ಮುಂಚಿನಿಂದಲೂ ಅಸ್ತಿತ್ವದಲ್ಲಿತ್ತು ಎಂಬುದನ್ನು ಗ್ರಹಿಸಬಹುದಾಗಿದೆ. ಶಿವನನ್ನು ನಂಬಿದ ವಿವಿಧ ಪಂಥಗಳೂ ಕೂಡಾ ಕರ್ನಾಟಕದಲ್ಲಿದ್ದವು. ಪ್ರಾಚೀನ ಕಾಲದಿಂದಲೂ ಶೈವರು ಕರ್ನಾಟಕದಲ್ಲಿ ನೆಲೆಸಿದ್ದರು.

> "ಡಾ|| ರಂ. ಶ್ರೀ ಮುಗಳಿ ಅವರು 'ಬಸವೇಶ್ವರನಿಗಿಂತ ನೂರು ವರ್ಷ ಮುಂಚಿನಿಂದಲೂ ಜೇಡರ ಶಂಕರ ದಾಸಿಮಯ್ಯನಂಥ ಶಿವಶರಣರು ಹುಟ್ಟಿ ಚಾರಿತ್ರ್ಯದಿಂದಲೂ, ವಾದ ವಿಜಯಗಳಿಂದಲೂ ವೀರಶೈವ ಧರ್ಮವನ್ನು ಬೆಳೆಸುತ್ತಿದ್ದರೆನ್ನಲು ಅಡ್ಡಿಯಿಲ್ಲ' ಎಂದು ಹೇಳಿದ್ದಾರೆ."[೩]

೧೨ನೇ ಶತಮಾನದಲ್ಲಿ ಶರಣರು ಸಾಮಾಜಿಕ ಕ್ರಾಂತಿಯನ್ನು ಉಂಟುಮಾಡಿದರು. ಶೈವ ಮತವನ್ನು ಅನುಸರಿಸುತ್ತಿದ್ದ ಜನರು ಲಿಂಗದಲ್ಲಿ ನಂಬಿಕೆಯನ್ನಿಟ್ಟು ಹಲವಾರು ಆಚರಣೆಗಳನ್ನು ಹಿಂದಿನಿಂದಲೂ ನಡೆಸಿಕೊಂಡು ಬರುತ್ತಿದ್ದರು. ಸಾಮಾಜಿಕ ಕ್ರಾಂತಿಯ ನಂತರವೂ ಜನರು ತಮ್ಮ ಹಳೆಯ ಆಚಾರಗಳನ್ನು ನಂಬಿಕೆಗಳನ್ನು ನಡೆಸಿಕೊಂಡು ಬರುತ್ತಿದ್ದರು. ಅಲ್ಲಮಪ್ರಭು ವೀರಶೈವರು ನಡೆಸುತ್ತಿದ್ದ ಎಲ್ಲ ಬಗೆಯ ಮತಾಚರಣೆಗಳನ್ನು ನಿರಾಕರಿಸುತ್ತಾನೆ.

> "ಶೈವ ಸಿದ್ಧಾಂತ ಆರಾಧನಾ ವಿಧಿಗಳನ್ನು ಆತ್ಮದ ಪವಿತ್ರೀಕರಣದ ಅನಿವಾರ್ಯ ಘಟ್ಟಗಳು ಎಂದು ಭಾವಿಸುತ್ತದೆ. ಆಚರಣೆಯ ಬಾಹ್ಯ ಅನಿವಾರ್ಯತೆಯ ಆಧಾರದ ಮೇಲೆಯೇ ಶೈವ ಸಿದ್ಧಾಂತದ ಸಾಂಸ್ಥಿಕ ಸಮರ್ಥನೆ ನಿಂತಿದೆ. ಅಲ್ಲಮನ ಮೂಲಭೂತ ತಾತ್ವಿಕತೆಯೇ ಈ ಆಚರಣೆ - ಸಾಂಸ್ಥಿಕ ಸ್ಥಿರತೆಯ ಯಮಳ ಸ್ಥಿತಿಯ ವಿರೋಧಿ. ಅರ್ಚನೆ, ಅರ್ಪಿತ, ಆಚಾರ, ಅವಧಾನಗಳೆಲ್ಲ ಎರಡೆಂಬ ಭಿನ್ನ ಸ್ಥಿತಿಯ ದ್ವೈತ ಸ್ಥಿತಿಯ ಅಭಿವ್ಯಕ್ತಿಗಳಾದ್ದರಿಂದ ಅಲ್ಲಮ ಅವೆಲ್ಲವನ್ನೂ ವಿರೋಧಿಸುತ್ತಾನೆ."[೪]

ಶೈವ ಸಿದ್ಧಾಂತ ಪ್ರತಿಪಾದನೆಗಾಗಿ ಅವರು ನಡೆಸುತ್ತಿದ್ದ ಲಿಂಗಪೂಜೆ, ಜಂಗಮ ಪುರಸ್ಕಾರ, ವಿವಿಧ ವ್ರತಾಚಾರಗಳು ಇತ್ಯಾದಿ ಆಚರಣೆಗಳನ್ನು ನಿರಾಕರಿಸುತ್ತಾನೆ. ಆಚರಣೆಗಳ ಹಿಂದಿರುವ ಮೌಢ್ಯತೆ, ಸ್ವಾರ್ಥ, ಮೋಸ ವಂಚನೆಗಳನ್ನು ಬಯಲಿಗೆಳೆಯುತ್ತಾನೆ. ಜನರಲ್ಲಿದ್ದ ಜಾತಿ, ಮತ, ವರ್ಣ ಶ್ರೇಷ್ಠತೆಯ ಭಾವನೆಗಳ ಹಿಂದಿರುವ ಅಲ್ಪತನವನ್ನು ಪ್ರಶ್ನಿಸುತ್ತಾನೆ. ಹೀಗೆ ಅಲ್ಲಮ ಪ್ರಭು ಬಾಹ್ಯ ಆಚರಣೆಗಳನ್ನು ನಿರಾಕರಿಸುವ ಮೂಲಕ ನಿಜ ಶರಣನಿಗೆ ಇರಬೇಕಾದ ಅಂತರಂಗ ಶುದ್ಧಿ, ಆತ್ಮಾವಲೋಕನ, ಆತ್ಮ ವಿಮರ್ಶೆ ಮಾಡಿಕೊಳ್ಳಬೇಕಾದ ಅಗತ್ಯವನ್ನು, ಅನಿವಾರ್ಯತೆಯನ್ನು ಹಿರಿಯರು, ಶರಣರು, ಭಕ್ತರು ಎನಿಸಿಕೊಂಡವರಲ್ಲಿ ಬಿತ್ತುವ ಪ್ರಯತ್ನ ಮಾಡುತ್ತಾನೆ. ಅಲ್ಲಮ ಪ್ರಭುವಿನ ವಚನಗಳ ಅಧ್ಯಯನದಿಂದ ಇದರ ಬಗ್ಗೆ ಸವಿವರವಾಗಿ ವಿಚಾರ ಮಾಡೋಣ.

೨. ಗುರು ಲಿಂಗ ಜಂಗಮರ ಬಗ್ಗೆ ಇದ್ದ ಘನತ್ವದ ಭಾವನೆಯ ನಿರಾಕರಣೆ

ಜಂಗಮ ಘನವೆಂಬೆನೆ? ಬೇಡಿ ಕಿರಿದಾಯಿತ್ತು!
ಲಿಂಗ ಘನವೆಂಬೆನೆ!
ಕಲ್ಲುಕುಟಿಗನ ಕೈಯಲ್ಲಿ ಮಾಣಿಸಿಕೊಂಡು ಕಿರಿದಾಯಿತ್ತು!
ಭಕ್ತ ಘನವೆಂಬೆನೆ?
ತನುಮನ ಧನದಲ್ಲಿ ಪರಿಣಾಮವಿಲ್ಲ, ಪರಮಾರ್ಥವಿಲ್ಲ
ಘನವ ಬಲ್ಲವರಾರೋ ಗುಹೇಶ್ವರ?[೫] ೪೮೦

ಅಲ್ಲಮನ ದೃಷ್ಟಿಯಲ್ಲಿ ಜಂಗಮ, ಲಿಂಗ ಮತ್ತು ಭಕ್ತ ಈ ಮೂರೂ ಘನವಲ್ಲ. ಅಂದರೆ ಶ್ರೇಷ್ಠವಲ್ಲ. ಏಕೆಂದರೆ ಈ ಮೂರರಲ್ಲಿಯೂ ಒಂದೊಂದು ಕೊರತೆ ನ್ಯೂನತೆ ಎದ್ದು ಕಾಣುತ್ತಿದೆ. ಅವು ತಮ್ಮ ಪರಿಪೂರ್ಣತೆಯನ್ನು ಕಳೆದುಕೊಳ್ಳುತ್ತಿವೆ ಎಂಬ ಅಂಶವನ್ನು ಈ ವಚನ ತಿಳಿಸುತ್ತಿದೆ.

ಜಂಗಮ : 'ಜ' ಎಂದರೆ ಜನನ ನಾಸ್ತಿಯಾಗಿ, ಗ ಎಂದರೆ ಗಮನ ನಾಸ್ತಿಯಾಗಿ, ಮ ಎಂದರೆ ಮರಣ ನಾಸ್ತಿಯಾಗಿ, ಜ್ಞಾನಿಯಾಗಿ ಒಂದೆಡೆ ನಿಲ್ಲದೆ ತಿರುಗುವುದು ಸ್ವಯಚರಪರ, ಲಿಂಗ ಜಂಗಮರಲ್ಲಿ ಅಭೇದ;

> "ಲಿಂಗದಲ್ಲಿ ದಿಟವನರಸುವಡೆ ಜಂಗಮವ ನೆರೆ ನಂಬುವುದು. ನಡೆಲಿಂಗ, ನುಡಿಲಿಂಗ, ಮುಖಲಿಂಗವೆಂದೆ ನಂಬೊ! ಎನಗೆ ಕುಲದೈವ, ಬಲದೈವ, ಛಲದೈವ, ಮನದೈವ, ಮನೆದೈವ ಜಂಗಮಮೂರ್ತಿ - ಹೀಗೆ ಬಸವಣ್ಣ ಲಿಂಗ ಜಂಗಮಗಳಲ್ಲಿ ಅಭೇದ ಕಲ್ಪಿಸಿರುವನು."[೬]

ಶರಣರು ಜಂಗಮರನ್ನು ಘನವೆಂದು ಭಾವಿಸಿದ್ದರು. ಜಂಗಮನನ್ನು ಸಾಕ್ಷಾತ್ ಶಿವಸ್ವರೂಪಿಯೆಂದೇ ಭಾವಿಸಿ ಪೂಜಿಸುತ್ತಿದ್ದರು. ಇಂತಹ ಜಂಗಮರನ್ನು ಅಲ್ಲಮಪ್ರಭು ಘನ ಎನ್ನಲೆ? ಎಂದು ಪ್ರಶ್ನಿಸಿ, ಅದಕ್ಕೆ ಉತ್ತರವನ್ನು ತಾನೇ ನೀಡಿದ್ದಾನೆ. ಬೇಡಿ ಕಿರಿದಾಯಿತ್ತು ಎಂಬುದೇ ಆ ಉತ್ತರ. ಜಂಗಮ ಬೇಡುವುದನ್ನೇ, ಭಕ್ತರ ಮನೆಯಲ್ಲಿ ಉಂಬುವುದನ್ನೇ ಕಾಯಕ ಮಾಡಿಕೊಂಡರೆ ಅಂತ ಜಂಗಮನಿಂದ ಸಮಾಜಕ್ಕಾಗಲೀ, ಭಕ್ತರಿಗಾಗಲೀ ಅಥವಾ ಸ್ವತಃ ಜಂಗಮ ವೇಷಧಾರಿಗೆ ಆಗಲಿ ಯಾವ ಲಾಭ? ಗುಹೇಶ್ವರನನ್ನು ಅರಿವ, ಅರಿಯುವಂತೆ ಮಾಡುವ ಗುಣವಿಲ್ಲದ ಜಂಗಮನನ್ನು ಅಲ್ಲಮ ಟೀಕಿಸುತ್ತಾನೆ. ಆ ಬಗ್ಗೆ ಜನರಿಗೆ ಎಚ್ಚರಿಕೆ ನೀಡಿದ್ದಾನೆ. ಅಂತಹ ಜಂಗಮ ಘನವಲ್ಲ ಎನ್ನುತ್ತಾನೆ.

ಲಿಂಗದ ಬಗ್ಗೆ ಶಿವಶರಣರಿಗೆ ಎಲ್ಲಿಲ್ಲದ ಗೌರವ ಭಕ್ತಿ. ಲಿಂಗವಂತರಿಗೆ ಲಿಂಗಪೂಜೆ ಒಂದು ಪವಿತ್ರವಾದ ಆಚರಣೆಯಾಗಿದೆ. ಅವರು ಪ್ರತಿದಿನ ತಪ್ಪದೆ ಕರಲಿಂಗವನ್ನು, ಇಷ್ಟಲಿಂಗವನ್ನು, ಗುರುಲಿಂಗವನ್ನು ಪೂಜಿಸುವರು. ಲಿಂಗನಿಷ್ಠೆ ಶೈವರ ಆಚರಣೆಗಳಲ್ಲಿ ಒಂದು ಮುಖ್ಯವಾದ ಆಚರಣೆ.

> "ಲಿಂಗನಿಷ್ಠೆ : ಷಡ್ವಿದ ಮಹೇಶ್ವರಗಳಲ್ಲಿ (ಆಚಾರ ನಿಷ್ಠೆ, ಗುರುನಿಷ್ಠೆ, ಲಿಂಗನಿಷ್ಠೆ, ಚರನಿಷ್ಠೆ, ಪ್ರಸಾದನಿಷ್ಠೆ, ಮಹನ್ನಿಷ್ಠೆ) ಲಿಂಗನಿಷ್ಠೆಯೂ ಒಂದು."[೭]

ಇಂತಹ ಲಿಂಗವನ್ನು ಅಲ್ಲಮ ಘನವಲ್ಲ ಎನ್ನುತ್ತಾನೆ. ಇದಕ್ಕೆ ಕಾರಣ ಕಲ್ಲು ಕುಟಿಗನ ಕೈಯಿಂದ ಮಾಣಿಸಿಕೊಂಡು ಕಿರಿದಾಯಿತ್ತು, ಎನ್ನುತ್ತಾನೆ. ಅಂದರೆ ಒಂದು ಬಂಡೆಗೆ ಉಳಿಪೆಟ್ಟು ನೀಡಿ, ಒಂದು ನಿರ್ದಿಷ್ಟ ಆಕಾರವನ್ನು ಕೊಟ್ಟು ಅದನ್ನೇ ಲಿಂಗ ಎನ್ನುವುದು ಅಲ್ಲಮನಿಗೆ ಸರಿಕಾಣುತ್ತಿಲ್ಲ. ಇದರಿಂದ ಲಿಂಗದ ಘನತೆ ಕಿರಿದಾಗುತ್ತದೆ. ಈ ಜಗವೇ ಒಂದು ಲಿಂಗವಾಗಿರುವಾಗ, ಒಂದು ನಿರ್ದಿಷ್ಟ ಆಕಾರದಿಂದ ಲಿಂಗವನ್ನು ಪರವಸ್ತುವನ್ನು ಕಾಣಬಯಸುವುದು ಸರಿಯಲ್ಲ ಎಂಬುದು ಅಲ್ಲಮನ ವಿಚಾರ.

ಭಕ್ತನನ್ನು ಸಹ ಅಲ್ಲಮ ಘನವೆನ್ನುತ್ತಿಲ್ಲ. ಏಕೆಂದರೆ ತನು - ಮನ - ಧನ ಎಂಬ ತ್ರಿಕರಣಗಳಲ್ಲಿ ಶುದ್ಧವಿಲ್ಲದವನು ಭಕ್ತನಂತೆ ವೇಷ ಹಾಕಿಕೊಂಡರೆ ಅವನು ಘನವಾಗುವುದಿಲ್ಲ. ಅವನಿಗೆ ಪರಮಾರ್ಥವೂ ದೊರೆಯುವುದಿಲ್ಲ ಎನ್ನುತ್ತಾನೆ.

ಹೀಗೆ ಅಲ್ಲಮಪ್ರಭು ವೀರಶೈವರ ಪ್ರಮುಖ ಆಚರಣೆಗಳಾದ ಜಂಗಮ ದಾಸೋಹ, ಲಿಂಗಪೂಜೆ, ಭಕ್ತನೆಂಬ ಲಾಂಛನ ಪಡೆಯುವಿಕೆ ಇತ್ಯಾದಿಗಳನ್ನು ಘನವಲ್ಲವೆಂದು ನಿರಾಕರಿಸುತ್ತಾನೆ.

೩. ಲಿಂಗದ ನಿರಾಕರಣೆ

ಪೃಥ್ವಿಗೆ ಹುಟ್ಟಿದ ಶಿಲೆ, ಕಲ್ಲುಕುಟಿಕಂಗೆ ಹುಟ್ಟಿದ ಮೂರುತಿ,
ಮಂತ್ರಕ್ಕೆ ಲಿಂಗವಾಯಿತ್ತಲ್ಲಾ!
ಈ ಮೂವರಿಗೆ ಹುಟ್ಟಿದ ಮಗುವ ಲಿಂಗವೆಂದು ಕೈವಿಡಿದ
ಅಚ್ಚ ವ್ರತಗೇಡಿಗಳನೇನೆಂಬೆ ಗುಹೇಶ್ವರಾ![೮] ೨೦೯

"ಒಂದು ಕಲ್ಲು - ಕಲ್ಲುಕುಟಿಗನ ಸುತ್ತಿಗೆ ಉಳಿ - ಪುರೋಹಿತನ ಮಂತ್ರ ಈ ಮೂರರಿಂದಲೇ ಲಿಂಗವೆನಿಸಿಕೊಂಡ ಕಲ್ಲಿನ ಚೂರಿನಿಂದ ಮನುಷ್ಯರೆಲ್ಲಾ ಉದ್ಧಾರವಾಗುತ್ತಾರೆಂದರೆ ಅದಕ್ಕಿಂತ ಹೀನಾಯ ಕುಹಕ ಇನ್ನೊಂದಿಲ್ಲವೆಂದು ಪ್ರಭುದೇವರು ಮೂಢಜನರ ಮೇಲೆ ಮತ್ತು ಪುರೋಹಿತಶಾಹಿಯ ಮೇಲೆ ಒಂದಾಗಿ ಧಾಳಿ ಮಾಡಿರುವನು."[೯]

ಮಂತ್ರೋಚ್ಚಾರಣೆಯಿಂದ ಕಲ್ಲುಕಟಿಕ ನೀಡಿದ ಆಕೃತಿಯನ್ನೇ ಲಿಂಗವೆಂದು ಭಾವಿಸಿ, ಇಷ್ಟಲಿಂಗವೆಂದು ಕೈಯಲ್ಲಿಟ್ಟುಕೊಂಡು ನಿತ್ಯ ಪೂಜಿಸುವರನ್ನು ಅಲ್ಲಮಪ್ರಭು ಅಚ್ಚವ್ರತಗೇಡಿಗಳೆಂದು ನಿಂದಿಸುತ್ತಾನೆ.

ಲಿಂಗದ ಆಕಾರವನ್ನು ಅಲ್ಲಮ ನಿರಾಕರಿಸುವನು. ಅಲ್ಲಮನ ದೃಷ್ಟಿಯಲ್ಲಿ ಲಿಂಗ ಎಂಬುದು ಒಂದು ನಿರ್ದಿಷ್ಟ ಆಕಾರದಲ್ಲಿರುವ ವಸ್ತುವಲ್ಲ. ಅದು ನಿರಾಕಾರ ಪರಬ್ರಹ್ಮ. ಆದರೆ ಕರಲಿಂಗವನ್ನು ಇಷ್ಟಲಿಂಗವೆಂದು ಕರದಲ್ಲಿರಿಸಿಕೊಂಡು ಪೂಜಿಸುವುದು ವೀರಶೈವರ ಒಂದು ಪ್ರಮುಖ ಆಚರಣೆಯಾಗಿತ್ತು. ಆದರೆ ಅಲ್ಲಮ ಈ ಆಚರಣೆಯಿಂದ ಗುಹೇಶ್ವರನ ಅರಿವು ಅಸಾಧ್ಯ ಎಂದು ಅದನ್ನು ನಿರಾಕರಿಸುವನು.

"ಪರಶಿವ ಲಿಂಗವನ್ನು ಭಾವದಲ್ಲಿ ಧರಿಸುವುದಕ್ಕಿಂತ ಮನಮುಟ್ಟಿ ನೆನೆವುದು, ಮನ ಮುಟ್ಟಿ ನೆನೆವುದಕ್ಕಿಂತ ಕಣ್ಮುಚ್ಚಿ ಕಾಣುವುದು, ಕಣ್ಮುಚ್ಚಿ ಕಾಣುವುದಕ್ಕಿಂತ ಕರ ಮುಟ್ಟಿ ಪೂಜಿಸುವುದು, ಕರ ಮುಟ್ಟಿ ಪೂಜಿಸುವುದಕ್ಕಿಂತ ಸದಾ ಅಂಗದಲ್ಲಿ ಹಿಂಗದೆ ಧರಿಸುವ ಹರ್ಷವು ಪರಮಾವಧಿಯಾಗಿರುವುದು. ಈ ಕಾರಣದಿಂದಲೇ ಶರಣರು ಭಾವದಿಂದ ಮನಕ್ಕೆ, ಮನದಿಂದ ನೇತ್ರಕ್ಕೆ, ನೇತ್ರದಿಂದ ಕರಕ್ಕೆ ಆ ಶಿವಲಿಂಗವನ್ನು ಬಿಜಯಂಗೈಸಿಕೊಂಡು ಪೂಜಾದಿ ಸತ್ಕ್ರಿಯೆಗಳನ್ನು ಬಿಡದೆ ಅಲಸದೆ ಆಚರಿಸುವುದು ಎಂದು ಚೆನ್ನಬಸವಣ್ಣ ಹೇಳುವನು."[೧೦]

ಪುರೋಹಿತಶಾಹಿ ವರ್ಗ ಲಿಂಗಪೂಜೆಯನ್ನು ಪ್ರೋತ್ಸಾಹಿಸುವುದು. ಇದರಿಂದ ಅವರಿಗೆ ಸಮಾಜದಲ್ಲಿ ಗೌರವ, ಪ್ರತಿಷ್ಠೆ, ಧನ ಗಳಿಕೆ ಸಾಧ್ಯವಾಗುವುದು. ಏಕೆಂದರೆ ಲಿಂಗದ ಆಕಾರವನ್ನು ನಂಬಿ ಪೂಜಿಸುವ ಭಕ್ತರು ತಮ್ಮ ಧನಕನಕಾದಿಗಳನ್ನು ಲಿಂಗಕ್ಕೆ ಅರ್ಪಿಸುವರು. ಲಿಂಗದ ಹೆಸರಲ್ಲಿ ಮುಗ್ಧರನ್ನು ವಂಚಿಸುವ ಜಾಲದ ಬಗ್ಗೆಯೂ ತಿಳಿವನ್ನುಂಟು ಮಾಡುವ ಅಂಶ ಈ ವಚನದಲ್ಲಿದೆ. ಹೀಗೆ ಅಲ್ಲಮ ಲಿಂಗದ ಆಕಾರವನ್ನು ನಿರಾಕರಿಸುವನು.

೪. ಮೂರ್ತಿಪೂಜೆಯ ನಿರಾಕರಣೆ

ಕಲ್ಲುದೇವರೆಂದು ಪೂಜಿಸುವರು; ಆಗದು ಕಾಣಿರೊ
ಆಗಡಿಗರಾದಿರಲ್ಲಾ,
ಮುಂದೆ ಹುಟ್ಟುವ ಕೂಸಿಂಗೆ
ಇಂದು ಮೊಲೆಯ ಕೊಡುವಂತೆ ಗುಹೇಶ್ವರಾ![೧೦] ೨೧೦

"ಈ ಅಜ್ಞಾನವನ್ನು, ತಾಮಸಾಚರಣೆಗಳನ್ನೂ ಪ್ರಭುದೇವರು ಗೇಲಿ ಮಾಡುತ್ತಿರುವರು. ಮುಂದೆ ಹುಟ್ಟಲಿರುವ ಕೂಸಿಗೆ - ಇಂದೇ ಮೊಲೆಯ ಕೊಡುವಂತೆ ಎಂದು!"[೧೨]

ಕಲ್ಲುಮೂರ್ತಿಯನ್ನು ಪೂಜಿಸಿದ ಮಾತ್ರಕ್ಕೆ ಭಕ್ತಿಭಾವ ಮೂಡುವುದಿಲ್ಲ. ಭಕ್ತಿಯೇ ಇಲ್ಲದವರಿಗೆ ಮನವು ಪರಿಪಾಕಗೊಳ್ಳುವುದಿಲ್ಲ. ಗುಹೇಶ್ವರನ ಅರಿವು ದೊರೆಯುವುದಿಲ್ಲ. ಆದ್ದರಿಂದ ಕಲ್ಲುದೇವರ ಪೂಜೆಯನ್ನು ಅಲ್ಲಮಪ್ರಭು ನಿರಾಕರಿಸುತ್ತಾನೆ. ಪೂಜೆಯೆಂಬುದು ಬಾಹ್ಯ ಆಚರಣೆಯಾಗಿ, ಅದು ಯಾಂತ್ರಿಕವಾಗಿ ನಡೆಯುತ್ತದೆ. ಪ್ರತಿದಿನ ಎಲ್ಲ ಕ್ರಿಯೆಗಳು ನಡೆಯುವಂತೆ ಪೂಜಾಕ್ರಿಯೆಯನ್ನು ಒಂದು ನಿಗದಿತ ವೇಳೆಯಲ್ಲಿ ಆತುರವಾಗಿ ನೆರವೇರಿಸುವ ಜನರನ್ನು ನಾವು ಸಮಾಜದಲ್ಲಿ ಕಾಣಬಹುದು.

ಇನ್ನು ಹುಟ್ಟದಿರುವ ಕೂಸು ಹುಟ್ಟಿದೆ ಎಂದು ಭ್ರಮಿಸಿ ಹಾಲೂಡಿದಂತೆ, ಇನ್ನೂ ಪಡೆಯದಿರುವ, ಸಾಕ್ಷಾತ್ಕಾರವಾಗದಿರುವ ಗುಹೇಶ್ವರ ಮುಂದೆ ದೊರೆಯುವನು ಎಂಬ ಆಸೆಯಿಂದ ಕಲ್ಲುದೇವರಿಗೆ ಪೂಜೆ ಮಾಡಿದರೆ ಅದು ಆಗದು ಕಾಣಿರೋ ಎಂದು ಅಲ್ಲಮ ಎಚ್ಚರಿಸುತ್ತಾನೆ.

೫. ಇಷ್ಟಲಿಂಗದ ನಿರಾಕರಣೆ

ಎನಗೊಂದು ಲಿಂಗ, ನಿನಗೊಂದು ಲಿಂಗ
ಮನೆಗೊಂದು ಲಿಂಗವಾಯಿತು
ಹೋಯಿತ್ತಲ್ಲಾ ಭಕ್ತಿ ಜಲವ ಕೊಡಿ!
ಮನ ಮುಟ್ಟದ ಲಿಂಗವ ಉಳಿ ಮುಟ್ಟಬಲ್ಲುದೇ ಗುಹೇಶ್ವರಾ![೧೩] ೨೦೭

"ಈ ಆಚರಣೆಗಳಲ್ಲಿ ಏಕಲಿಂಗ ನಿಷ್ಠಾಪರ, ನಿತ್ಯಲಿಂಗಾರ್ಚಕ, ಗುರುಲಿಂಗ ಜಂಗಮಕ್ಕೆ ಅರ್ಥ ಪ್ರಾಣಾಭಿಮಾನಗಳನ್ನು ಅರ್ಪಿಸುವವ, ದಾಸೋಹ ಸಂಪನ್ನ ಇತ್ಯಾದಿ ಆಚರಣೆಗಳಿವೆ."[೧೪]

ವೀರಶೈವರು, ಪ್ರತಿಯೊಬ್ಬರೂ ತಮಗೆ ಒಂದೊಂದು ಲಿಂಗವನ್ನು ಗುರುವಿನಿಂದ ಪಡೆದಿರುತ್ತಾರೆ. ಅದರ ಜೊತೆಗೆ ಇಡೀ ಮನೆಗೆ ಒಂದು ಲಿಂಗವಿರುತ್ತದೆ. ಹೀಗೆ ಒಂದೊಂದು ಮನೆಯಲ್ಲೂ ಎಷ್ಟೊಂದು ಲಿಂಗಗಳು ಪ್ರತಿಷ್ಠಾಪಿತವಾಗಿರುತ್ತವೆ. ನನ್ನದು, ನಿನ್ನದು ಎಂದು ಪ್ರತ್ಯೇಕವಾಗಿ ಪೂಜಿಸುತ್ತಾ ಹೋದರೆ, ಲಿಂಗಾಭಿಷೇಕಕ್ಕೆ ಎಷ್ಟೊಂದು ನೀರು ಬೇಕಾಗುವುದು. ನೀರಿನಿಂದ ಲಿಂಗದ ಅಭಿಷೇಕ ಮಾಡುವುದು ಒಂದು ಮುಖ್ಯವಾದ ಪೂಜಾ ವಿಧಾನ, ಇದರಿಂದ ಅವರ ಭಕ್ತಿಯೆಲ್ಲಾ ಜಲವ ಕೂಡಿ ಹೋಯಿತ್ತಲ್ಲಾ ಎನ್ನುತ್ತಾನೆ.

ಎಲ್ಲರಿಗೂ ಒಬ್ಬನೇ ಲಿಂಗ ಎಂದು ಅರಿಯದ ಜನರು ವ್ಯರ್ಥವಾಗಿ ಲಿಂಗಪೂಜೆಯಲ್ಲಿ ಕಾಲ ಕಳೆಯುವರು. ಮನಸ್ಸಿನ ಅರಿವಿಗೆ ತಿಳಿಯದ ಲಿಂಗ ಆಕಾರ, ರೂಪುಕೊಡುವ ಉಳಿಗೆ ತಿಳಿಯುವುದೇ ಎಂದು ಅಲ್ಲಮಪ್ರಭು ವ್ಯಂಗ್ಯವಾಗಿ ಪ್ರಶ್ನಿಸಿದ್ದಾನೆ. ಒಬ್ಬೊಬ್ಬರಿಗೆ ಒಂದೊಂದು ಲಿಂಗ ಎಂಬ ಭಾವನೆ, ಭಿನ್ನತೆಯನ್ನು ಪ್ರತ್ಯೇಕತೆಯನ್ನು ಪ್ರದರ್ಶಿಸುತ್ತದೆ. ಇಡೀ ಜಗಕ್ಕೆಲ್ಲ ಒಬ್ಬನೇ ಲಿಂಗ ಎಂಬ ಏಕೇಶ್ವರ ವಾದವನ್ನು ವೀರಶೈವರ ಈ ಆಚರಣೆ ಭಿನ್ನವಾಗಿಸುವ ಬಗ್ಗೆ ಅಲ್ಲಮ ಎಚ್ಚರಿಸಿದ್ದಾನೆ. ಹೀಗೆ ಅಲ್ಲಮ ಪ್ರಭು ಇಷ್ಟಲಿಂಗದ ಪೂಜಾವಿಧಾನವನ್ನು, ಆಚರಣೆಯನ್ನು ನಿರಾಕರಿಸುತ್ತಾನೆ.

೬. ದೇವಾಲಯ ನಿರ್ಮಾಣದ ನಿರಾಕರಣೆ

ಕಲ್ಲುಮನೆಯ ಮಾಡಿ ಕಲ್ಲುದೇವರ ಮಾಡಿ,
ಆ ಕಲ್ಲು ಕಲ್ಲ ಮೇಲೆ ಕೆಡೆದಡೆ ದೇವರೆತ್ತ ಹೋದರೊ?
ಲಿಂಗ ಪ್ರತಿಷ್ಠೆಯ ಮಾಡಿದವರಿಗೆ
ನಾಯಕ ನರಕ ಗುಹೇಶ್ವರಾ.[೧೫] ೨೧೨

ಕಲ್ಲುಮನೆಯ ಮಾಡುವುದು, ಕಲ್ಲುದೇವರ ಮಾಡುವುದು, ಆ ಕಲ್ಲು ದೇವರನ್ನು ನಿತ್ಯ ಪೂಜಿಸುವುದು, ಮತೀಯವಾದ ಆಚರಣೆ. ಅಲ್ಲಮಪ್ರಭು ಈ ಆಚರಣೆಯನ್ನು ಉಗ್ರವಾಗಿ ನಿರಾಕರಿಸಿದ್ದಾನೆ. ಲಿಂಗ ಪ್ರತಿಷ್ಠೆ ಮಾಡಿದವರಿಗೆ ನಾಯಕ ನರಕ ಎನ್ನುತ್ತಾನೆ. ಅಲ್ಲಿ ದೇವರು ಇರುವುದಿಲ್ಲ ಎನ್ನುತ್ತಾನೆ.

> "ಅಲ್ಲಮನದು ಭಾವುಕವಲ್ಲದ ವೈಚಾರಿಕ ದೃಷ್ಟಿ. ಧಾರ್ಮಿಕ ಆಚರಣೆಗಳು ವಿಚಾರಶೀಲತೆಯನ್ನು ಕಳೆದುಕೊಂಡು ಯಾಂತ್ರಿಕವಾದಾಗ ಅವು ಸಂಪೂರ್ಣ ಅನುಪಯುಕ್ತವಾಗುತ್ತದೆಂಬ ಅಭಿಪ್ರಾಯ ಅಲ್ಲಮನದು. ಆಚಾರ - ವಿಚಾರಗಳ ಸಮನ್ವಯವೇ ಶರಣ ಧರ್ಮದ ತಳಹದಿ. ಅಲ್ಲಮಪ್ರಭು ಅದನ್ನು ಇನ್ನೂ ಗಟ್ಟಿಗೊಳಿಸಿ, ಅದರ ಮೇಲೂ ವಿಚಾರದ ಸೌಧವನ್ನು ನಿರ್ಮಿಸಿದ. ಇದರಿಂದ ವೀರಶೈವ ಧರ್ಮ ಹೊಸ ಆಯಾಮವನ್ನು ಪಡೆಯಿತು."[೧೬]

ಜಗವೇ ಒಂದು ಆಲಯವಾಗಿರುವಾಗ, ದೇವರಿಗಾಗಿ ಬೇರೊಂದು ಆಲಯ ನಿರ್ಮಾಣ ಅನಗತ್ಯ ಎಂಬುದು ಅಲ್ಲಮನ ವಿಶಾಲ ದೃಷ್ಟಿಯ ಪ್ರತೀಕ, ಆಧ್ಯಾತ್ಮಿಕ ಚಿಂತನೆಯ ಫಲವಾಗಿದೆ. ಆದ್ದರಿಂದ ಅಲ್ಲಮ ಶಿವಾಲಯದ ನಿರ್ಮಾಣವನ್ನು ನಿರಾಕರಿಸುವನು. ಆದರೆ ಬಸವಣ್ಣ ಉಳ್ಳವರು ಶಿವಾಲಯ ಮಾಡುವರು? ನಾನೇನ ಮಾಡಲಿ ಬಡವನಯ್ಯಾ ಎಂಬ ವಚನದ ಮೂಲಕ ಶಿವಾಲಯದ ನಿರ್ಮಾಣವನ್ನು ಅನುಮೋದಿಸುವನು. ಆದರೆ ಅಲ್ಲಮ ಪ್ರಭುವಿನ ಚಿಂತನೆ ಇದಕ್ಕೆ ವಿರುದ್ಧವಾದ ದಿಕ್ಕಿನಲ್ಲಿದೆ. ಹೀಗೆ ಅಲ್ಲಮಪ್ರಭು ದೇವಾಲಯ ನಿರ್ಮಾಣ ಹಾಗೂ ಕಲ್ಲುದೇವರ ಪ್ರತಿಷ್ಠಾಪನಾ ಆಚರಣೆಗಳನ್ನು ನಿರಾಕರಿಸುತ್ತಾನೆ.

ದೇಹದೊಳಗೆ ದೇವಾಲಯವಿದ್ದು
ಮತ್ತೆ ಬೇರೆ ದೇವಾಲಯವೇಕೆ?
ಎರಡಕ್ಕೆ ಹೇಳಲಿಲ್ಲಯ್ಯ
ಗುಹೇಶ್ವರ, ನೀನು ಕಲ್ಲಾದಡೆ ನಾನೇನಪ್ಪೆನು![೧೭] ೨೧೩

[illegible]

"ದೇಹವೆ ದೇಗುಲ ; ಸ್ಥಾವರ ಲಿಂಗ ಪೂಜೆಯನ್ನು, ದೇವಾಲಯ ನಿರ್ಮಾಣವನ್ನು ನಿರಾಕರಿಸಿದ ಹನ್ನೆರಡನೆಯ ಶತಮಾನದ ಶಿವಶರಣರು ಅದಕ್ಕೆ ಪರ್ಯಾಯವಾಗಿ ಇಷ್ಟಲಿಂಗವನ್ನು, ದೇಹವನ್ನೂ ಸೂಚಿಸಿದರು.

ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ ಎಂಬುದು ಇಷ್ಟಲಿಂಗಕ್ಕೆ ಸಾವೆಂಬುವುದಿಲ್ಲವೆಂಬುದನ್ನು ಹೇಳುತ್ತದೆ. ಇಲ್ಲಿ ಜಂಗಮವೆಂಬುದು ವ್ಯಕ್ತಿವಾಚಕವಲ್ಲ. ಗುರುವಿನಿಂದ ಅನುಗ್ರಹಿತವಾಗುವ ಇಷ್ಟಲಿಂಗ. ಇದಕ್ಕೆ ಆಧಾರ ; ಚರವಾಗಿ ಭೂಮಿಯಲ್ಲಿ ಪೂಜಿಸಿಕೊಳ್ಳುವುದು ಇಷ್ಟಲಿಂಗವೆಂಬ ಘಟ್ಟಿವಾಳಯ್ಯನ ಹೇಳಿಕೆ."[೧೮]

'ಎನ್ನ ಕಾಲೇ ಕಂಬ, ದೇಹವೇ ದೇಗುಲ, ಶಿರವೇ ಹೊನ್ನ ಕಳಸವಯ್ಯಾ ಎಂದು ಬಸವಣ್ಣ ಹೇಳಿದನು', ಹೀಗೆಲ್ಲಾ ಹೇಳಿದ ಶರಣರು ಮತ್ತೆ ದೇವಾಲಯ ಪ್ರವೇಶ, ದೇವರ ಪೂಜೆ, ಸ್ಥಾಪರ ಲಿಂಗದ ಪೂಜೆಯ ಆಚರಣೆಗಳನ್ನು ಮಾಡುವ ಜನರನ್ನು ಕಂಡು ಅಲ್ಲಮ ಈ ರೀತಿಯ ಪ್ರಶ್ನೆ ಎತ್ತಿದ್ದಾನೆ. ಮತ್ತೆ ಬೇರೆ ದೇವಾಲಯವೇಕೆ? ಎಂಬ ಪ್ರಶ್ನೆ ಅಂದಿನ ಕಾಲದ ಜನರ ನಡೆ - ನುಡಿಗಳಲ್ಲಿದ್ದ ಭಿನ್ನತೆಯನ್ನು ವ್ಯಕ್ತಪಡಿಸುತ್ತಿದೆ.

"ಎರಡಕ್ಕೆ ಹೇಳಲಿಲ್ಲಯ್ಯ ಗುಹೇಶ್ವರ", ನೀನು ಕಲ್ಲಾದಡೆ ನಾನೇನಪ್ಪೆನು ಎಂಬ ವಾಕ್ಯ ಅಲ್ಲಮನ ನಿಲುವನ್ನು ಪ್ರತಿಪಾದಿಸುತ್ತಿದೆ. ಎರಡು ಎಂದರೆ, ತನ್ನ ದೇಹ ಬೇರೆ, ದೇವಾಲಯದಲ್ಲಿರುವ ದೇವರು ಬೇರೆ ಎಂಬ ದ್ವೈತ ಭಾವವನ್ನು ಪ್ರಕಟಿಸುತ್ತದೆ. ಆದ್ದರಿಂದ ಗುಹೇಶ್ವರ ಎರಡಕ್ಕೆ ಹೇಳಲಿಲ್ಲಯ್ಯ ಎನ್ನುವನು. ನೀನು ಬೇರೆ, ನಾನು ಬೇರೆ ಎಂದು ಹೇಳಿಲ್ಲ. ದೇಹದಲ್ಲಿಯೇ ದೇವರು ನೆಲೆಸಿರುವಾಗ, ದೇವರಿಗಾಗಿ ಮತ್ತೊಂದು ದೇವಾಲಯವನ್ನು ಏಕೆ ನಿರ್ಮಿಸುವಿರಿ? ಎಂಬ ಪ್ರಶ್ನೆ ಎತ್ತುವ ಮೂಲಕ ಅಂದಿನ ಕಾಲದ ಆಚಾರ - ವಿಚಾರಗಳಲ್ಲಿದ್ದ ಭಿನ್ನಭಾವವನ್ನು ಅವರ ಅರಿವಿಗೆ ತರುವ ಪ್ರಯತ್ನ ಮಾಡಿದ್ದಾನೆ. ಹೀಗೆ ಅಲ್ಲಮಪ್ರಭು ದೇವಾಲಯ ನಿರ್ಮಾಣವನ್ನೇ ಪ್ರಶ್ನಿಸುವ ಮೂಲಕ ಒಂದು ಸಾಂಪ್ರದಾಯಿಕವಾಗಿದ್ದ ನಂಬಿಕೆಯನ್ನು, ಆಚರಣೆಯನ್ನು ನಿರಾಕರಿಸಿರುವನು.

ಮರ್ತ್ಯಲೋಕದ ಮಾನವರು
ದೇಗುಲದೊಳಗೊಂದು ದೇವರ ಮಾಡಿದಡೆ
ಆನು ಬೆಱಗಾದೆನಯ್ಯಾ
ನಿಚ್ಚಕ್ಕೆ ನಿಚ್ಚ ಅರ್ಚನೆ ಪೂಜನೆಯ ಮಾಡಿಸಿ
ಭೋಗವ ಮಾಡುವರ ಕಂಡು ನಾನು ಬೆಱಗಾದೆನು
ಗುಹೇಶ್ವರಾ, ನಿಮ್ಮ ಶರಣರು ಹಿಂದೆ ಲಿಂಗವನಿರಿಸಿ ಹೋದರು.[೧೯] ೧೭೬

ದೇಹವೇ ದೇಗುಲ - ಪ್ರಾಣವೇ ಲಿಂಗವೆಂದರಿತ ಮೇಲೆ, ದೇಗುಲದೊಳಗೊಂದು ದೇವರ ಮಾಡುವುದ ಕಂಡು ಅಲ್ಲಮ ನಾನು ಬೆರಗಾದೆನು ಎನ್ನುತ್ತಾನೆ. ನಿರಾಳವಾಗಿರುವ ಪರ ವಸ್ತುವಿಗೆ, ನಿತ್ಯ ಅರ್ಚನೆ, ಪೂಜೆ, ನೈವೇದ್ಯ ಎಂಬ ಭೋಗವ ಮಾಡುವವರನ್ನು ಕಂಡು ಅಲ್ಲಮ ಅಚ್ಚರಿಗೊಂಡಿದ್ದಾನೆ. ಏಕೆಂದರೆ ಇವರೆಲ್ಲ ಬಾಯಲ್ಲಿ ಹೇಳುವುದು ಒಂದು, ಆಚರಣೆಯಲ್ಲಿ ತರುವುದು ಮತ್ತೊಂದು. ಈ ನಿಲುವನ್ನು ಕಂಡ ಅಲ್ಲಮ ಬೆರಗುಗೊಳ್ಳುತ್ತಾನೆ.

'ನಿಮ್ಮ ಶರಣರು ಹಿಂದೆ ಲಿಂಗವನಿರಿಸಿ ಹೋದರು' ಎಂಬಲ್ಲಿ, ಶರಣರು ಮಾನವರು. ಇವರ ಬದುಕೇ ಶಾಶ್ವತವಲ್ಲ. ಆದರೂ ತಾವು ಹೋಗುವಾಗ ತಮ್ಮ ಹಿಂದೆ ಲಿಂಗವೆಂಬ ಆಕಾರವನ್ನು ಪೂಜಿಸಿ, ಅದನ್ನು ಇಲ್ಲೇ

ಬಿಟ್ಟು ಹೋಗುವರು. ಕೆಲವರು ತಮ್ಮ ದೇಹದ ಮೇಲೆ, ಲಿಂಗವನ್ನು ಗುರುವಿನ ಅನುಗ್ರಹದಿಂದ ಪಡೆದು ಅದನ್ನು 'ಗುರುಲಿಂಗ'ವೆಂದು, ಧರಿಸಿಕೊಳ್ಳುವರು. ಅದನ್ನು ಇಲ್ಲೇ ಬಿಟ್ಟು ಹೋಗುವರು.

ಆದ್ದರಿಂದ ಅಲ್ಲಮಪ್ರಭು ಮಾನವರು ಮಾಡುವ ಎಲ್ಲ ಬಗೆಯ ಮತಾಚರಣೆಗಳನ್ನು ನಿರಾಕರಿಸಿದ್ದಾನೆ. ದೇವರ ಹೆಸರಿನಲ್ಲಿ ನಡೆಸುವ ಅನಾಚಾರಗಳನ್ನು ನಿರಾಕರಿಸುವನು. ದೇವರ ಹೆಸರಲ್ಲಿ ತಾವು ಭೋಗಿಸುವುದನ್ನು ಕಂಡು ಬೆರಗಾದೆನು ಎನ್ನುತ್ತಿರುವನು ಈ ರೀತಿಯ ಪೂಜೆ, ಭೋಗಗಳಿಂದ ಲಿಂಗವನ್ನು ತಮ್ಮೊಂದಿಗೆ ಕೊಂಡೊಯ್ಯಲಾಗದೆ, ಇಲ್ಲೇ ಬಿಟ್ಟು ಹೋಗುವರು. ಅಂದರೆ ಅವರಿಗೆ ಲಿಂಗದ ಅರಿವು, ಅನುಭವ ಪ್ರಾಪ್ತವಾಗುವುದೇ ಇಲ್ಲ ಎಂಬ ಭಾವ ವ್ಯಕ್ತವಾಗುತ್ತಿದೆ.

೭. ವಿವಿಧ ನೇಮಗಳ ನಿರಾಕರಣೆ

ಹಾಲಿ ನೇಮವ ಹಿಡಿದಾತ ಬೆಕ್ಕಾಗಿ ಹುಟ್ಟುವ
ಕಡಲೆಯ ನೇಮವ ಹಿಡಿದಾತ ಕುದುರೆಯಾಗಿ ಹುಟ್ಟುವ
ಅಗ್ಘವಣೆಯ ನೇಮವ ಹಿಡಿದಾತ ಕಪ್ಪೆಯಾಗಿ ಹುಟ್ಟುವ
ಪುಷ್ಪದ ನೇಮವ ಹಿಡಿದಾತ ದುಂಬಿಯಾಗಿ ಹುಟ್ಟುವ
ಇವು ಷಡುಸ್ಥಲಕ್ಕೆ ಹೊರಗು
ನಿಜಭಕ್ತಿ ಇಲ್ಲದವರ ಕಂಡಡೆ ಮೆಚ್ಚನು ಗುಹೇಶ್ವರನು.[೨೦] ೧೨೦

೧೨ನೇ ಶತಮಾನದಲ್ಲಿ ವಿವಿಧ ಜಾತಿ, ವರ್ಗಗಳಿಂದ ಹೊಸದಾಗಿ ಶರಣ ಮಾರ್ಗವನ್ನು ಆರಿಸಿಕೊಂಡು ಶಿವಶರಣರಾದರು. ಆದರೂ ಆ ಜನರು ತಮ್ಮ ತಮ್ಮ ಪೂರ್ವಜಾತಿಯ ಆಚಾರ - ವಿಚಾರಗಳನ್ನು ನಂಬಿಕೆಗಳನ್ನು, ಹಲವಾರು ನೇಮಗಳನ್ನು ಯಾಂತ್ರಿಕವಾಗಿ ಆಚರಿಸುತ್ತಿದ್ದರೆಂದು ಊಹೆ ಮಾಡಬಹುದು. ಅಂತಹ ಆಚರಣೆಗಳನ್ನು ಕಂಡ ಅಲ್ಲಮ ಅವುಗಳ ಆಚರಣೆಯನ್ನು ನಿರಾಕರಿಸುತ್ತಾನೆ.

ಹಾಲಿನ ನೇಮವ ಹಿಡಿದಾತ ಬೆಕ್ಕಾಗಿ, ಕಡಲೆಯ ನೇಮ ಹಿಡಿದವನು ಕುದುರೆಯಾಗಿ, ನೀರಿನ ನೇಮವ ಹಿಡಿದಾತನು ಕಪ್ಪೆಯಾಗಿ ಮತ್ತು ಪುಷ್ಪದ ನೇಮವ ಹಿಡಿದಾತನು ದುಂಬಿಯಾಗಿ ಹುಟ್ಟುವನು ಎಂದು ಗೇಲಿ ಮಾಡುತ್ತಿರುವಂತಿದೆ.

> "ನೇಮ ಅಂದರೆ ಶಿವಶರಣರು ತಮ್ಮ ಬದುಕನ್ನು ರೂಪಿಸಿಕೊಳ್ಳ ಹೊರಟಾಗ ತಮ್ಮನ್ನು ತಾವು ತಿದ್ದಿಕೊಳ್ಳಲು, ತಮ್ಮ ಬದುಕಿನ ಸರ್ವಾಂಗೀಣ ವಿಕಾಸಕ್ಕೆಂದು ಕೆಲವು ನಿಯಮಗಳನ್ನು ಹಾಕಿಕೊಂಡಿರುವಂತಿದೆ. ಈ ನಿಯಮ ಅಥವಾ ನೇಮಗಳು ವ್ಯಕ್ತಿಯ ವೈಯಕ್ತಿಕ ಬದುಕಿಗೆ ಸಂಬಂಧಿಸಿದುದೇ ಹೊರತು ಸಾರ್ವತ್ರಿಕ ವಾದುದೇನಲ್ಲ. ಯಾವುದೇ ನೇಮದಲ್ಲಿ ಭಾವಶುದ್ಧವಿರಬೇಕೆಂಬುದೇ ಶಿವಶರಣರ ಅಭಿಪ್ರಾಯ."[೨೧]

ಭಾವಶುದ್ಧವಿಲ್ಲದೆ ಮಾಡುವ ಯಾವುದೇ ನೇಮಗಳು ಷಡುಸ್ಥಲಕ್ಕೆ ಹೊರಗು ಎನ್ನುತ್ತಾನೆ ಅಲ್ಲಮ.

> "ಷಟಸ್ಥಲಗಳು ಯಾವುವೆಂದರೆ ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಎಂಬ ಸಾಧನೆಯ ಆರು ಮೆಟ್ಟಿಲುಗಳು."[೨೨]

ಈ ಆರು ಮೆಟ್ಟಿಲುಗಳನ್ನು ಹಂತ ಹಂತವಾಗಿ ಏರುವವನೇ ಭಕ್ತ. ನಿಜ ಭಕ್ತನಲ್ಲದವನು ಮಾಡುವ ನೇಮಗಳನ್ನು ಗುಹೇಶ್ವರ ಮೆಚ್ಚುವುದಿಲ್ಲ ಎಂದು ಅಲ್ಲಮಪ್ರಭು ಹೇಳುತ್ತಾನೆ.

"ಭಕ್ತ ತಾನಾದ ಬಳಿಕ ಭಕ್ತಿಯ ಹೊಲಬನರಿಯಬೇಕು; ಜ್ಞಾನ, ಕ್ರಿಯಾ, ವಿವರವ ವಿಚಾರಿಸಿ ನೋಡಬೇಕು; ಅರುಹಿನ ಕುರುಹುವಿಡಿದಾಚರಿಸಬೇಕು. ತಾಪತ್ರಯಕ್ಕೊಳಗಾಗದೆ ಕಪಿಲಸಿದ್ಧ ಮಲ್ಲಿಕಾರ್ಜುನನಲ್ಲಿ ಐಕ್ಯ ಹೊಂದಲೇಬೇಕು' ಎನ್ನುವನು ಸಿದ್ಧರಾಮ.

ಭಕ್ತನಾದವನಿಗೆ ಕುಲ, ಛಲ, ಯಾಚಕತ್ವ, ಆಶಾಪಾಶ, ಶೋಕ, ಮೋಹ, ಭಯ, ಲಜ್ಜೆ, ಸೇವೆ, ದ್ರೋಹ, ಹರುಷ, ಆದಿ, ಆಸೆ, ಆಮಿಷ, ತಾಮಸಗಳು ಇಲ್ಲವೆಂದು ಆದಯ್ಯ ಹೇಳುವನು."[೨೩]

ಅಲ್ಲಮಪ್ರಭು ಭಕ್ತನಾದವನು ತಾನು ನಿಜವಾಗಿಯೂ ಭಕ್ತನಾಗಿದ್ದರೆ ಅವನಿಗೆ ಮೇಲೆ ಹೇಳಲಾದ ಯಾವ ವ್ರತನೇಮಗಳ ಅಗತ್ಯವೂ ಇಲ್ಲ. ಯಾಂತ್ರಿಕ ನೇಮಾದಿ ವ್ರತಗಳಿಂದ ಗುಹೇಶ್ವರನ ಅರಿವು ಪಡೆಯಲು ಸಾಧ್ಯವಿಲ್ಲದ್ದರಿಂದ ಅವುಗಳನ್ನೆಲ್ಲಾ ಅಲ್ಲಮಪ್ರಭು ಪುರಸ್ಕರಿಸದೆ ನಿರಾಕರಿಸುತ್ತಾನೆ.

ವ್ರತಗೇಡಿ, ವ್ರತಗೇಡಿ ಎಂಬವ ತಾನೇ ವ್ರತಗೇಡಿ!
ವ್ರತಗೆಡಲಿಕೇನು ಹಾಲಂಬಿಲವೆ?
ವ್ರತಗೆಟ್ಟ ಬಳಿಕ ಘಟ ಉಳಿಯಬಲ್ಲುದೆ?
ಕಾಯದೊಳಗೆ ಜೀವವುಳ್ಳನ್ನಕ್ಕರ
ಅದೇ ಪ್ರಾಣಲಿಂಗವು ಕಾಣಾ ಗುಹೇಶ್ವರಾ.[೨೪] ೧೮೨

ವೀರಶೈವರು ತ್ರಿವಿಧ ಲಿಂಗಗಳಿಗೆ ಎಲ್ಲಿಲ್ಲದ ಮಹತ್ವ ನೀಡುವರು. ಲಿಂಗವು ಮೂರು ತೆರನಾಗಿರುವುದು. ಅವು ಯಾವುವೆಂದರೆ

"ತ್ರಿವಿಧ ಲಿಂಗ : ಗುರುಲಿಂಗ, ಶಿವಲಿಂಗ, ಜಂಗಮ ಲಿಂಗ;
ಮುಖಲಿಂಗ, ಭಾವ ಲಿಂಗ, ಸ್ವಯ ಲಿಂಗ;
ಇಷ್ಟಲಿಂಗ, ಭಾವ ಲಿಂಗ, ಪ್ರಾಣ ಲಿಂಗ."[೨೫]

"ಪ್ರಾಣಲಿಂಗ : ಪರವಸ್ತುವನ್ನು ಗುರುಮುಖದಿಂದ ಕರಸ್ಥಲಕ್ಕೆ ತಂದು ಸತ್ಕ್ರಿಯೆಯಿಂದ, ಪ್ರಾಣಕ್ಕೆ ವೇಧಿಸಿದಲ್ಲದೆ ಪ್ರಾಣಲಿಂಗವಾಗದು."

"ಗುರುವು ಶಿಷ್ಯನಿಗೆ ಮಂತ್ರೋಪದೇಶ ಮಾಡಿ ಅವನು ಅಂಗದ ಮೇಲೆ ಇಷ್ಟಲಿಂಗವನ್ನು ಪ್ರತಿಷ್ಠಾಪಿಸಿದ ಬಳಿಕ, ಪ್ರಾಣದಲ್ಲಿ ಲಿಂಗವಿರುವುದೆಂಬ ವ್ರತ ಗೇಡಿಗಳ ಮಾತನ್ನು ಕೇಳಲಾಗದು. ಮಲಮೂತ್ರ ಮಾಂಸಗಳಿಂದ ಕೂಡಿದ ಈ ಶರೀರದಲ್ಲಿ ಪ್ರಾಣವಿರುವುದಲ್ಲದೆ ಲಿಂಗವಿರುವುದೆ? ಆ ಪ್ರಾಣವನ್ನು ತಂದು ತನ್ನ ಇಷ್ಟಲಿಂಗದಲ್ಲಿರಿಸಿ ಕೊಡಬಲ್ಲಡೆ ಆತನನ್ನು ಪ್ರಾಣಲಿಂಗ ಸಂಬಂಧಿ ಎನ್ನುವೆ ಎಂದು ಪ್ರಭು ನುಡಿವನು."[೨೬]

ಅಲ್ಲಮನ ಕಾಲದಲ್ಲಿ ಶರಣರು ಎಂದರೆ ಅವರು ಕರಲಿಂಗವನ್ನೇ ಪ್ರಾಣಲಿಂಗವೆಂದು ತಿಳಿದು, ಅದನ್ನು ಪ್ರತಿದಿನ ಪೂಜಿಸುತ್ತಿದ್ದರು. ಅದೇನಾದರೂ ತಪ್ಪಿದರೆ ಅಥವಾ ಕೆಳಕ್ಕೆ ಬಿದ್ದರೆ, ಅವರನ್ನು ವ್ರತಗೇಡಿಗಳು ಎಂದು

ಹೀಯಾಳಿಸಲಾಗುತ್ತಿತ್ತು. ಅದನ್ನು ನೋಡಿದ ಅಲ್ಲಮಪ್ರಭು ಪ್ರಾಣಲಿಂಗ, ಕರ ಲಿಂಗ ಎರಡೂ ಒಂದೇ ಎಂದು ಭಾವಿಸಿದವರು ಆ ರೀತಿ ಆಡಿಕೊಳ್ಳುವರು. ಆದ್ದರಿಂದ ಅವರೇ ವ್ರತಗೇಡಿಗಳು, ಏಕೆಂದರೆ ಅವರಿಗೆ ಪ್ರಾಣಲಿಂಗದ ಸ್ವರೂಪ ಸರಿಯಾಗಿ ತಿಳಿದಿಲ್ಲ. ಕಾಯದೊಳಗೆ ಜೀವವಿರುವವರೆಗೂ ಅದೇ ಪ್ರಾಣಲಿಂಗ ಇದನ್ನರಿಯದೆ ವ್ರತಗೇಡಿಗಳೆಂದು ಜರಿಯುವರೆ ನಿಜವಾದ ವ್ರತಗೇಡಿಗಳು ಎನ್ನುವನು.

ವ್ರತಗೆಡಲು ಅದೇನು ಹಾಲಂಬಿಲವೆ? ಎಂದಿರುವನು. ಹಾಲಂಬಿಲವೆಂದರೆ ಹುಳಿಯಾದ ಹಾಲು. ಕಾಯವಿರುವವರೆಗೂ ಪ್ರಾಣವಿರುತ್ತದೆ. ಆದ್ದರಿಂದ ಕರಲಿಂಗವನ್ನೇ ಪ್ರಾಣಲಿಂಗವೆಂದು ತಿಳಿದು ಕಟ್ಟುನಿಟ್ಟಾದ ನೇಮದಿಂದ ಪೂಜಿಸುವ ಕಾರಣವಿಲ್ಲ ಎಂದು ಹೇಳುವ ಮೂಲಕ ಕರಲಿಂಗಾರ್ಚನೆಯೆಂಬ ಆಚರಣೆಯನ್ನು ಅಲ್ಲಮ ನಿರಾಕರಿಸುವನು.

೮. ಹಿರಿಯರೆಂಬ ಅಹಂನ ನಿರಾಕರಣೆ

ಆದ್ಯರಲ್ಲ, ವೇದ್ಯರಲ್ಲ, ಸಾಧ್ಯರಲ್ಲದ ಹಿರಿಯರ ನೋಡಾ
ತನು ವಿಕಾರ, ಮನ ವಿಕಾರ, ಇಂದ್ರಿಯ ವಿಕಾರದ ಹಿರಿಯರ ನೋಡಾ
ಶಿವಚಿಂತೆ, ಶಿವಜ್ಞಾನಿಗಳ ಕಂಡಡೆ ಅಳವಾಡಿ ನುಡಿವರು
ಗುಹೇಶ್ವರನನರಿಯದ ಕರ್ಮಿಗಳು.[೨೭] ೧೨೯

"ಸ್ವಾನುಭವ ಸ್ವತಸ್ಸಿದ್ಧರಲ್ಲದ ವಾಗದ್ವೈತಿಗಳು ತಮ್ಮ ಅಭ್ಯಾಸದ ಬಲದಿಂದ - ಮಹಾಜ್ಞಾನಿಗಳನ್ನು ಕಂಡರೆ ನಿಂದಿಸುವರು. ಹಳಿದು ನುಡಿಯುವರು. ಇಂತಹವರನ್ನು ಕಂಡು ನಾಚಿಕೆ ಪಡುವರಂತೆ ಪ್ರಭುದೇವರು."[೨೮]

ತಮ್ಮ ದೇಹ, ಮನಸ್ಸು, ಇಂದ್ರಿಯಗಳನ್ನು ವಿಕಾರ ಮಾಡಿಕೊಂಡು ಕೇವಲ ಮಾತಿನಲ್ಲಿ ಹಿರಿತನ ತೋರುವ ಕೆಲವರನ್ನು ಅಲ್ಲಮ ನಿಂದಿಸುವನು. ಅವರನ್ನು ಆದ್ಯರಲ್ಲ, ವೇದ್ಯರಲ್ಲ, ಸಾಧ್ಯರೂ ಅಲ್ಲ ಎಂದು ಅವರ ನಿಜ ಸ್ಥಿತಿಯನ್ನು ತಿಳಿಸುತ್ತಿರುವನು.

ಶಿವಚಿಂತೆ, ಶಿವಜ್ಞಾನಿಗಳ ಬಗ್ಗೆ ಲಘುವಾಗಿ ಮಾತನಾಡುವರು. ಅಂದರೆ ಇವರು ಬೇರೆ ಪಂಥದವರಿರಬಹುದು. ಆಗ ವ್ಯಾಪಾಕವಾಗಿ ಪ್ರಸರಿಸುತ್ತಿದ್ದ ಶರಣರ ಕ್ರಾಂತಿಯನ್ನು ಕಂಡು ಮೂದಲಿಸುವ ಸಂಪ್ರದಾಯವಾದಿಗಳಿರಬಹುದು. ಅವರು ತಮ್ಮ ಬಗ್ಗೆ ತಾವು ತುಂಬಾ ತಿಳಿದವರು ಎಂಬ ಅಹಂಕಾರವನ್ನು ಹೊಂದಿದ್ದಿರಬಹುದು. ತಮ್ಮನ್ನು ತಾವು ಆದ್ಯರು ಎಂದು ಹೇಳಿಕೊಳ್ಳುತ್ತಿದ್ದಿರಬಹುದು.

ತಮ್ಮ ಹಿರಿತನದ ಬಗ್ಗೆ ತಾವೇ ಹೇಳಿಕೊಳ್ಳುವ ಅವರಿಗೆ ಗುಹೇಶ್ವರನ ಬಗ್ಗೆ ಕಿಂಚಿತ್ತೂ ತಿಳಿದಿಲ್ಲ ಎಂದು ಅವರನ್ನು ಕರ್ಮಿಗಳು ಎಂದು ಕಟುವಾಗಿ ನಿಂದಿಸುವ ಅಲ್ಲಮನ ರೋಷವನ್ನು ಈ ವಚನದಲ್ಲಿ ಗುರುತಿಸಬಹುದಾಗಿದೆ.

ಹೀಗೆ ಅಲ್ಲಮಪ್ರಭು ಅಂದಿನ ಕಾಲದಲ್ಲಿದ್ದ ಜಡ ಸಂಪ್ರದಾಯವಾದಿಗಳ ತಮ್ಮತನದ ಸ್ತುತಿಯನ್ನು ನಿರಾಕರಿಸುವನು. ಮಮಕಾರ, ಅಂಧಕಾರ, ಅಲ್ಪಜ್ಞಾನದಿಂದ ಬೀಗುತ್ತಿದ್ದ ಅವರ ಮನ, ತನು, ಇಂದ್ರಿಯಗಳೆಲ್ಲವೂ

ವಿಕಾರವಾಗಿರುವಾಗ, ಆ ಹಿರಿತನವೆಂಬ ಪದವಿಗೆ ಅವರು ಅರ್ಹರಲ್ಲ ಎಂಬ ಚಿಂತನೆಯಿಂದ ಇತರರನ್ನು ಎಚ್ಚರಿಸುತ್ತಾನೆ ಅಲ್ಲಮ.

"ಅಪ್ರತಿಮ ಅನುಭಾವಿಯಾಗಿದ್ದ ಪ್ರಭುದೇವ ತಾನು ಎಲ್ಲಿಯೋ ಗುಹಾವಿಸಿಯಾಗಿದ್ದು ತನ್ನೊಬ್ಬನ ಉದ್ಧಾರವನ್ನು ಮಾತ್ರ ಬಯಸದೆ, ಲೋಕದ ಇತರ ಸಾಧಕರ ಹಾಗೂ ಜನಸಾಮಾನ್ಯರ ಬಗ್ಗೆ ಕಾಳಜಿ ವಹಿಸಿ, ಅವರತ್ತ ಗಮನ ಹರಿಸಿದುದು ಆ ಕಾಲದ ಉಳಿದ ಯೋಗಸಿದ್ಧರಿಂದ ಅವನನ್ನು ವಿಶಿಷ್ಟವಾಗಿಸುತ್ತದೆ. ಪ್ರಭುದೇವನಲ್ಲಿ ಕಂಡುಬರುವ ಇನ್ನೊಂದು ವಿಶೇಷತೆಯೆಂದರೆ ಸ್ವತಃ ತಾನೇ ಸಾಧಕರನ್ನು ಹುಡುಕಿಕೊಂಡು ಹೋಗಿ, ಅವರಲ್ಲಿದ್ದ ಓರೆಕೋರೆಗಳನ್ನು ತಿದ್ದಿ, ಕುಂದು ಕೊರತೆಗಳನ್ನು ನೀಗಿಸಿ, ಅವರ ಸಾಧನೆ ಸಿದ್ಧಿಗಳನ್ನು ಪ್ರಶಂಸಿಸಿ ಮಾರ್ಗದರ್ಶನ ನೀಡಿದುದು. ವೀರಶೈವ ನಿರಂಜನ ಜಂಗಮ ತತ್ವಕ್ಕೆ ಪ್ರಭುದೇವನ ಜೀವನವೇ ಆದರ್ಶವೆಂಬುದರಲ್ಲಿ ಸಂದೇಹವಿಲ್ಲ."[೨೯]

"ಮತೀಯವಾದ ಭ್ರಮೆ ಭ್ರಾಂತಿಗಳಾಗಲಿ, ಪರಮತೀಯವಾದ ವಾದ ಕ್ರೋಧಗಳಾಗಲಿ, ಯಾವುವೂ ಅಲ್ಲಮನ ಬಳಿಯೇ ಸುಳಿಯಲಿಲ್ಲ. ಅವನ ಆಲೋಚನೆಯೇ ಮೂಲಭೂತವಾದ ಸುಧಾರಣೆಯತ್ತ ಕೇಂದ್ರೀಕೃತವಾಗಿತ್ತು. ಮಾನವನು ಯಾವ ಧರ್ಮದವನೇ ಆಗಲಿ, ಯಾವ ಕರ್ಮದವನೇ ಆಗಲಿ, ಯಾವ ಸ್ಥಾನದವನೇ ಆಗಲಿ, ಅಷ್ಟರಿಂದಲೇ ಅವನು ತನ್ನ ನಿರುಪಾದಿಕ ಗುಣವನ್ನು ಮರೆಯದೆ, ಸರ್ವದಲ್ಲಿಯೂ ತನ್ನನ್ನಷ್ಟೇ ಅಲ್ಲ, ಶಿವನನ್ನೇ ಕಾಣುವ ಕಾಣ್ಕೆಯನ್ನು ತೊರೆಯದೆ ಅಖಂಡ ಸೃಷ್ಟಿಗೆ ದೊರೆಯಾಗಿ ರಾರಾಜಿಸುವನು."[೩೦]

ಅಲ್ಲಮ ಪ್ರಭು ೧೨ನೇ ಶತಮಾನದಲ್ಲಿ ಶೈವರು ಆಚರಿಸುತ್ತಿದ್ದ ಧಾರ್ಮಿಕ, ಮತೀಯ, ಆಚರಣೆಗಳನ್ನು ನಿರಾಕರಿಸುತ್ತಾನೆ. ಸ್ಥಾವರಲಿಂಗ ಪೂಜೆಯನ್ನು, ಕರಲಿಂಗ ಪೂಜೆಯನ್ನು ದೇವಾಲಯ ನಿರ್ಮಿಸಿ ಅಲ್ಲಿ ಕಲ್ಲು ಲಿಂಗ ಪ್ರತಿಷ್ಠಾಪಿಸುವ, ಕ್ರಿಯಾ ವಿಧಿಗಳನ್ನು ನಿರಾಕರಿಸುತ್ತಾನೆ. ಹಲವು ರೀತಿಯ ವ್ರತ, ನೇಮಗಳನ್ನು ಖಂಡಿಸುತ್ತಾನೆ. ವೀರಶೈವ ಧರ್ಮೀಯರು ಅನುಸರಿಸುತ್ತಿದ್ದ ಎಲ್ಲ ಬಗೆಯ ಬಾಹ್ಯ ಕರ್ಮಾಚರಣೆಗಳನ್ನು ನಿರಾಕರಿಸುತ್ತಾನೆ. ಭಕ್ತನು ತನ್ನ ಅಂತರಂಗದ, ಪ್ರಾಣಲಿಂಗದ ಬಗ್ಗೆ ಅರಿವನ್ನು ಸತತ ಸಾಧನಾಮಾರ್ಗದಿಂದ ಬೆಳೆಸಿಕೊಂಡು ತಾನೇ ಗುಹೇಶ್ವರ ರೂಪಿ ಜಂಗಮನಾಗಿ ರೂಪುಗೊಳ್ಳಬೇಕೆಂಬ ಸಂದೇಶವನ್ನು ತನ್ನ ಸ್ವಯಂಸಿದ್ಧ ಬದುಕಿನ ಮಾದರಿಯನ್ನು ಪ್ರದರ್ಶಿಸುವ ಮೂಲಕ ವೀರಶೈವ ತತ್ವದ ಪ್ರತಿಪಾದನೆಗೆ ಮುಖ್ಯನಾಗಿದ್ದಾನೆ.

ಅಡಿಟಿಪ್ಪಣಿಗಳು

೧. ಸಂಶೋಧನ ಚತುರ್ಮುಖ, ಡಾ. ಬಿ.ವ್ಹಿ. ಶಿರೂರ, ಪು. ೧೯೫.

೨. ಶರಣ ತತ್ತ್ವ ಚಿಂತನ, ಪ್ರ.ಸಂ. : ಗೊರು. ಚನ್ನಬಸಪ್ಪ, (ಪುರಾತನರು - ಶಿವಶರಣರು ಗೋಷ್ಠಿ ಅಧ್ಯಕ್ಷ ಭಾಷಣ), ಡಾ. ಎಸ್. ವಿದ್ಯಾಶಂಕರ, ಪು. ೭೭-೭೮.

೩. ಸಂಶೋಧನ ಚತುರ್ಮುಖ, ಡಾ. ಬಿ.ವ್ಹಿ. ಶಿರೂರ, ಪು. ೧೯೫.

೪. ಅಲ್ಲಮಪ್ರಭು ಮತ್ತು ಶೈವ ಪ್ರತಿಭೆ, ಲೇ: ಡಿ.ಆರ್. ನಾಗರಾಜ್, ಪು. ೪೩.

೫. ಅಲ್ಲಮನ ವಚನ ಚಂದ್ರಿಕೆ, ಸಂ. : ಎಲ್. ಬಸವರಾಜು, ಪು. ೧೦೬, ವ.ಸಂ. ೪೮೦.

೬. ವಚನ ಪರಿಭಾಷಾ ಕೋಶ, ಸಂ. : ಡಾ. ಎಸ್. ವಿದ್ಯಾಶಂಕರ, ಪು. ೬೮.

೭. ವಚನ ಪರಿಭಾಷಾ ಕೋಶ, ಸಂ. : ಡಾ. ಎಸ್. ವಿದ್ಯಾಶಂಕರ, ಪು. ೧೯೧

೮. ಪ್ರಭುದೇವರ ಷಟ್ಸ್ಥಲದ ವಚನಗಳು, ಸಂ. : ಡಾ. ಎಲ್. ಬಸವರಾಜು, ಪು. ೨೬೯, ವ.ಸಂ. ೨೦೯.

೯. ಪ್ರಭುದೇವರ ಷಟ್ಸ್ಥಲದ ವಚನಗಳು, ಸಂ. : ಡಾ. ಎಲ್. ಬಸವರಾಜು, ಪು. ೨೭೦.

೧೦. ವಚನ ಪರಿಭಾಷಾ ಕೋಶ, ಸಂ. : ಡಾ. ಎಸ್. ವಿದ್ಯಾಶಂಕರ, ಪು. ೧೯೦.

೧೧. ಪ್ರಭುದೇವರ ಷಟ್ಸ್ಥಲದ ವಚನಗಳು, ಸಂ. : ಡಾ. ಎಲ್. ಬಸವರಾಜು, ಪು. ೨೭೦, ವ.ಸಂ. ೨೧೦.

೧೨. ಪ್ರಭುದೇವರ ಷಟ್ಸ್ಥಲದ ವಚನಗಳು, ಸಂ. : ಡಾ. ಎಲ್. ಬಸವರಾಜು, ಪು. ೨೭೧.

೧೩. ಪ್ರಭುದೇವರ ಷಟ್ಸ್ಥಲದ ವಚನಗಳು, ಸಂ. : ಡಾ. ಎಲ್. ಬಸವರಾಜು, ಪ್ರಸಾದಿ ಸ್ಥಲ, ಪು. ೨೬೭, ವ.ಸಂ. ೨೦೭.

೧೪. ಶರಣ ತತ್ತ್ವ ವಿವೇಚನೆ, ಭಾಗ - ೩, ಪ್ರೊ. ಬಿ. ವಿರೂಪಾಕ್ಷಪ್ಪ, ಪು. ೧೦.

೧೫. ಪ್ರಭುದೇವರ ಷಟ್ಸ್ಥಲದ ವಚನಗಳು, ಸಂ. : ಡಾ. ಎಲ್. ಬಸವರಾಜು, ಪ್ರಾಣಲಿಂಗಿಸ್ಥಲ, ಪು. ೨೭೫, ವ.ಸಂ. ೨೧೨.

೧೬. ಅಲ್ಲಮ ಪ್ರಭುವಿನ ವಚನ ಸಂಪುಟ, ಸಂ. : ಡಾ. ಬಿ.ವಿ. ಮಲ್ಲಾಪುರ, ಪ್ರಸ್ತಾವನೆಯ ಭಾಗ, ಪು. XX

೧೭. ಪ್ರಭುದೇವರ ಷಟ್ಸ್ಥಲದ ವಚನಗಳು, ಸಂ. : ಡಾ. ಎಲ್. ಬಸವರಾಜು, ಪ್ರಾಣಲಿಂಗ ಸ್ಥಲ, ಪು. ೨೭೫, ವ.ಸಂ. ೨೧೩.

೧೮. ವಚನ ಪರಿಭಾಷಾ ಕೋಶ; ಸಂ. : ಡಾ. ಎಸ್. ವಿದ್ಯಾಶಂಕರ, ಪು. ೧೦೨-೧೦೩.

೧೯. ಪ್ರಭುದೇವರ ಷಟ್ಸ್ಥಲದ ವಚನಗಳು, ಸಂ. : ಡಾ. ಎಲ್. ಬಸವರಾಜು, ಪ್ರಾಣಲಿಂಗಿ ಸ್ಥಲ, ಪು. ೩೩೬, ವ.ಸಂ. ೧೭೬.

೨೦. ಪ್ರಭುದೇವರ ಷಟ್ಸ್ಥಲದ ವಚನಗಳು, ಸಂ. : ಡಾ. ಎಲ್. ಬಸವರಾಜು, ಮಾಹೇಶ್ವರ ಸ್ಥಲ, ಪು. ೧೭೪, ವ.ಸಂ. ೧೨೦.

೨೧. ವಚನ ಪರಿಭಾಷಾ ಕೋಶ, ಸಂ. : ಡಾ. ಎಸ್. ವಿದ್ಯಾಶಂಕರ, ಪು. ೧೧೧.

೨೨. ವಚನ ಪರಿಭಾಷಾ ಕೋಶ, ಸಂ. : ಡಾ. ಎಸ್. ವಿದ್ಯಾಶಂಕರ, ಪು. ೨೪೬.

೨೩. ವಚನ ಪರಿಭಾಷಾ ಕೋಶ, ಸಂ. : ಡಾ. ಎಸ್. ವಿದ್ಯಾಶಂಕರ, ಪು. ೧೪೯.

೨೪. ಪ್ರಭುದೇವರ ಷಟ್ಸ್ಥಲದ ವಚನಗಳು, ಸಂ. : ಡಾ. ಎಲ್. ಬಸವರಾಜು, ಪ್ರಾಣಲಿಂಗಿ ಸ್ಥಲ, ಪು. ೨೪೨, ವ.ಸಂ. ೧೮೨.

೨೫. ವಚನ ಪರಿಭಾಷಾ ಕೋಶ, ಸಂ. : ಡಾ. ಎಸ್. ವಿದ್ಯಾಶಂಕರ, ಪು. ೯೧.

೨೬. ವಚನ ಪರಿಭಾಷಾ ಕೋಶ, ಸಂ. : ಡಾ. ಎಸ್. ವಿದ್ಯಾಶಂಕರ, ಪು. ೧೩೭.

೨೭. ಪ್ರಭುದೇವರ ಷಟ್ಸ್ಥಲದ ವಚನಗಳು, ಸಂ. : ಡಾ. ಎಲ್. ಬಸವರಾಜು, ಮಾಹೇಶ್ವರ ಸ್ಥಲ, ಪು. ೧೮೧, ವ.ಸಂ. ೧೨೯.

೨೮. ಪ್ರಭುದೇವರ ಷಟ್ಸ್ಥಲದ ವಚನಗಳು, ಸಂ. : ಡಾ. ಎಲ್. ಬಸವರಾಜು, ಪು. ೧೮೨.

೨೯. ಅಲ್ಲಮ ಪ್ರಭುದೇವರ ವಚನ ಸಂಪುಟ, ಸಂ. : ಡಾ. ಬಿ.ವ್ಹಿ. ಮಲ್ಲಾಪುರ, ಪು.ಸಂ. XVIII (ಪ್ರಸ್ತಾವನೆ).

೩೦. ಪ್ರಭುದೇವರ ಷಟ್ಸ್ಥಲದ ವಚನಗಳು, ಸಂ. : ಡಾ. ಎಲ್. ಬಸವರಾಜು, ಪು. XI.

* * *

ಅಧ್ಯಾಯ – ೬

ಇನ್ನಿತರ ಮತಾಚರಣೆಗಳನ್ನು ಕುರಿತು

ಅಧ್ಯಾಯ – ೬

ಇನ್ನಿತರ ಮತಾಚರಣೆಗಳನ್ನು ಕುರಿತು

ಭಾರತದಲ್ಲಿ ವರ್ಣ ವ್ಯವಸ್ಥೆಯ ಜೊತೆಗೆ ಜನರು ಅನುಸರಿಸುತ್ತಿದ್ದ ವೃತ್ತಿ, ಕಸುಬು ಸಾಂಪ್ರದಾಯಿಕವಾಗಿತ್ತು. ಇದರಿಂದ ಜನರು ಮಾಡುವ ಕಾಯಕದ ಮೇಲೆ ವಿವಿಧ ಜಾತಿಗಳು ರೂಪುಗೊಂಡವು. ಈ ಜಾತಿ ಪದ್ಧತಿ ಪುರಾತನ ಕಾಲದಿಂದಲೂ ನಮ್ಮ ದೇಶದಲ್ಲಿ ಅಸ್ತಿತ್ವದಲ್ಲಿದೆ. ಬಸವಣ್ಣನವರ 'ಕಾಸಿ ಕಮ್ಮಾರನಾದ ಬೀಸಿ ಮಡಿವಾಳನಾದ' ಎಂಬ ವಚನವು ವೃತ್ತಿಗೂ - ಜಾತಿಗೂ ಸಂಬಂಧವಿರುವುದನ್ನು ಸ್ಪಷ್ಟಪಡಿಸುತ್ತದೆ.

> "ಜಾತಿ ಪದ್ಧತಿ ಬೆಳೆದದ್ದು ಕಸುಬುಗಳ ಆಧಾರದ ಮೇಲೆ, ಸಮಾಜದ ಬೇಡಿಕೆಗಳು ಹೆಚ್ಚಾಗುತ್ತಾ, ಹೆಚ್ಚು ಹೆಚ್ಚು ಕಸುಬುಗಳ ಅಗತ್ಯ ಕಂಡುಬಂದು ಜಾತಿಗಳ ಸಂಖ್ಯೆ ಕ್ರಮೇಣ ಹೆಚ್ಚಾಗುತ್ತಾ ಬಂದಿತು. ಋಗ್ವೇದದಲ್ಲಿ ರಾಜನ್ಯ, ರಥಕಾರ, ಬಡಗಿ, ಅಕ್ಕಸಾಲಿಗ, ರಜಕ ಇತ್ಯಾದಿ ಅನೇಕ ಜಾತಿಗಳ ಹೆಸರು ಕಂಡುಬರುತ್ತದೆ. ಕ್ರಮೇಣ ನಾಗರಿಕತೆ ಬೆಳೆದಂತೆ, ಜನಜೀವನ ಹೆಚ್ಚು ಸಂಕೀರ್ಣವಾದಂತೆ ಜಾತಿಗಳ ಸಂಖ್ಯೆ ಹೆಚ್ಚಾಯಿತು. ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಅನೇಕ ಕಸುಬುಗಳ, ಜಾತಿಗಳ ಹೆಸರು ಬರುತ್ತದೆ."[೧]

ವಿವಿಧ ವೃತ್ತಿಯಿಂದ ರೂಪುಗೊಂಡ ನೂರಾರು ಜಾತಿಗಳು ಸಮಾಜದಲ್ಲಿ ಅಸ್ತಿತ್ವದಲ್ಲಿದ್ದವು. ಇಂದಿಗೂ ಅವು ಮುಂದುವರೆದುಕೊಂಡು ಬರುತ್ತಿವೆ. ಈ ಜಾತಿಯ ಜನರು ತಮ್ಮದೇ ಆದ ಆಚಾರ - ವಿಚಾರಗಳನ್ನು ರೂಢಿಸಿಕೊಂಡರು. ತಮ್ಮದೇ ಆದ ಕುಲದೇವತಾ ಆರಾಧನೆಯನ್ನು ಮಾಡತೊಡಗಿದರು. ಹಲವು ಜನಪದ ದೇವಿಯರಾದ ಮಾರಿ, ಮಸಣಿ, ಕಾಳಿ, ಚೌಡೇಶ್ವರಿ, ಜಲಗೇರಮ್ಮ, ಅಣ್ಣಮ್ಮ ಎಂಬಿತ್ಯಾದಿ ಗ್ರಾಮ ದೇವತೆಯರ ಪೂಜೆ, ಜಾತ್ರೆ, ಉತ್ಸವ ಮುಂತಾದ ಆಚರಣೆಗಳು ಇಂದಿಗೂ ಪ್ರಚಲಿತದಲ್ಲಿವೆ.

ಜನಪದರು ಕೊಂಡ ಹಾಯುವುದು, ಬಾಯಿಗೆ ಬೀಗ ಹಾಕಿಸಿಕೊಳ್ಳುವುದು, ಸಿಡಿ ಆಡುವುದು, ಪ್ರಾಣಿ ಬಲಿ ನೀಡುವುದು ಮುಂತಾದ ಭೀಕರವಾದ ಆಚರಣೆಗಳನ್ನು ದೇವರ ಹೆಸರಿನಲ್ಲಿ ನಡೆಸುವರು. ಆದಿವಾಸಿಗಳು ತಮ್ಮದೇ ಆದ ಆಚರಣೆಗಳನ್ನು ಹೊಂದಿದ್ದಾರೆ.

> "ಆದಿವಾಸಿಗಳಲ್ಲಿ ವಸ್ತು ಪೂಜೆ, ಪಿತೃಪೂಜೆ, ಕುಲದೇವತಾ ಪೂಜೆಯ ಜೊತೆಗೆ ಮಾಂತ್ರಿಕ ವಿದ್ಯೆ, ಮಾಟ ಮಂತ್ರ ವಿದ್ಯೆ ಕೂಡಾ ಪ್ರಚಲಿತವಿದೆ. ಮೌಲಿನೌಸ್ಕಿ ಹೇಳಿರುವಂತೆ

ಅನುಭವಾತ್ಮಕವಾದ ಉದ್ದೇಶಗಳ ಸಾಫಲ್ಯಕ್ಕಾಗಿ ಅಲೌಕಿಕವಾದ ಸಾಧನಗಳನ್ನು ಬಳಸುವ ಯತ್ನದೇ 'ಮಾಂತ್ರಿಕ ವಿದ್ಯೆ' ಇದು ಶುದ್ಧಾಚಾರ ಮಾಂತ್ರಿಕ ವಿದ್ಯೆ ಆಗಿರಬಹುದು ಅಥವಾ ವಾಮಾಚಾರ ಮಾಂತ್ರಿಕ ವಿದ್ಯೆ' ಆಗಿರಬಹುದು. ಮೊದಲನೆಯದನ್ನು ಒಳ್ಳೆಯ ಉದ್ದೇಶಗಳಿಗಾಗಿ (ಆರೋಗ್ಯ, ಪ್ರವಾಹ ನಿಯಂತ್ರಣ, ಯುದ್ಧದಲ್ಲಿ ಜಯಗಳಿಸುವುದು ಇತ್ಯಾದಿ) ಮತ್ತು ಎರಡನೆಯದನ್ನು ದುರುದ್ದೇಶಗಳಿಗಾಗಿ (ಭೂತ, ಪಿಶಾಚಿಗಳನ್ನು ಆವಾಹನೆ ಮಾಡಿ ಇತರರಿಗೆ ಕೆಡುಕಾಗುವಂತೆ ಮಾಡುವುದು) ಬಳಸುವುದುಂಟು. ಈ ಎರಡೂ ಬಗೆಯ ಮಾಂತ್ರಿಕ ವಿದ್ಯೆಯನ್ನು ಬೇರೆ ಬೇರೆ ಸಮೂಹಗಳಲ್ಲಿ ಬೇರೆ ಬೇರೆ ರೀತಿಗಳಲ್ಲಿ ಬಳಸುವರು."[೨]

ಅಲ್ಲಮ ಪ್ರಭು ತನ್ನ ವಚನಗಳಲ್ಲಿ ಎಲ್ಲಾ ರೀತಿಯ ಆಚರಣೆಗಳನ್ನು ಪ್ರಶ್ನಿಸುವನು, ನಿರಾಕರಿಸುವನು. ಅವುಗಳ ಔಚಿತ್ಯದ ಬಗ್ಗೆ ವಿಚಾರ ಮಾಡಿರುವನು. "ಅಲ್ಲಮನದು ಭಾವುಕವಲ್ಲದ ವೈಚಾರಿಕ ದೃಷ್ಟಿ. ಧಾರ್ಮಿಕ ಆಚರಣೆಗಳು ವಿಚಾರ ಶೀಲತೆಯನ್ನು ಕಳೆದುಕೊಂಡು ಯಾಂತ್ರಿಕವಾದಾಗ ಅವು ಸಂಪೂರ್ಣ ಅನುಪಯುಕ್ತವಾಗುತ್ತವೆಂಬ ಅಭಿಪ್ರಾಯ ಅಲ್ಲಮನದು."[೩]

ಮತಾಚರಣೆಯ ಹೆಸರಿನಲ್ಲಿ ಮಡುಗಟ್ಟಿ ನಿಂತ ಆಚರಣೆಗಳನ್ನು ನಿರಾಕರಿಸಿ, ಶುದ್ಧವಾದ, ನಿರ್ಮಲವಾದ ಮನಸ್ಸಿನಿಂದ ಗುಹೇಶ್ವರನ ಬಗ್ಗೆ ಅರಿವು ಬೆಳೆಸಿಕೊಳ್ಳಬೇಕೆಂಬುದು ಅಲ್ಲಮನ ಬಯಕೆ. ಆದ್ದರಿಂದ ದೇವರ ಹೆಸರಿನಲ್ಲಿ, ವಿವಿಧ ಜಾತಿಯ ಜನರು ನಡೆಸುವ ಕಂದಾಚಾರಗಳನ್ನು ಪ್ರಶ್ನಿಸುತ್ತಾನೆ. ಈಗ ಅವನ ವಚನಗಳ ವಿಶ್ಲೇಷಣೆಯಿಂದ ವಿಚಾರ ಮಾಡೋಣ.

ನಿರಾಳವೆಂಬ ಕೂಸಿಂಗೆ ಬೆಣ್ಣೆಯನ್ನಿಕ್ಕಿ ಹೆಸರಿಟ್ಟು ಕರೆದವರಾರೊ?
ಅಕಟಕಟಾ, ಶಬ್ದದ ಲಜ್ಜೆಯ ನೋಡಾ!
ಗುಹೇಶ್ವರನ ನಿಜನಿಲವನರಿಯದ ಅನುಭಾವಿಗಳೆಲ್ಲರ
ತಲೆಕಟ ಕಾಡಿತ್ತು![೪] ೨೬೪

"ನಿರಾಳ ಎಂಬುದು ನಿರ್ಗುಣ ನಿರಾಕಾರ, ನಿರವಯಲ ನಿಷ್ಕಲ ಅನಿರ್ವಾಚ್ಯವೆನಿಸುವ ವಸ್ತು, ಪರಬ್ರಹ್ಮ."[೫]

ಗುಹೇಶ್ವರನೆಂಬ ಪರಬ್ರಹ್ಮ ಕಣ್ಣಿಗೆ ಕಾಣದ, ಅಮೂರ್ತವಾದ ಚೈತನ್ಯಕಾರಿಯಾದ ಒಂದು ಶಕ್ತಿ. ಅದನ್ನು ಸರಿಯಾಗಿ ಗ್ರಹಿಸಲು ಆಗದವರು ನವಜಾತ ಶಿಶುವಿಗೆ ಬೆಣ್ಣೆಯ ತಿನ್ನಿಸಿ ಮುದ್ದಾದ ಹೆಸರನ್ನಿಡುವಂತೆ, ದೇವರನ್ನು ವಿವಿಧ ನಾಮ, ರೂಪ, ಆಕಾರಗಳನ್ನು ಕೊಟ್ಟು ಕರೆಯುವ ಕ್ರಿಯೆಯನ್ನು ಅಲ್ಲಮ ಶಬ್ದದ ಲಜ್ಜೆ ಎನ್ನುತ್ತಾನೆ. ಯಾವ ಹಿಂಜರಿಯೂ ಇಲ್ಲದೆ ಮನಃ ಬಂದಂತೆ, ವಿವಿಧ ಹೆಸರುಗಳನ್ನು ಕೊಟ್ಟು ಅದನ್ನು ಪರಬ್ರಹ್ಮ ಎಂದು ವಿವಿಧ ಜನರು ಪೂಜಿಸುವರು. ಒಂದೊಂದು ಜಾತಿಯ ಜನರಿಗೆ ಒಂದೊಂದು ಹೆಸರಿನ ದೇವರುಗಳು, ದೇವಿಯರು, ಭಾರತೀಯರು ಮೂವತ್ಮೂರು ಕೋಟಿ ದೇವರನ್ನು ಸೃಷ್ಟಿಸಿದ್ದಾರೆ. ಇಷ್ಟಾದರೂ ಅವರಿಗೆ ತೃಪ್ತಿಯಿಲ್ಲ. ಈ ಹೆಸರುಗಳನ್ನು ಸೂಚಿಸಿದವರು ಯಾರೋ ಎಂದು ಪ್ರಶ್ನಿಸಿದ್ದಾನೆ ಅಲ್ಲಮ.

ಎಲ್ಲಾ ಜಾತಿಗಳಲ್ಲೂ ಆ ಜಾತಿಯ ಪ್ರಮುಖ ದೇವರನ್ನು ಪೂಜಿಸುವ ಹಿರಿಯರು, ಪೂಜಾರಿಗಳು, ಗುಡ್ಡರು ಎಂಬ ಜನರು ಇರುತ್ತಾರೆ. ಪೌರೋಹಿತ್ಯ ನಡೆಸುವ ಈ ಜನ ದೇವರುಗಳಿಗೆ ಹೆಸರನ್ನು ಇಟ್ಟಿರುತ್ತಾರೆ. ಅದನ್ನು ನಂಬಿದ ಜನ ಅದನ್ನು ಅನುಸರಿಸಿಕೊಂಡು ನಡೆಯುತ್ತಾರೆ. ಇದರ ಬಗ್ಗೆ ಅಲ್ಲಮಪ್ರಭು ಅಕಟಕಟಾ ಎಂದು ತನ್ನ ವ್ಯಥೆಯನ್ನು ವ್ಯಕ್ತಪಡಿಸಿದ್ದಾನೆ.

ಪರಮಾತ್ಮನ ಬಗ್ಗೆ ಚರ್ಚಿಸುವವರು ಗುಹೇಶ್ವರನನ್ನು ತಿಳಿಯಲಾಗದೆ, ತುಂಬಾ ನೊಂದಿರುವರು ತೀವ್ರವಾದ ವೇದನೆಯನ್ನು ಅನುಭವಿಸಿರುವರು. ಆ ರೀತಿ ಇರಬೇಕಾದರೆ, ತಾವೇ ಎಲ್ಲ ತಿಳಿದವರಂತೆ, ಕಂಡು ಮಾತನಾಡಿದಂತೆ ಜನ ವಿವಿಧ ಶಬ್ದಗಳಿಂದ ಅಬ್ಬರ ಆಡಂಬರ ಮಾಡುವುದನ್ನು ಅಲ್ಲಮಪ್ರಭು ಈ ವಚನದಲ್ಲಿ ನಿರಾಕರಿಸುತ್ತಾನೆ.

ಪೃಥ್ವಿಯನತಿಗಳೆದ ಸ್ಥಾವರಂಗಳಿಲ್ಲ
ಅಪ್ಪುವನತಿಗಳೆದ ತೀರ್ಥಯಾತ್ರೆಗಳಿಲ್ಲ
ಅಗ್ನಿಯನತಿಗಳೆದ ಹೋಮಸಮಾಧಿಗಳಿಲ್ಲ
ವಾಯುವನತಿಗಳೆದ ನೇಮ ನಿತ್ಯಂಗಳಿಲ್ಲ
ಆಕಾಶವನತಿಗಳೆದ ಧ್ಯಾನ ಮೌನಂಗಳಿಲ್ಲ
ಗುಹೇಶ್ವರ ತಾನೆಂದ ಬಿದಂಗೆ
ಇನ್ನಾವಂಗವೂ ಇಲ್ಲ.[೬] ೩೮೯

ಪೃಥ್ವಿ, ಅಪ್ಪು, ಅಗ್ನಿ, ವಾಯು ಮತ್ತು ಆಕಾಶ ಎಂಬ ಪಂಚಭೂತಗಳಿಂದ ಈ ಜಗತ್ತು ನಿರ್ಮಾಣವಾಗಿದೆ. ಇವುಗಳನ್ನು ಮೀರಿದ ಶ್ರೇಷ್ಠವಾದ ವಸ್ತುಗಳು ಯಾವುವೂ ಇಲ್ಲ. ಇದನ್ನರಿತವಂಗೆ ಇನ್ನಾವ ಕ್ರಿಯಾವಿಧಿಗಳು ಶ್ರೇಷ್ಠವಾಗುವುದಿಲ್ಲ. ಯಾವ ಸ್ಥಾವರ ಲಿಂಗವನ್ನು ಪೂಜಿಸಬೇಕಾಗಿಲ್ಲ. ತೀರ್ಥಯಾತ್ರೆ ಮಾಡಬೇಕಾಗಿಲ್ಲ. ನೇಮ, ವ್ರತಗಳು, ಹೋಮ ಹವನಾದಿಗಳು, ಧ್ಯಾನ - ಮೌನಂಗಳು ಇರುವುದಿಲ್ಲ.

ತಾನೇ ಗುಹೇಶ್ವರ ಎಂದರಿತವನಿಗೆ ಇನ್ನಾವ ಅಂಗವೂ ಇರುವುದಿಲ್ಲ ಎನ್ನುತ್ತಾನೆ. ಅಲ್ಲಮ, ಈ ಮಾನವನೂ ಸಹ ಪಂಚಭೂತಗಳಿಂದಲೇ ಆಗಿದ್ದಾನೆ. ಪವಿತ್ರವಾದ ಪಂಚಭೂತಗಳು ಮಾನವ ಶರೀರದಲ್ಲೂ ನೆಲೆಸಿವೆ. ತಾನು ಬೇರೆಯಲ್ಲ, ಈ ಜಗತ್ತು ಬೇರೆಯಲ್ಲ, ವಿಶ್ವದ ಒಂದು ಭಾಗ ಮನುಷ್ಯ ಎಂಬ ವೈಜ್ಞಾನಿಕ ಸತ್ಯವೂ, ಆತ್ಮ, ಪರಮಾತ್ಮನ ಭಾಗವೆಂಬ ಆಧ್ಯಾತ್ಮಿಕ ಸತ್ಯವೂ ಈ ವಚನದಲ್ಲಿ ವ್ಯಕ್ತವಾಗಿದೆ. ಆದ್ದರಿಂದ ಪರವಸ್ತುವನ್ನು ಪಡೆಯಬೇಕೆಂದು ಹಲವಾರು ಕ್ರಿಯಾವಿಧಿಗಳಾದ ಹೋಮ, ಧ್ಯಾನ, ನೇಮ, ಸ್ಥಾವರ ಪೂಜೆ, ತೀರ್ಥಯಾತ್ರೆಗಳನ್ನು ಮಾಡುವ ಆಚರಣೆಗಳನ್ನು ಅಲ್ಲಮ ನಿರಾಕರಿಸುತ್ತಾನೆ.

ಈ ರೀತಿಯ ಆಚರಣೆಗಳು ಎಲ್ಲ ಮತ - ಜಾತಿಗಳಲ್ಲೂ, ಪಂಥದವರಲ್ಲೂ ಇವೆ. ಇದನ್ನು ಅಲ್ಲಮ ನಿರಾಕರಿಸುತ್ತಾನೆ.

ಕರಣಾದಿ ಗುಣಂಗಳಳಿದು ನವಚಕ್ರಂಗಳು ಭಿನ್ನವಾದ ಬಳಿಕ ಇನ್ನೇನೊ, ಇನ್ನೇನೊ?
ಪುಣ್ಯವಿಲ್ಲ, ಪಾಪವಿಲ್ಲ; ಇನ್ನೇನೊ, ಇನ್ನೇನೊ?
ಸ್ವರ್ಗವಿಲ್ಲ, ನರಕವಿಲ್ಲ; ಇನ್ನೇನೋ, ಇನ್ನೇನೊ?
ಗುಹೇಶ್ವರನೆಂಬ ಲಿಂಗ ವೇಧಿಸಿ, ಸುಖಿಯಾದ ಬಳಿಕ
ಇನ್ನೇನೊ, ಇನ್ನೇನೊ?[೭] ೩೮೮

"ಸತ್ತ ನಂತರ ವ್ಯಕ್ತಿಗೆ ಏನಾಗುವುದು ಎಂಬುದಕ್ಕೆ ಹಿಂದುಗಳ ಸ್ವರ್ಗ - ನರಕ ಕಲ್ಪನೆ ಬಹಳ ಸರಳವಾದುದು. ಇಹಲೋಕದಲ್ಲಿದ್ದಾಗ ವ್ಯಕ್ತಿಯು ನಡೆಸಿದ ಜೀವನದ ರೀತಿಗೆ ಅನುಸಾರವಾಗಿ ಆತನಿಗೆ ಪರಲೋಕದಲ್ಲಿ ಗತಿ ಪ್ರಾಪ್ತವಾಗುವುದು. ಸನ್ನಡತೆಯಿಂದ ಕೂಡಿದ್ದು ಸತ್ಕಾರ್ಯದಲ್ಲಿ ತೊಡಗಿರುವಾತನಿಗೆ ಸತ್ತ ನಂತರ ಸದ್ಗತಿ. ಅಂದರೆ ಸ್ವರ್ಗವೂ, ದುರ್ನಡತೆಯಿಂದ ಕೂಡಿದ್ದು, ದುಷ್ಕಾರ್ಯದಲ್ಲಿ ತೊಡಗಿರುವಾತನಿಗೆ ದುರ್ಗತಿ, ಅಂದರೆ ನರಕವೂ ಪ್ರಾಪ್ತವಾಗುವುದೆಂಬುದು ಹಿಂದೂಗಳ ಸಾಮಾನ್ಯ ನಂಬಿಕೆ."[೮]

"ತ್ರಿಕರಣ : ಮನ, ವಚನ, ಕಾಯ, ಇವು ಮೂರು ಕರಣಗಳು."[೯]

"ನವಚಕ್ರ ಎಂದರೆ ನವನಾಳ : ಗಾಂಧಾರೀ, ಹಸ್ತಿಜಿಹ್ವಾ, ಪೂಷಾ, ಪಯಸ್ವಿನೀ, ಅಲಂಬು, ಲಕುಹ, ಶಂಕಿನೀ, ಇಡಾ, ಪಿಂಗಳಾ, ಸುಷುಮ್ನಾ - ಇವು ದಶನಾಡಿಗಳು ಸುಷುಮ್ನಾ ನಾಡಿಯನ್ನು ಹೊರತುಪಡಿಸಿ ಉಳಿದ ಒಂಬತ್ತು ನವನಾಳಗಳೆಂದು ಪ್ರಸಿದ್ಧವಾಗಿವೆ.

ಪಂಚಜ್ಞಾನೇಂದ್ರಿಯ ಹಾಗೂ ಅಂತಃಕರಣ ಚತುಷ್ಟಯಗಳು ಸೇರಿ ನವನಾಳವೆಂದು ಹೇಳಲಾಗಿದೆ."[೧೦]

ಭಾರತದ ಎಲ್ಲಾ ಜಾತಿಯ ಜನರಲ್ಲಿ ಸ್ವರ್ಗ ನರಕ ಕಲ್ಪನೆಯಿದೆ. ಪುಣ್ಯ ಮಾಡಿದರೆ ಸ್ವರ್ಗ, ಪಾಪ ಮಾಡಿದರೆ ನರಕ ಎಂಬ ಸಾಮಾನ್ಯ ನಂಬಿಕೆಯಿಂದ ಎಲ್ಲರೂ ಪುಣ್ಯಕಾರ್ಯ ಮಾಡಲು ವಿವಿಧ ಸದಾಚಾರಗಳನ್ನು ರೂಢಿಸಿಕೊಳ್ಳುವರು. ನರಕ ಪ್ರಾಪ್ತವಾಗುವುದೆಂಬ ಭಯದಿಂದ, ದುಷ್ಟಕಾರ್ಯಗಳನ್ನು ಮಾಡಲು ಹಿಂಜರಿಯುವರು. ಇದು ಒಂದು ಧಾರ್ಮಿಕ ನಂಬಿಕೆಯಾಗಿದೆ. ದೇವರು, ಧರ್ಮ ಎಂಬಿತ್ಯಾದಿ ನಂಬಿಕೆಗಳ ಹಿನ್ನೆಲೆಯಲ್ಲಿ ಸ್ವರ್ಗ - ನರಕ, ಪಾಪ - ಪುಣ್ಯಗಳೆಂದು ನಂಬುವ ಜನ ಹಲವಾರು ಮತಾಚರಣೆಗಳನ್ನು ಕೈಗೊಳ್ಳುವರು.

ಅಲ್ಲಮನ ಪ್ರಕಾರ ನಮ್ಮ ತ್ರಿಕರಣಗಳಾದ ಮನ, ವಚನ, ಕಾಯಗಳು ಶುದ್ಧವಾದರೆ, ನವನಾಳಗಳು ಪವಿತ್ರವಾಗುವವು. ಆಗ ನಮ್ಮ ಭಾವನೆಗಳು, ಮಾತು ಮತ್ತು ವರ್ತನೆಗಳೆಲ್ಲ ಪರಿಶುದ್ಧವಾಗಿರುವುವು. ಆ ರೀತಿ ಇದ್ದ ಮೇಲೆ ಪಾಪ - ಪುಣ್ಯದ ಭಯವಾಗಲೀ, ಸ್ವರ್ಗ - ನರಕದ ಕಲ್ಪನೆಯಾಗಲೀ ಏಕೆ ಬೇಕು? ಅದರ ಅಗತ್ಯವಿಲ್ಲ ಎಂದು ಅಲ್ಲಮ ಹೇಳುತ್ತಿದ್ದಾನೆ.

ಗುಹೇಶ್ವರನೆಂಬ ಪರವಸ್ತುವನ್ನು ತಿಳಿದು, ಸುಖಿಯಾದ ಬಳಿಕ ಇನ್ನೇನು? ಎಂದು ಪ್ರಶ್ನಿಸುತ್ತಾನೆ.

ಹೀಗೆ ಅಲ್ಲಮ ಪ್ರಭು ಕೃತಕವಾದ ಆಚರಣೆಗಳನ್ನು ನಿರಾಕರಿಸಿ, ನಮ್ಮ ತ್ರಿಕರಣಗಳು ಪರಿಶುದ್ಧವಾಗಿರಬೇಕೆಂಬುದನ್ನು ತಿಳಿಸುತ್ತಾನೆ.

ಉದಕದಲುತ್ಪತ್ತಿಯಾದ ಶತಪತ್ರದಂತೆ
ಸಂಸಾರಸಂಗವ ಹೊದ್ದದಿರಬೇಕು.
ಕಾಯವೆ ಪೀಠ, ಮನವೆ ಲಿಂಗವಾದಡೆ
ಕೊರಳಲ್ಲಿ ನಾಗವತ್ತಿಗೆಯೇಕೊ ಶರಣಂಗೆ ಗುಹೇಶ್ವರಾ?[೧೧] ೨೩.೨

ಅಲ್ಲಮನ ಕಾಲದಲ್ಲಿ ಉಂಟಾದ ಶರಣ ಕ್ರಾಂತಿಯಿಂದಾಗಿ, ಸಮಾಜದಲ್ಲಿದ್ದ ಇತರ ಕೆಳಜಾತಿಯ ಜನರು, ಶರಣ ಮಾರ್ಗವನ್ನು ಅನುಸರಿಸಲು ಬಯಸಿರಬೇಕು. ಅಂತಹವರಿಗೆ ಗುರುವಿನಿಂದ ದೀಕ್ಷೆ ಪಡೆದು ಕೆಲವು ಆಚಾರಗಳನ್ನು ಅನುಸರಿಸುವಂತೆ, ಅಂದಿನ ಕಾಲದಲ್ಲಿ ಗುರು, ಹಿರಿಯರು, ಸಂಪ್ರದಾಯ ವಾದಿಗಳು ಕಟ್ಟುಕಟ್ಟಳೆ ವಿಧಿಸಿರಬಹುದು. ಅಂತಹ ಸಂದರ್ಭವನ್ನು ಗ್ರಹಿಸಿದ ಅಲ್ಲಮನು ಈ ವಚನ ರಚಿಸಿರುವನೆಂದು ಹೇಳಬಹುದು.

ಈ ವಚನದ ಸಾಲುಗಳು ಈ ವಿಚಾರವನ್ನು ದೃಢಪಡಿಸುತ್ತವೆ. ನೀರಿನಲ್ಲಿ ಹುಟ್ಟಿ ಬೆಳೆವ ತಾವರೆಯ ಎಲೆಯು ನೀರಿನಲ್ಲೇ ಇದ್ದರೂ ಅದು ನೀರಿಗೆ ಅಂಟುವುದಿಲ್ಲ. ಹಾಗೆ ಶರಣನು ಸಂಸಾರ ಬಿಟ್ಟು ಸಂನ್ಯಾಸಿಯಾಗಬೇಕಾಗಿಲ್ಲ. ಶರಣನು ಸಂಸಾರದಲ್ಲಿದ್ದುಕೊಂಡೇ ಸಂಸಾರ ಸಂಗವನ್ನು ಹೊದೆಯದೆ ಅಂದರೆ ಅದರೊಳಗೆ ಮುಳುಗಡೆ ಹೊಂದದೆ ನಿರ್ಲಿಪ್ತನಾಗಿರಬೇಕು. ತನ್ನ ಪಂಚೇಂದ್ರಿಯಗಳನ್ನು ತನ್ನ ನಿಯಂತ್ರಣದಲ್ಲಿರಿಸಿಕೊಂಡಿರಬೇಕು.

ಅಂದಿನ ಕಾಲದಲ್ಲಿ ಶರಣರಾದವರು ಇತರರಿಂದ ತಾವು ಭಿನ್ನ ಎಂದು ಗುರುತಿಸಿಕೊಳ್ಳಲು, ತಮ್ಮ ಅಂಗದ ಮೇಲೆ ಲಿಂಗವನ್ನು ಧರಿಸಿಕೊಳ್ಳಬೇಕೆಂಬ ಕಟ್ಟಳೆ ಕಟ್ಟುನಿಟ್ಟಾಗಿದ್ದಂತೆ ತೋರುತ್ತದೆ. ವೈದಿಕರು ತಮ್ಮ ದೇಹದ ಮೇಲೆ ಯಜ್ಞೋಪವೀತವನ್ನು (ಜನಿವಾರ) ಧರಿಸಿಕೊಳ್ಳುವುದರಿಂದ ಇವರು ಪ್ರೇರಿತರಾಗಿ ಆ ರೀತಿಯ ಆಚರಣೆಯನ್ನು ಪಾಲಿಸಿರಬಹುದು. ಹೊಸದಾಗಿ ಶರಣ ಮಾರ್ಗ ಹಿಡಿದವರು ತಮ್ಮ ಬದಲಾದ ಜೀವನ ಕ್ರಮದ ಅಭಿವ್ಯಕ್ತಿಗಾಗಿಯೂ ಅವರು ತಮ್ಮ ಕೊರಳಿನಲ್ಲಿ ಲಿಂಗವನ್ನು ಧರಿಸಿಕೊಳ್ಳುತ್ತಿದ್ದರೆಂದು ತೋರುವುದು.

ಅಲ್ಲಮನ ಪ್ರಕಾರ ದೇಹವೇ ಪೀಠ, ಮನವೆ ಲಿಂಗವಾದರೆ, ಕೊರಳಲ್ಲಿ ನಾಗವತ್ತಿಗೆಯ ಅವಶ್ಯಕತೆ ಇಲ್ಲ. ನಾಗವತ್ತಿಗೆ ಎಂದರೆ ಲಿಂಗವನ್ನಿರಿಸಲು ಬಳಸುವ ಬೆಳ್ಳಿಯ ಅಥವಾ ಯಾವುದೇ ಲೋಹದಿಂದ ಮಾಡಿದ ಆಧಾರ. ಇದರಲ್ಲಿ ಇಷ್ಟಲಿಂಗವನ್ನು ಇಟ್ಟು, ಅದನ್ನು ಮುಚ್ಚಳಿಕೆಯಿಂದ ಮುಚ್ಚಿ, ಅದನ್ನು ತಮ್ಮ ಕೊರಳಿನಲ್ಲಿ ಸದಾ ಇರಿಸಿಕೊಳ್ಳುವುದು ಲಿಂಗಾಯಿತರ ಒಂದು ಆಚಾರ. ಇಂದಿಗೂ ಕೂಡಾ ಲಿಂಗಾಯಿತರು ತಮ್ಮ ಅಂಗದ ಮೇಲೆ ಇದನ್ನು ಧರಿಸಿರುವುದನ್ನು ಗಮನಿಸಬಹುದು.

ಅಲ್ಲಮ ಪ್ರಭು ಶರಣಂಗೆ ಈ ನಾಗವತ್ತಿಗೆಯೇಕೋ ಎಂಬ ಪ್ರಶ್ನೆಯನ್ನು ಎತ್ತುವ ಮೂಲಕ ಅಂಗದ ಮೇಲೆ ಲಿಂಗವನ್ನು ಕಡ್ಡಾಯವಾಗಿ ಧರಿಸಿಕೊಳ್ಳಬೇಕೆಂಬ ಆಚಾರವನ್ನು ನಿರಾಕರಿಸುತ್ತಾನೆ. ಒಬ್ಬ ವ್ಯಕ್ತಿ ಶರಣ ಜೀವನ ನಡೆಸಲು ಈ ರೀತಿಯ ಬಾಹ್ಯವಾದ ಆಚರಣೆಗಳ ಅಗತ್ಯವಿಲ್ಲ ಎಂಬುದು ಅಲ್ಲಮನ ವಿಚಾರವಾಗಿದೆ.

ಅನ್ನವನ್ನಿಕ್ಕಿ ಸನ್ನಿಯ ನುಡಿದು
ಅರವಂಟಿಗೆಯನಿಕ್ಕಿ ಕೆರೆಯ ಕಟ್ಟಿಸಿದರೆ,
ಮರಣದಿಂದ ಮೇಲೆ ಸ್ವರ್ಗ ಉಂಟಲ್ಲದೆ,
ಶಿವನ ನಿಜವು ಸಾಧ್ಯವಾಗದು
ಗುಹೇಶ್ವರನ ಶರಣಂಗೆ ಆವ ಫಲವೂ ಇಲ್ಲ.[೧೨] ೧೧೬ (ವ.ಕ.)

ಪ್ರಾಚೀನ ಕಾಲದಿಂದಲೂ, ಸತ್ಯವನ್ನೆ ನುಡಿದು, ಅರವಂಟಿಕೆಗಳನ್ನು ಇಟ್ಟು ಕೆರೆಯ ಕಟ್ಟಿಸಿದರೆ, ಸ್ವರ್ಗವು ಪ್ರಾಪ್ತವಾಗುವುದೆಂಬ ನಂಬಿಕೆ ಜನಸಾಮಾನ್ಯರಲ್ಲಿತ್ತು. ಇದು ಮರಣದ ನಂತರ ದೊರೆಯುವುದು. ಆದರೆ ಶಿವಾನುಭವ ಎಂಬ ಅನುಭಾವವು ಸಾಧ್ಯವಾಗದು ಎಂದು ಅಲ್ಲಮ ಪ್ರಾಚೀನ ಕಾಲದಿಂದ ಬಂದ ನಂಬಿಕೆಯನ್ನು ಅಲ್ಲಗಳೆಯುತ್ತಾನೆ.

ಗುಹೇಶ್ವರನ ಶರಣನಿಗೆ ಈ ಯಾವ ಫಲವೂ ಇಲ್ಲ. ಏಕೆಂದರೆ ಅವನು ಸ್ವರ್ಗ - ನರಕಗಳ ಬಗ್ಗೆ ಯಾವ ಕಲ್ಪನೆಗಳನ್ನೂ ಕಟ್ಟಿಕೊಳ್ಳಲಾರ. ಅವನಿಗೆ ಇಹಲೋಕದ ಬದುಕಿನಲ್ಲಿಯೇ ಗುಹೇಶ್ವರನ ಸ್ವರೂಪ ಅರಿವಾಗಿರುತ್ತದೆ. ಆದ್ದರಿಂದ ಅವನು ಮರಣದ ನಂತರ ದೊರೆಯಬಹುದೆಂಬ ಕಲ್ಪನಾ ಕಥೆಗಳ ಬಯಕೆಗಳಿಗೆ ಮೊರೆ ಹೋಗುವುದಿಲ್ಲ.

ನಿಜವಾದ ಶರಣನು ಯಾವ ರೀತಿಯ ಫಲಾಪೇಕ್ಷೆಯನ್ನು ಹೊಂದದೆ, ತನ್ನ ತ್ರಿಕರಣಗಳನ್ನು ಶುದ್ಧವಾಗಿಟ್ಟುಕೊಂಡು, ಒಳ್ಳೆಯ ಕಾರ್ಯಗಳನ್ನೇ ಮಾಡುವನು. ಅವನು ಮರಣದ ನಂತರದ ಬಗ್ಗೆ ಅಷ್ಟಾಗಿ ತಲೆ ಕೆಡಿಸಿಕೊಳ್ಳುವುದಿಲ್ಲ.

ಎಷ್ಟೋ ಜನರು ದುರ್ಮಾರ್ಗದಿಂದ ಹಣ ಸಂಪಾದಿಸಿ, ಎಲ್ಲ ರೀತಿಯ ಪಾಪ ಕೃತ್ಯಗಳನ್ನೆಸಗಿ, ಕೊನೆಗೆ ಕೆಲವು ಸಮಾಜ ಕಲ್ಯಾಣ ಕಾರ್ಯಗಳನ್ನು ಮಾಡಿಬಿಟ್ಟರೆ ತಮ್ಮ ಪಾಪ ನಾಶವಾಗುವುದೆಂದು ನಂಬುವರು. ಅಂತಹ ಜನರನ್ನು ಇಂದಿಗೂ ನೋಡಬಹುದು. ಆದ್ದರಿಂದ ಅಲ್ಲಮಪ್ರಭು ಸ್ವಾರ್ಥಲಾಲಸೆಯಿಂದ ಮಾಡುವ ಇಂಥ ಆಚರಣೆಗಳನ್ನು ನಿರಾಕರಿಸುವನು.

ಸುತ್ತಿ ಸುತ್ತಿ ಬಂದಡಿಲ್ಲ, ಲಕ್ಷಗಂಗೆಯ ಮಿಂದಡಿಲ್ಲ
ತುಟ್ಟ ತುದಿಯ ಮೇರುಗಿರಿಯ ಮೆಟ್ಟಿ ಕೂಗಿದಡಿಲ್ಲ.
ನಿತ್ಯನೇಮದಿಂದ ತನುವ ಮುಟ್ಟಿಕೊಂಡಡಿಲ್ಲ
ನಿಚ್ಚಕ್ಕೆ ನಿಚ್ಚನೆನೆವ ಮನವ
ಅಂದಂದಿಗೆ ಅತ್ತಲಿತ್ತ ಹರಿವ ಮನವ, ಚಿತ್ತದಲ್ಲಿ ನಿಲ್ಲಿಸಬಲ್ಲಡೆ,
ಬಚ್ಚಬರಿಯ ಬೆಳಗು ಗುಹೇಶ್ವರ ಲಿಂಗವು.[೧೩] ೩೫೧

ಜನಸಾಮಾನ್ಯರು ದೇವಾಲಯಗಳನ್ನು ಹುಡುಕಿಕೊಂಡು, ಊರೂರು ಸುತ್ತುವರು. ವಿವಿಧ ಪವಿತ್ರ ನದಿಗಳಲ್ಲಿ ತೀರ್ಥಸ್ನಾನ ಮಾಡುವರು. ಗೌರಿಶಂಕರ ಶಿಖರವನ್ನು ಹತ್ತಿಬರುವರು. ನಿತ್ಯನೇಮದಿಂದ ಶರೀರದ ಮೇಲೆ ಗಂಧಾಕ್ಷತೆ, ವಿಭೂತಿ, ಕುಂಕುಮ ಧರಿಸಿಕೊಂಡು, ದೇವರನ್ನು ಆರಾಧಿಸುವರು. ಇಷ್ಟೆಲ್ಲ ಮಾಡಿದರೂ ಅವರಿಗೆ ಆ ಪರವಸ್ತುವಿನ ಅರಿವು ದೊರೆಯುವುದೇ ಇಲ್ಲ. ಅಂದ ಮೇಲೆ ಇಂತಹ ಆಚರಣೆಗಳಿಂದ ಏನು ಲಾಭ? ವ್ಯರ್ಥವಲ್ಲವೆ?

ಸದಾ ಸಂಚರಿಸುವ ಚಂಚಲ ಮನಸ್ಸನ್ನು ನಿಯಂತ್ರಿಸಿ ಅದನ್ನು ಹೃದಯದಲ್ಲಿ, ಬುದ್ಧಿಯಲ್ಲಿ ನಿಲಿಸಿ, ಸದಾ ಗುಹೇಶ್ವರನ ನೆನೆವಂತೆ ಮಾಡಿದರೆ, ಗುಹೇಶ್ವರ ಲಿಂಗದ ಅರಿವು ಉಂಟಾಗುವುದು. ಅದು ಯಾವ ಆಕಾರವಿಲ್ಲದ, ಸ್ವರೂಪವಿಲ್ಲದ, ನಿರಾಕಾರವಾದ, ಬರಿಯ ಬೆಳಗು ಎಂದು ಅಲ್ಲಮ ಹೇಳುತ್ತಿದ್ದಾನೆ.

ಬೆಳಕು ಜ್ಞಾನದ ಸಂಕೇತ. ಅಂಧಕಾರವನ್ನು ತೊಲಗಿಸುವ, ಕತ್ತಲೆಯಿಂದ, ಪಾರು ಮಾಡುವ ಚೇತನ, ಇಂತಹ ಚೈತನ್ಯ ಸ್ವರೂಪ 'ಬೆಳಗು' ನಮ್ಮ ಮನವನ್ನು, ಬುದ್ಧಿಯನ್ನು ಪ್ರಕಾಶಿಸುತ್ತದೆ. ಅಲ್ಲಮ ಗುಹೇಶ್ವರ ಲಿಂಗವನ್ನು 'ಬೆಳಗು' ಎನ್ನುತ್ತಾನೆ.

> "ಬೆಳಗು - ತೇಜಸ್ಸು, ಕಾಂತಿ, ಪ್ರಭೆ, ಪ್ರಕಾಶ, ಲಿಂಗದೊಡನೆ ಬೆರೆದಂಥ ಒಂದು ಬಗೆಯ ಶಿವಾನುಭವ ಸ್ಥಿತಿ, ಬೆಳಗಿನೊಳಗಣ ಮಹಾಬೆಳಗಿನ ಬೆಳಗು ಕೂಡಲು ಸಂಗಯ್ಯ ಎಂದು ಬಸವಣ್ಣ ಹೇಳುವನು."[೧೪]

ಇದನ್ನು ಅರಿಯದ ಜನರು ವಿವಿಧ ರೀತಿಯ ಕರ್ಮ ಆಚರಣೆಗಳನ್ನು ನಡೆಸುವರು. ಆ ಎಲ್ಲ ಬಗೆಯ ಆಚರಣೆಗಳು ಅರ್ಥಹೀನ. ಅವುಗಳಿಂದ ಗುಹೇಶ್ವರನ ಅರಿವು ಅಸಾಧ್ಯ ಎಂಬುದು ಅಲ್ಲಮನ ಚಿಂತನೆಯಾಗಿದೆ. ಹೀಗೆ ಅಲ್ಲಮ ಪ್ರಭು ವಿವಿಧ ಮತಾಚರಣೆಗಳನ್ನು ನಿರಾಕರಿಸಿದ್ದಾನೆ.

ಹೀಗೆ ಅಲ್ಲಮಪ್ರಭು ಅಂದಿನ ಸಮಾಜದಲ್ಲಿ ವಿವಿಧ ಜಾತಿ, ಮತ, ಪಂಥಗಳ ಜನರು ಹೊಂದಿದ್ದ ಮೂಢನಂಬಿಕೆಗಳನ್ನು, ಅಜ್ಞಾನಾಂಧಕಾರಗಳನ್ನು ನಿವಾರಿಸಲು ಪ್ರಯತ್ನಿಸಿದ್ದಾನೆ. ಮತದ ಹೆಸರಲ್ಲಿ, ಜನರು ನಡೆಸುತ್ತಿದ್ದ ಅರ್ಥವಿಲ್ಲದ ಆಚರಣೆಗಳನ್ನು ನಿರಾಕರಣೆ ಮಾಡುತ್ತಾನೆ. ಅಲ್ಲಮ ಯಾವ ಮತಾಚರಣೆಯನ್ನು ಪುರಸ್ಕರಿಸುವುದಿಲ್ಲ. ಎಲ್ಲವನ್ನೂ ವಿಮರ್ಶೆಗೆ ಒಳಗು ಮಾಡುವ ವೈಚಾರಿಕ ಅರಿವು ಅಲ್ಲಮನ ವಚನಗಳಲ್ಲಿ ವ್ಯಕ್ತವಾಗಿದೆ.

ಮಾನವನು ಇಂದ್ರಿಯಗಳ ಚಾಪಲ್ಯಕ್ಕೆ ಬಲಿಯಾಗದೆ, ಅವುಗಳನ್ನು ತನ್ನ ಹತೋಟಿಲ್ಲಿಟ್ಟುಕೊಂಡು, ತ್ರಿಕರಣ ಶುದ್ಧವಾದ ಜೀವನ ನಡೆಸುವ ಶರಣನು, ತಾನು ಇದ್ದಲ್ಲಿಯೇ ಗುಹೇಶ್ವರನ ಅರಿವನ್ನು ಹಂತಹಂತವಾಗಿ ಪಡೆದುಕೊಳ್ಳಬಹುದು ಎಂಬ ಅನುಭಾವಿಕ ಸತ್ಯ ಅಲ್ಲಮನ ವಚನಗಳಲ್ಲಿ ವ್ಯಕ್ತವಾಗಿದೆ.

ಹೀಗಾಗಿ ಅಲ್ಲಮ ಪ್ರಭು ಮತ, ಧರ್ಮ, ಸಂಬಂಧವಾಗಿದ್ದ ಎಲ್ಲ ಜಾತಿಯ ಜನರ ಜೀವನದಲ್ಲಿ ಹಾಸುಹೊಕ್ಕಾಗಿದ್ದ, ಸಾಂಪ್ರದಾಯಿಕ ಆಚರಣೆಗಳನ್ನು ನಿರಾಕರಿಸುವ ಮೂಲಕ ಹೊಸ ರೀತಿಯ ಚಿಂತನಾಕ್ರಮವನ್ನು ಗಟ್ಟಿಗೊಳಿಸಿದ್ದಾನೆ.

ಅಡಿಟಿಪ್ಪಣಿಗಳು

೧. ಭಾರತೀಯ ಸಮಾಜ, ಚ.ನ. ಶಂಕರ್‌ರಾವ್, ಪು. ೧೮೩.
೨. ಭಾರತೀಯ ಸಮಾಜ, ಚ.ನ. ಶಂಕರ್‌ರಾವ್, ಪು. ೩೯೮.
೩. ಅಲ್ಲಮಪ್ರಭು ದೇವರ ವಚನ ಸಂಪುಟ, ಸಂ. : ಡಾ. ಬಿ.ವ್ಹಿ. ಮಲ್ಲಾಪುರ, ಪು. XX (ಪ್ರಸ್ತಾವನೆಯ ಭಾಗದಲ್ಲಿ)
೪. ಪ್ರಭುದೇವರ ಷಟ್ಸ್ಥಲದ ವಚನಗಳು, ಸಂ. : ಡಾ. ಎಲ್. ಬಸವರಾಜು, ಪ್ರಾಣಲಿಂಗ ಸ್ಥಲ, ಪು. ೩೩೫, ವ.ಸಂ. ೨೬೪.
೫. ವಚನ ಪರಿಭಾಷಾ ಕೋಶ ; ಡಾ. ಎಸ್. ವಿದ್ಯಾಶಂಕರ, ಪು. ೧೮೯.
೬. ಪ್ರಭುದೇವರ ಷಟ್ಸ್ಥಲದ ವಚನಗಳು, ಸಂ. : ಡಾ. ಎಲ್. ಬಸವರಾಜು, ಶರಣ ಸ್ಥಲ, ಪು.ಸಂ. ೪೫೧, ವ.ಸಂ. ೩೭೯.
೭. ಪ್ರಭುದೇವರ ಷಟ್ಸ್ಥಲದ ವಚನಗಳು, ಸಂ. : ಡಾ. ಎಲ್. ಬಸವರಾಜು, ಶರಣ ಸ್ಥಲ, ಪು. ೪೫೦, ವ.ಸಂ. ೩೮೮.
೮. ಭಾರತೀಯ ಸಮಾಜ (ಭಾರತದ ವಿಶಿಷ್ಟ ಸಾಂಸ್ಕೃತಿಕ ಪರಂಪರೆ), ಲೇ. : ಚ.ನ. ಶಂಕರ್‌ರಾವ್, ಪು. ೨೬.
೯. ವಚನ ಪರಿಭಾಷಾ ಕೋಶ, ಸಂ. : ಡಾ. ಎಸ್. ವಿದ್ಯಾಶಂಕರ, ಪು. ೮೧.
೧೦. ವಚನ ಪರಿಭಾಷಾ ಕೋಶ, ಸಂ. : ಡಾ. ಎಸ್. ವಿದ್ಯಾಶಂಕರ, ಪು. ೧೦೫.
೧೧. ಪ್ರಭುದೇವರ ಷಟ್ಸ್ಥಲದ ವಚನಗಳು, ಸಂ. : ಡಾ. ಎಲ್. ಬಸವರಾಜು, ಪ್ರಾಣಲಿಂಗ ಸ್ಥಲ, ಪು. ೨೯೪, ವ.ಸಂ. ೨೩೨.
೧೨. ವಚನ ಕಮ್ಮಟ, ಸಂ. : ಕೆ. ಮರುಳ ಸಿದ್ದಪ್ಪ, ಕಿ.ರಂ. ನಾಗರಾಜ, ಪು. ೨೬, ವ.ಸಂ. ೧೧೬.
೧೩. ಪ್ರಭುದೇವರ ಷಟ್ಸ್ಥಲದ ವಚನಗಳು, ಡಾ. ಎಲ್. ಬಸವರಾಜು, ಶರಣ ಸ್ಥಲ, ಪು. ೪೧೫, ವ.ಸಂ. ೩೫೧.
೧೪. ವಚನ ಪರಿಭಾಷಾ ಕೋಶ, ಡಾ|| ಎಸ್. ವಿದ್ಯಾಶಂಕರ, ಪು. ೧೪೫.

* * *

ಉಪಸಂಹಾರ

ಉಪಸಂಹಾರ

ಆಚಾರಗಳ ಬಗ್ಗೆ ಅಲ್ಲಮಪ್ರಭುವಿನ ವಚನಗಳಲ್ಲಿ ಕಂಡುಬರುವ ನಿರಾಕರಣೆಯ ನಿಲುವನ್ನು ಕುರಿತು ಈ ನಿಬಂಧದಲ್ಲಿ ಅಧ್ಯಯನ ಮಾಡಲಾಗಿದೆ. ಜಾತಿ ವ್ಯವಸ್ಥೆಯೇ ಆಧಾರವಾಗಿರುವ ಭಾರತೀಯ ಸಮಾಜದಲ್ಲಿ ಜನರು ತಮ್ಮ ಜೀವನದಲ್ಲಿ ಮತಾಚರಣೆಯ ನೆಪದಲ್ಲಿ ಹಲವು ರೀತಿಯ ಮೂಢನಂಬಿಕೆಗಳನ್ನು, ಆಚಾರಗಳನ್ನು, ಕಟ್ಟುಪಾಡುಗಳನ್ನು ಹೊಂದಿದ್ದು ಅವನ್ನು ಚಾಚೂತಪ್ಪದೆ ಪಾಲಿಸಿಕೊಂಡು ಬರುತ್ತಿದ್ದರು. ವೈದಿಕರು, ಶೈವರು, ಅವೈದಿಕರು ಎಲ್ಲರೂ ದೇವರು ಮತ್ತು ಧರ್ಮದ ಹೆಸರಿನಲ್ಲಿ ಹಲವು ಮೂರ್ತಿಗಳನ್ನು ಪ್ರತಿಷ್ಠಾಪಿಸಿ, ವಿವಿಧ ಹೆಸರುಗಳನ್ನಿಟ್ಟು ಪೂಜೆ ಪುರಸ್ಕಾರಗಳನ್ನು, ಹೋಮ, ಹವನಗಳನ್ನು ನಡೆಸುತ್ತಿದ್ದರು. ಆತ್ಮ - ಪರಮಾತ್ಮ ಸಂಬಂಧ, ಕರ್ಮ ಸಿದ್ಧಾಂತ, ಪುನರ್ಜನ್ಮದಲ್ಲಿ ನಂಬಿಕೆ ಭಾರತೀಯ ಮತಾಚರಣೆಯ ಮೂಲ ನಂಬಿಕೆಯಾಗಿತ್ತು. ಪ್ರಸ್ತುತ ಜೀವನದ ಆಗು - ಹೋಗುಗಳಿಗೆ ಪೂರ್ವಜನ್ಮದ ಕರ್ಮವೇ ಕಾರಣವೆಂದು ಬಲವಾಗಿ ನಂಬುತ್ತಿದ್ದರು. ಈ ಜನ್ಮದಲ್ಲಿ ಆಚರಣೆಗಳನ್ನು ಕ್ರಮಬದ್ಧವಾಗಿ ನಡೆಸದಿದ್ದರೆ ಮುಂದಿನ ಜನ್ಮದಲ್ಲಿ ಹಲವು ರೀತಿಯ ಕಷ್ಟಗಳನ್ನು ಅನುಭವಿಸಬೇಕಾಗುವುದೆಂದು ನಂಬಿ, ವ್ರತಾಚರಣೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದರು. ಸಾಲ ಮಾಡಿಯಾದರೂ ಧರ್ಮಾಚರಣೆಯ ಕಾರ್ಯ ಮಾಡಬೇಕೆಂಬ ನಂಬಿಕೆ ಸಮಾಜದಲ್ಲಿ ವ್ಯಾಪಕವಾಗಿ ನೆಲೆಸಿತ್ತು. ಸಾಮಾಜಿಕ ನಿಯಂತ್ರಣದ ಸಾಧನವಾಗಿಯೂ ಈ ಆಚರಣೆಗಳು ಸಮಾಜದಲ್ಲಿ ಜೀವಂತವಾಗಿ ನೆಲೆಸಿದ್ದವು.

ಜಾತಿ ವ್ಯವಸ್ಥೆಯಲ್ಲಿ ಶ್ರೇಷ್ಠರೆಂದು ಕರೆಸಿಕೊಂಡಿದ್ದ ವೈದಿಕರು ಹಲವು ವ್ರತಾಚರಣೆಗಳನ್ನು ಯಜ್ಞ - ಯಾಗಗಳನ್ನು, ಪೂಜೆಯನ್ನು, ಹೋಮ ಹವನಗಳನ್ನು, ಜನ - ತಪ, ಧ್ಯಾನಗಳನ್ನು ಆಚರಿಸುತ್ತಿದ್ದರು. ಇವುಗಳನ್ನು ಯಾಂತ್ರಿಕವಾಗಿ, ಶುಷ್ಕವಾಗಿ, ನಡೆಸಿಕೊಂಡು ಬರುತ್ತಿದ್ದರು. ಇಂಥ ಆಚರಣೆಯು ಇವರಿಗೆ ಸಾಮಾಜಿಕ ಪ್ರತಿಷ್ಠೆಯ ಮಾತಾಗಿತ್ತು. ತಮ್ಮ ಶ್ರೇಷ್ಠತೆಯನ್ನು ಮರೆಯಲೆಂದೇ ಇದನ್ನು ಆಚರಿಸುತ್ತಿದ್ದರು. ಇದಕ್ಕಾಗಿ ಪುರೋಹಿತ ವರ್ಗ ಸ್ಥಾಪಿಸಲ್ಪಟ್ಟು, ಆ ವರ್ಗದ ಕಾಯಕವೇ ವ್ರತಾಚರಣೆಗಳನ್ನು ನಡೆಸುವುದಾಯಿತು. ಇದರಿಂದ ಕೆಲವರಿಗೆ ಜೀವನ ಮಾರ್ಗವೂ ಆಯಿತು. ಪ್ರತಿಷ್ಠೆಯ ಮಾತು ಆಯಿತು. ದುರಾಸೆಯವರಿಗೆ ಸುಲಿಗೆಯ ಮಾರ್ಗವೂ ಆಗಿ ಪರಿಣಮಿಸಿತ್ತು. ವೇಷಧಾರಿಗಳು, ಮೋಸಗಾರರು ವಂಚಕರು, ಭ್ರಷ್ಟರು ರೂಪುಗೊಂಡು ಸಮಾಜವನ್ನು ಕೆಲವು ವರ್ಗವನ್ನು ಶೋಷಣೆಗೈಯ್ಯುವ ಮಾರ್ಗವಾಗಿ ಪರಿಣಮಿಸಿತ್ತು. ಇಂತಹ ಆಚರಣೆಗಳನ್ನು ಸೂಕ್ಷ್ಮವಾಗಿ ಗಮನಿಸಿದ ಅಲ್ಲಮಪ್ರಭು, ಅವುಗಳ ಹಿಂದಿರುವ ಅನಾಚಾರವನ್ನು ಟೀಕಿಸಿ ಅಂತಹ ಆಚಾರಗಳನ್ನು ನಿರಾಕರಿಸುತ್ತಾನೆ.

ಸಂಸ್ಕೃತಿ ಚಿಂತಕರು ನಮ್ಮ ದೇಶದ ಆಚಾರ - ವಿಚಾರಗಳು ಸಾಂಸ್ಕೃತಿಕ ವೈವಿಧ್ಯತೆಗೆ ಆಧಾರವೆಂದು ಹೆಮ್ಮೆಪಡುವರು. ಈ ವೈವಿಧ್ಯತೆ ಮೇಲ್ನೋಟಕ್ಕೆ ಸುಂದರ. ಆಕರ್ಷಕ ಹಾಗೂ ಶ್ರೀಮಂತವೆಂದೆನಿಸುವುದು. ಆದರೆ ಅದರ ಒಳಹೊಕ್ಕು ನೋಡಿದಾಗ ಅದರಿಂದಾಗುವ ಮಾನವನ ಸ್ವಾತಂತ್ರ್ಯಹರಣ, ಆತ್ಮಾಭಿಮಾನದ ಧಕ್ಕೆ, ಆತ್ಮದ ಘನತೆಗೆ ಕುಂದನ್ನು ಉಂಟುಮಾಡುವ ಆಘಾತಕಾರಿಯಾದ ಅವಹೇಳನಕಾರಿಯಾದ ಅಂಶಗಳನ್ನು ಕಡೆಗಣಿಸಲಾಗದು. ಇಲ್ಲಿನ ಮತ, ಧರ್ಮ, ಸಂಸ್ಕೃತಿಯ ಆಚರಣೆಗಳು ಜನರಲ್ಲಿ ಉಂಟುಮಾಡಿರುವ ಸಾಮಾಜಿಕ ಅಸಮಾನತೆ, ಸಂಕುಚಿತ ಮನೋಭಾವ, ಕೀಳರಿಮೆ, ಅದರಿಂದಾಗಿ ಶೋಷಣೆಯನ್ನು ಒಪ್ಪಿಕೊಳ್ಳುವ ಮನೋದೌರ್ಬಲ್ಯ, ದಾಸ್ಯಬುದ್ಧಿ ಇತ್ಯಾದಿಗಳು ಮಾನವನ ಆತ್ಮದ ಘನತೆಗೆ ಶೋಭಾಯಮಾನವಾದುವಲ್ಲ. ಬದಲಾಗಿ, ಆತ್ಮೋನ್ನತಿಯ ಅವಘಡಕ್ಕೆ ದಾದಿ ಮಾಡಿಕೊಡುವ ಅಂಶಗಳಾಗಿವೆ. ಇಲ್ಲಿ ದ್ವೈತ, ಅದ್ವೈತ, ಶಕ್ತಿ ವಿಶಿಷ್ಟಾದ್ವೈತ ತತ್ತ್ವಗಳು, ಚಿಂತನೆಗಳು ಪ್ರತಿಪಾದಿಸಲ್ಪಟ್ಟಿದ್ದರೂ ಜನರ ಚಿತ್ತಶಾಂತಿಗೆ ಮಾತ್ರ ಧಕ್ಕೆ ಇಲ್ಲದಿಲ್ಲ. ಅನಾದಿಕಾಲದಿಂದಲೂ ಇಲ್ಲಿನ ವರ್ಣ ವ್ಯವಸ್ಥೆ, ಜಾತಿ ವ್ಯವಸ್ಥೆ, ನಿರ್ಮಿಸಿರುವ ಗೋಜು, ಗೊಂದಲಗಳ ಕಪಿಮುಷ್ಟಿಗೆ ಸಿಲುಕಿದ ಬಡಜನರು, ದೀನರು, ದಲಿತರು, ಮಹಿಳೆಯರು, ಹಿಂದುಳಿದವರು ಹಲವು ರೀತಿಯ ಕಷ್ಟಕಾರ್ಪಣ್ಯಗಳಿಗೆ ಬಲಿಯಾಗಿ ಸದಾ ಸಂಕಷ್ಟದಲ್ಲಿಯೇ ತಮ್ಮ ಜೀವ ಸವೆಸುವಂತಾಗಿದೆ.

ಮೋಸದ ಹಿರಿಯರು, ವೇಷದ ಹಿರಿಯರು, ಭಾಷೆಯ ಹಿರಿಯರು ಹುಟ್ಟುಹಾಕಿದ ಆಚಾರಗಳನ್ನು ಸತ್ಯವೆಂದು ನಂಬಿದ ಜನ ತಮ್ಮತನವನ್ನು ಕಳೆದುಕೊಂಡು ಆತ್ಮಾಭಿಮಾನ ಶೂನ್ಯರಾಗಿ, ಒಣ ಆಚಾರಗಳ ಅನುಷ್ಠಾನಕ್ಕಾಗಿಯೇ ತಮ್ಮ ಸಕಲ ಶ್ರಮ, ಸಮಯ, ಸತ್ವವನ್ನು ಕಳೆದುಕೊಳ್ಳುವ ಮುಗ್ಧರೂ, ಮೂಢರೂ, ಅಂಧ ಶ್ರದ್ಧರೂ ಆಗಿದ್ದ ಅವಿವೇಕಿಗಳ ಬಾಳನ್ನು ಬೆಳಕಾಗಿಸಲು ಬೇಕಾದ ನಿತ್ಯ ನೂತನವಾದ ದಿವ್ಯದೃಷ್ಟಿಯ ಪ್ರಭೆಯನ್ನು ಚೆಲ್ಲಿದ ಪ್ರಭುದೇವ ಎಲ್ಲ ಬಗೆಯ ಆಚಾರಗಳನ್ನು ನಿರಾಕರಿಸುತ್ತಾನೆ. ನಿತ್ಯನೂ, ನಿರಂತರನೂ, ನಿರವಯನೂ, ನಿರಾಳನೂ, ಚೈತನ್ಯ ಸ್ವರೂಪನೂ ಆಗಿರುವ ಗುಹೇಶ್ವರನನ್ನು ಅರಿಯಲು ಯಾವ ಬಗೆಯ ಆಚಾರಗಳ ಅಗತ್ಯವೂ ಇಲ್ಲ. ಅನಿವಾರ್ಯವೂ ಅಲ್ಲ ಎಂಬುದನ್ನು ತನ್ನ ವಚನಗಳ ಮೂಲಕ ಸ್ಪಷ್ಟಪಡಿಸುತ್ತಾನೆ. ದೇವಾಲಯದ ನಿರ್ಮಾಣವನ್ನೇ ಪ್ರಶ್ನಿಸುತ್ತಾನೆ. ನೀನು ಕಲ್ಲಾದರೆ, ನಾನೇನಪ್ಪೆನು? ಎಂದು ಗುಹೇಶ್ವರನನ್ನೇ ಪ್ರಶ್ನಿಸುತ್ತಾನೆ.

ವೈದಿಕರು ನಂಬಿದ್ದ ವೇದವನ್ನು ಓದಿನ ಮಾತು ಎಂದೂ, ಪುರಾಣವನ್ನು ಪುಂಡರ ಗೋಷ್ಠಿ ಎಂತಲೂ ತಳ್ಳಿ ಹಾಕುತ್ತಾನೆ. ಕಲ್ಲು ಮನೆಯ ಮಾಡಿ ಕಲ್ಲುದೇವರ ಪ್ರತಿಷ್ಠಾಪಿಸುವವರಿಗೆ ನಾಯಕ ನರಕ ತಪ್ಪದು ಎನ್ನುತ್ತಾನೆ. ಯಜ್ಞಯಾಗಾದಿಗಳನ್ನು ಅಲ್ಲಗಳೆಯುತ್ತಾನೆ. ಇವೆಲ್ಲ ಆಚರಣೆಗಳು ಕೇವಲ ಒಣ ಪ್ರತಿಷ್ಠೆಯ, ಆಡಂಬರದ ಪ್ರತೀಕವೇ ಹೊರತು ಗುಹೇಶ್ವರನನ್ನು ಅರಿಯಲು ಅಲ್ಲ ಎಂದು ನಿರ್ಭಯವಾಗಿ ಸಾರುತ್ತಾನೆ.

ಅಲ್ಲಮ ಅವೈದಿಕರು ನಡೆಸುತ್ತಿದ್ದ ಪ್ರಾಣ ಬಲಿ, ವಿವಿಧ ರೀತಿಯ ಮೂರ್ತಿ ಪೂಜೆಗಳನ್ನು ಪ್ರಶ್ನಿಸುತ್ತಾನೆ. ದೇವರಿಗಾಗಿ ಊರೂರು ಅಲೆಯುವವರನ್ನೂ, ಮಠ ಮಂದಿರಗಳನ್ನೂ ಸುತ್ತುವವರನ್ನು ಜರೆಯುತ್ತಾನೆ. ವಿವಿಧ ಕಾರ್ಯ ವಿಧಾನಗಳನ್ನು ಮಾಡಿ ಮೋಕ್ಷಪಡೆಯಬಯಸುವವರನ್ನು ಲೇವಡಿ ಮಾಡುತ್ತಾನೆ. ಅಲ್ಲಮ ಶೈವರು ನಡೆಸುತ್ತಿದ್ದ ಕರಲಿಂಗ ಪೂಜೆ, ಲಿಂಗ ಪ್ರತಿಷ್ಠಾಪನೆ, ಜಂಗಮ ಸೇವೆಗಳನ್ನು ಪ್ರಶ್ನಿಸುತ್ತಾನೆ. ಅಂಗದ ಮೇಲೆ ಲಿಂಗವನ್ನು ಧರಿಸುವ ಆಚಾರವನ್ನು ನಿರಾಕರಿಸುತ್ತಾನೆ. ಜಗವೇ ಒಂದು ಲಿಂಗವಾದ ಮೇಲೆ ವಿವಿಧ ಲಿಂಗಗಳ ಅಗತ್ಯವೇಕೆ? ಎಂಬ ವಿಚಾರವನ್ನು ಎತ್ತುತ್ತಾನೆ. ಕಲ್ಲು ಕುಟಿಗನು ಮಾಡಿದ ಲಿಂಗದ ಆಕಾರವನ್ನು, ಘನತ್ವವನ್ನು

ನಿರಾಕರಿಸುತ್ತಾನೆ. ಬಚ್ಚಬರಿಯ ಬೆಳಗು ಗುಹೇಶ್ವರ ಎನ್ನುತ್ತಾನೆ. ಹೀಗೆ ಅಲ್ಲಮಪ್ರಭು ಸಮಾಜದಲ್ಲಿ ಆಳವಾಗಿ ಬೇರು ಬಿಟ್ಟಿದ್ದ ಎಲ್ಲ ಬಗೆಯ ಸಾಮಾಜಿಕ, ಧಾರ್ಮಿಕ, ಮತಾಚಾರಗಳನ್ನು ಅಲ್ಲಗಳೆದು ಅವುಗಳ ಅಗತ್ಯತೆಯನ್ನು ಪ್ರಶ್ನಿಸುತ್ತಾನೆ. ಆ ಮೂಲಕ ಜನರಲ್ಲಿ ಒಂದು ಹೊಸ ಬಗೆಯ ಆಲೋಚನಾ ಕ್ರಮವನ್ನು ಬಿತ್ತಿ ಬೆಳೆಸುವ ಪ್ರಯತ್ನ ಮಾಡುತ್ತಾನೆ.

ಅಲ್ಲಮ ಯಾವ ಜಾತಿಯ ಆಚಾರಗಳನ್ನು ಒಪ್ಪುವುದಿಲ್ಲ. ಸ್ವೀಕರಿಸುವುದಿಲ್ಲ. ಮಾನ್ಯ ಮಾಡುವುದಿಲ್ಲ. ತಪ್ಪು ಎಂದು ಕಂಡು ಬರುವ ಪ್ರತಿಯೊಂದು ವಿಚಾರವನ್ನು ತಿರಸ್ಕರಿಸುತ್ತಾನೆ. ಹೀಗೆ ಅಲ್ಲಮ ಇಂದಿನ ಅತ್ಯಾಧುನಿಕವಾದ ಜಾತ್ಯತೀತವಾದ, ಧರ್ಮನಿರಪೇಕ್ಷವಾದ ಜಾಗತಿಕವಾದ ಸರ್ವಮಾನ್ಯವಾದ ಆತ್ಮೋನ್ನತಿಯ ತತ್ತ್ವವನ್ನು ಪ್ರತಿಪಾದಿಸುತ್ತಾನೆ.

ಆತ್ಮವಿಕಾಸದ ಜಾಗೃತಿಯನ್ನು ಪ್ರತಿಯೊಬ್ಬರೂ ಬೆಳೆಸಿಕೊಳ್ಳಬಹುದು ಹಾಗೂ ಆತ್ಮೋನ್ನತಿ ಸಾಧಿಸಬಹುದು. ಆತ್ಮನೂ ಜಗತ್ತಿನ ಒಂದು ಭಾಗವೇ ಪಂಚಭೂತಗಳಿಂದಾದ ಜಗತ್ತು; ಚೈತನ್ಯ ಸ್ವರೂಪಿಯಾದುದು. ಆ ಚೈತನ್ಯವೇ ಮಾನವನಲ್ಲೂ ನೆಲೆಸಿರುವಂತದ್ದು. ಜಗತ್ತಿನ ಒಂದು ಭಾಗವೇ ಆದ ಮಾನವ ತಾನೇ ಗುಹೇಶ್ವರನಾಗಬಹುದು. ಇದಕ್ಕಾಗಿ ಅರಿವಿನ ಮಾರ್ಗ ಅನುಸರಿಸಬೇಕು. ಅದು ಬಿಟ್ಟು ತಾನೇ ಹುಟ್ಟು ಹಾಕಿದ ಅಥವಾ ಯಾರೋ ಹೇಳಿದ ಆಚಾರ - ವಿಚಾರಗಳನ್ನು ಪಾಲಿಸಿಕೊಂಡು ಅಷ್ಟರಲ್ಲೇ ಮನವು ಸುತ್ತುವಂತಾದರೆ, ಅದರಾಚೆ ಬರಲು ಮಾನವನಿಗೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಮಾನವ ಯಾವ ಬಗೆಯ ಸಂಕುಚಿತ ಆಚಾರಗಳಿಂದ ಬಂಧಿಸಲ್ಪಟ್ಟಿರಬಾರದು. ಸ್ವಚ್ಛಂದವಾಗಿ ಹರಿವ ನೀರಿನಂತೆ ನಿರಾಳನಾಗಿರಬೇಕು. ಬೆಳಕಿನಂತೆ ನಿರ್ಮಲವಾಗಿರಬೇಕು ಎನ್ನುವ ಅಲ್ಲಮಪ್ರಭು ಎಲ್ಲ ಬಗೆಯ ಆಚಾರಗಳನ್ನು ನಿರಾಕರಿಸುತ್ತಾನೆ. ಆಚಾರಗಳಿಂದ ಮಾನವನ ಮನಸ್ಸು ಅಲ್ಲೋಲ ಕಲ್ಲೋಲವಾಗುತ್ತದೆ. ಹಲವು ತುಮುಲಗಳಿಂದ ತುಂಬಿ ಹೋಗಿ, ಮನಶಾಂತಿ ಕಳೆದುಹೋಗುತ್ತದೆ. ಆದ್ದರಿಂದ ವ್ಯಕ್ತಿಯ ವೈಯುಕ್ತಿಕ ಜೀವನ ದುಃಖಮಯವಾಗುವುದಲ್ಲದೆ; ಅವನ ಸುತ್ತಲಿನ ಸಮಾಜವೂ ಕಲುಷಿತವಾಗುವುದು. ತನ್ನನ್ನು ತಾನು ಅರಿದವಂಗೆ ಯಾವ ಆಚಾರವೂ ಬೇಕಾಗಿಲ್ಲ ಎಂದು ಅಲ್ಲಮ ಹೇಳುತ್ತಾನೆ.

ಹೀಗೆ ಅಲ್ಲಮಪ್ರಭು ಒಬ್ಬ ವಿಚಾರವಂತ, ದಾರ್ಶನಿಕ, ಆಧ್ಯಾತ್ಮಿಕ ಅನುಭಾವಿ, ತನ್ನ ವಿಪುಲವಾದ ಚಿಂತನ ಸಾಮರ್ಥ್ಯದಿಂದ ೧೨ನೇ ಶತಮಾನದ ಬದುಕಿನ ದುರ್ಬಲತೆಗಳನ್ನು ಹೋಗಲಾಡಿಸಲು ತನ್ನ ವಚನಗಳ ಮೂಲಕ ಜನರಲ್ಲಿ ಹೊಸ ರೀತಿಯ ಆಲೋಚನಾ ತರಂಗಗಳನ್ನು ಉಂಟು ಮಾಡುತ್ತಾನೆ. ಅವು ಇಂದಿಗೂ ಹೆಚ್ಚು ಪ್ರಸ್ತುತವೆನಿಸಿವೆ. ಇಂದಿನ ಜಾತ್ಯತೀತ ಮೌಲ್ಯ ಪ್ರತಿಪಾದನೆಗೆ ವೈಜ್ಞಾನಿಕವಾದ ಜೀವನ ವಿಧಾನಕ್ಕೆ ಅಲ್ಲಮನ ಚಿಂತನೆ ಹೆಚ್ಚು ಸಮರ್ಪಕವಾಗಿದೆ.

* * *

ಗ್ರಂಥ ಋಣ

೧. ಅಲ್ಲಮಪ್ರಭುದೇವರ ವಚನ ಸಂಪುಟ, ಸಂ. : ಡಾ|| ಬಿ.ವಿ. ಮಲ್ಲಾಪುರ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

೨. ಅಲ್ಲಮನ ವಚನ ಚಂದ್ರಿಕೆ, ಸಂ. : ಎಲ್. ಬಸವರಾಜು, ಲೋಹಿಯಾ ಪ್ರಕಾಶನ, ಬಳ್ಳಾರಿ.

೩. ಅಲ್ಲಮ ಪ್ರಭುದೇವರ ವಚನ - ನಿರ್ವಚನ, ಶ್ರೀ ಸಿದ್ದೇಶ್ವರ ಸ್ವಾಮಿಗಳು, ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು.

೪. ಅಲ್ಲಮ ಪ್ರಭು ಮತ್ತು ಶೈವ ಪ್ರತಿಭೆ, ಡಿ.ಆರ್. ನಾಗರಾಜ್, ಅಕ್ಷರ ಪ್ರಕಾಶನ, ಹೆಗ್ಗೋಡು.

೫. ಕನ್ನಡ - ಕನ್ನಡ - ಇಂಗ್ಲೀಷ್ ನಿಘಂಟು, ಸಂಪುಟ ೧, ಫರ್ಡಿನಾಂಡ್ ಕಿಟೆಲ್, ಬಾಸೆಲ್ ಮಿಷನ್ ಬುಕ್ ಅಂಡ್ ಟ್ರಸ್ಟ್ ಡಿಪಾಸಿಟರಿ, ಮಂಗಳೂರು (೧೮೯೪)

೬. ಗೀತಾರ್ಥ ಸಂಗ್ರಹ ಕವಚ, ಲೇ. : ಶೇಟ್ಟಲೂರು ಶ್ರೀನಿವಾಸ ರಂಗಾಚಾರ್ಯ, ಸೋಸಲೆ ವ್ಯಾಸರಾಯ ಮಠದ ಆಸ್ಥಾನ ವಿದ್ವಾನ್.

೭. ಚಾಮರಸನ ಪ್ರಭು ಲಿಂಗಲೀಲೆ, ಡಾ|| ಎಸ್. ವಿದ್ಯಾಶಂಕರ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೮. ಪ್ರಭುದೇವರ ಷಟ್‌ಸ್ಥಲದ ವಚನಗಳು, ಡಾ|| ಎಲ್. ಬಸವರಾಜು, ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು.

೯. ಡಾ|| ಬಾಬಾಸಾಹೇಬ್ ಅಂಬೇಡ್ಕರ್, ಪ್ರ.ಸಂ. : ಡಾ|| ಎಂ.ಎಂ. ರಾಜಶೇಖರಯ್ಯ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ.

೧೦. ಬಸವಣ್ಣನವರ ವಚನ ಸಂಪುಟ, ಡಾ|| ಎಂ.ಎಂ. ಕಲಬುರ್ಗಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

೧೧. ಭಾರತೀಯ ಸಮಾಜ, ಚ.ನ. ಶಂಕರ್ ರಾವ್, ಜೈ ಭಾರತ್ ಪ್ರಕಾಶನ, ಮಂಗಳೂರು.

೧೨. ವಚನ ಕಮ್ಮಟ, ಕೆ. ಮರುಳಸಿದ್ದಪ್ಪ ಮತ್ತು ಕಿ.ರಂ. ನಾಗರಾಜ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೧೩. ವಚನ ಪರಿಭಾಷಾ ಕೋಶ, ಡಾ|| ಎಸ್. ವಿದ್ಯಾಶಂಕರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

೧೪. ವಚನ ಸಾವಿರ, ಓ.ಎಲ್. ನಾಗಭೂಷಣ ಸ್ವಾಮಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೫. ಸಮಾಜ ಶಾಸ್ತ್ರದ ತತ್ತ್ವಗಳು, ಎಸ್.ಜಿ. ಹಿರೇಮಠ, ವಿದ್ಯಾನಿಧಿ ಪ್ರಕಾಶನ, ಗದಗ.

೧೬. ಸಮಾಜಶಾಸ್ತ್ರದ ಪ್ರಾಥಮಿಕ ತತ್ತ್ವಗಳು ಮತ್ತು ಸಾಮಾಜಿಕ ಚಿಂತನೆ, ಚ.ನ. ಶಂಕರ್‌ರಾವ್, ಜೈ ಭಾರತ್ ಪ್ರಕಾಶನ, ಮಂಗಳೂರು.

೧೭. ಸಂಶೋಧನಾ ಚತುರ್ಮುಖಿ, ಡಾ|| ಬಿ.ವ್ಹಿ. ಶಿರೂರ, ವಿದ್ಯಾನಿಧಿ ಪ್ರಕಾಶನ, ಗದಗ.

೧೮. ಸಂಕ್ಷಿಪ್ತ ಕನ್ನಡ ನಿಘಂಟು, ಪ್ರ.ಸಂ. : ಡಿ.ಎಲ್. ನರಸಿಂಹಾಚಾರ್, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೧೯. ಸ್ಪೀಕಿಂಗ್ ಆಫ್ ಶಿವ (Speaking of Shiva), A.K. Ramanjuan, Penguin Group, England.

೨೦. ಶರಣ ತತ್ತ್ವ ಚಿಂತನ, ಗೊ.ರು. ಚನ್ನಬಸಪ್ಪ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಮೈಸೂರು.

೨೧. ಶರಣ ತತ್ತ್ವ ವಿವೇಚನೆ, ಪ್ರೊ. ಬಿ. ವಿರೂಪಾಕ್ಷಪ್ಪ, ಬಸವ ಸಮಿತಿ, ಬಸವ ಭವನ, ಬೆಂಗಳೂರು.

೨೨. ಶಿವಶರಣೆಯರ ವಚನ ಸಂಪುಟ, ಡಾ|| ವೀರಣ್ಣ ರಾಜೂರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

* * *